ಐಕ್ಯರಂಗ

ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ವಾರಪತ್ರಿಕೆ

ಸಂಪುಟ 19 | ಸಂಚಿಕೆ 8 | ಫೆಬ್ರುವರಿ 17-23, 1997 | ಬೆಲೆ ರೂ. 2.00

ವಿಧಾನ ಮಂಡಲದ ಜಂಟಿ ಅಧಿವೇಶನದಲ್ಲಿ ರಾಜ್ಯಪಾಲರ ಭಾಷಣ

ಜನತೆಯ ಮೇಲೆ ಧಾಳಿ ಮಾಡುವ ಸಂಕಲ್ಪದ ಘೋಷಣಾ ಪತ್ರ

ಪ್ರತಿವರ್ಷದಲ್ಲಿ ನಡೆಯುವ ಮೊದಲ ವಿಧಾನ ಮಂಡಲದ ಅಧಿವೇಶನದಲ್ಲಿ ತಪ್ಪದೇ ನಡೆಯುವ ಕ್ರಿಯೆ ರಾಜ್ಯಪಾಲರ ಭಾಷಣ. ರಾಜ್ಯಪಾಲರ ಭಾಷಣವೆಂದರೆ ಆಯಾ ವರ್ಷದ ಸರಕಾರದ ನೀತಿಯ ಘೋಷಣಾ ಪತ್ರ.

ಕೇಂದ್ರದಲ್ಲಿ ಜನತಾದಳ ನೇತೃತ್ವದ ಸಂಯುಕ್ತ ರಂಗ ಸರಕಾರ ಅಧಿಕಾರ ವಹಿಸಿಕೊಂಡ ನಂತರ ಅದೇ ಪಕ್ಷದ ರಾಜ್ಯ ಸರಕಾರದ ನೀತಿಗಳ ಘೋಷಣೆಯಲ್ಲಿ ಕಾಂಗ್ರೆ ವಿರೋಧಿ ಜಾತ್ಯಾತೀತ ರಂಗ ಸರಕಾರವೊಂದು ಒದಗಿಸಿರುವ ಉತ್ತಮ ಅವಕಾಶಗಳ ಆಶಾದಾಯಕ ಸೂಚನೆಯೂ ಇದೆ. ಹಾಗೆಯೇ ಆ ಸರಕಾರದ ಪ್ರಮುಖ-ಅವಕಾಶಗಳನ್ನೆಲ್ಲಾ ನುಂಗಿ ಬಿಡುವಷ್ಟು ಪ್ರಮುಖ-ಕುರುಡುತನದ ಪ್ರತಿಫಲನವೂ ಆಗಿದೆ.

ಜಾತ್ಯಾತೀತ ಸರಕಾರವೊಂದು ಅಧಿಕಾರದಲ್ಲಿದೆ ಎಂಬುದನ್ನು ನೆನಪಿಸುವಂತೆ ಭಾರತದ ಸ್ವಾತಂತ್ರ್ಯದ 50ನೇ ವಾರ್ಷಿಕೋತ್ಸವದಲ್ಲಿ ಕರ್ನಾಟಕ ಸರಕಾರ ಜಾತ್ಯಾತೀತತೆ, ಕೋಮು ಸೌಹಾರ್ದ, ಸಾಮಾಜಿಕ ನ್ಯಾಯ ಹಾಗೂ ಕೇಂದ್ರ-ರಾಜ್ಯ ಸಂಬಂಧಗಳ ಮೇಲೆ ಒತ್ತು ನೀಡುತ್ತದೆಂದೂ, ಧಾರ್ಮಿಕ ಮೂಲಭೂತವಾದದ ವಿರುದ್ಧ ಹೋರಾಡುತ್ತದೆಂದೂ ಹೇಳಿದೆ.

ಕೇಂದ್ರದಲ್ಲಿ ಕೇಂದ್ರ-ರಾಜ್ಯ ಸಂಬಂಧಗಳ ಸುಧಾರಣೆ ಬಗ್ಗೆ ಪ್ರಮುಖ ಅಭಿಪ್ರಾಯವಿರುವ ಕಾಂಗ್ರೆಸ್ಸೇತರ ಜಾತ್ಯಾತೀತ ಸರಕಾರವೊಂದು ಅಧಿಕಾರದಲ್ಲಿದೆ ಎಂಬುದರ ಅನುಕೂಲಗಳನ್ನು ಕೂಡಾ ಈ ಭಾಷಣದಲ್ಲಿ ಘೋಷಿತವಾಗಿರುವ ಯೋಜನೆಗಳು ನೆನಸಿಸುತ್ತವೆ. ರಾಜ್ಯದ ಆರ್ಥಿಕ ಅಭಿವೃದ್ಧಿಗೆ ಅವಶ್ಯವಾದ ಮೂಲಭೂತ ಸೌಲಭ್ಯಗಳನ್ನು ಕಬಳಿಸಲು ಕೇಂದ್ರ ಸರಕಾರ ಸಹಾಯ ಹಸ್ತ ಚಾಚಿ ಹಲವಾರು ರೈಲ್ವೇ ಯೋಜನೆಗಳನ್ನು ಈಗಾಗಲೇ ಯೋಜಿಸಿರುವುದು, ಆರಂಭಿಸಿರುವುದರ ಜೊತೆಗೆ ಹಲವಾರು ರಸ್ತೆ ಸಾರಿಗೆ, ನೀರಾವರಿ ಯೋಜನೆಗಳು, ಮಾರುಕಟ್ಟೆ ಅಭಿವೃದ್ಧಿಗೆ ಕೇಂದ್ರ ಸರಕಾರದ ನೆರವು ದೊರೆಯಲಿದೆ. ಕಾಂಗ್ರೆ ಕೇಂದ್ರ ಸರಕಾರದಿಂದ ನಿರೀಕ್ಷಿಸಲಾಗದಂತಹ ಪ್ರಮಾಣದಲ್ಲಿ ಈ ನೆರವು ರಾಜ್ಯಕ್ಕೆ ದೊರೆತಿದೆ.

ರಸ್ತೆಗಳ ಬಗೆಗಿನ ಕೆಲವು ಹೊಸ ಯೋಜನೆಗಳು

1. ನಬಾರ್ಡ್ ಸಹಾಯದಿಂದ 50 ಕೋಟಿ ರೂ.ಗಳ ಗ್ರಾಮೀಣ ರಸ್ತೆಗಳು.
2. ಚಿತ್ರದುರ್ಗ-ಸೊಲ್ಲಾಪುರ ರಾಷ್ಟ್ರೀಯ ಹೆದ್ದಾರಿ(13)ಯನ್ನು ದ್ವಿ ಮಾರ್ಗ ರಸ್ತೆಯನ್ನಾಗಿ ಮಾಡುವುದು.
3. ರಾಷ್ಟ್ರೀಯ ಹೆದ್ದಾರಿ 4 ಹಾಗೂ 7ರ ನಡುವೆ ಸಂಪರ್ಕ ಆರ್ಥಿಕ ಪ್ರಾಮುಖ್ಯತೆಯ ಯೋಜನೆಗಳಡಿಯಲ್ಲಿ.
4. ಬೆಂಗಳೂರು ಒಳ ವೃತ್ತ ರಸ್ತೆಗೆ ರಕ್ಷಣಾ ಇಲಾಖೆಯಿಂದ ಭೂಮಿ ಬಿಡುಗಡೆ.

ನೀರಾವರಿಯಲ್ಲಿ

1. ಕೃಷ್ಣಾ ಮೇಲ್ದಂಡೆಯ ವಿವಿಧ ಮಧ್ಯಮ ಪ್ರಮಾಣದ ಯೋಜನೆಗಳಿಗೆ 143.90 ಕೋಟಿ ನಬಾರ್ಡ್ ನೆರವು.

ಜಿ.ಎಸ್.ನಾಗರಾಜ್

2. ಬೆಣ್ಣೆ ತೊರೆ ಯೋಜನೆಗೆ 5- ಕೋಟಿ ನೆರವು.
3. 122.50 ಕೋಟಿ ರೂ. ನೀರಾವರಿ ಯೋಜನೆಗಳನ್ನು ವೇಗಗೊಳಿಸುವ ಯೋಜನೆಯಲ್ಲಿ ಕೃಷ್ಣಾ ಯೋಜನೆಗಳಿಗೆ ಸಾಲ.

ಇತ್ಯಾದಿ.

ಮಾರುಕಟ್ಟೆ ಅಭಿವೃದ್ಧಿಗೆ

90 ಕೋಟಿ ರೂ. ವೆಚ್ಚದಲ್ಲಿ 500 ಗ್ರಾಮೀಣ ಮಾರುಕಟ್ಟೆಗಳ ಅಭಿವೃದ್ಧಿ.

230 ಕೋಟಿ ರೂ. ವೆಚ್ಚದಲ್ಲಿ ಬೆಂಗಳೂರಿನಲ್ಲಿ ಮಹಾ ಮಾರುಕಟ್ಟೆ ಹಾಗೂ ಏಳು ಉಪ ಮಾರುಕಟ್ಟೆಗಳು.

ಇವು ಕೇಂದ್ರದ ಸಂಯುಕ್ತ ರಂಗ ಸರಕಾರದ ಬಜೆಟ್‌ನಿಂದ ಹೊಮ್ಮಿರುವಂತಹವು.

ಇವುಗಳ ಜೊತೆಗೆ ಕೇಂದ್ರ ಪ್ರಾಯೋಜಿತ ಯೋಜನೆಗಳನ್ನು ರಾಜ್ಯ ಸರಕಾರದ ಯೋಜನೆಗಳನ್ನಾಗಿ ಮಾಡುವ ಪ್ರಯತ್ನ ಇವು. ರಾಜ್ಯ ಸರಕಾರಗಳಿಗೆ ಹೆಚ್ಚು ಅಧಿಕಾರವನ್ನು ನೀಡುವ ಮೂಲಕ ಹೊಸ ಪ್ರವೃತ್ತಿಯ ಆರಂಭವನ್ನು ಸೂಚಿಸುವಂತಹವು. ಈ ಸ್ವಾಗತಾರ್ಹ ಪ್ರವೃತ್ತಿ ಇನ್ನೂ ತೀವ್ರಗೊಳ್ಳಬೇಕಾಗಿದೆ, ವಿಸ್ತಾರಗೊಳ್ಳಬೇಕಾಗಿದೆ. ಸರ್ಕಾರಿಯಾ ಆಯೋಗದ ಶಿಫಾರಸುಗಳ ಜಾರಿ, ಮತ್ತಷ್ಟು ಮಾರ್ಪಾಡುಗಳ ಮೂಲಕ ರಾಜ್ಯಗಳಿಗೆ ಹೆಚ್ಚು ಅಧಿಕಾರ ವಿಕೇಂದ್ರೀಕರಣವಾಗಬೇಕಾಗಿದೆ. ಈ ದಿಶೆಯಲ್ಲಿ ಹೆಚ್ಚಿನ ವೇಗದಲ್ಲಿ ಕ್ರಿಯೆ ಜರುಗಲು ರಾಜ್ಯ ಸರಕಾರ ತನ್ನ ಹಿತ ದೃಷ್ಟಿಯಿಂದಲೇ ಒತ್ತಾಯ ಮಾಡಬೇಕಾಗಿದೆ. 1983 ರಲ್ಲಿ ರಾಜ್ಯದಲ್ಲಿ ಅಧಿಕಾರಕ್ಕೆ ಬಂದಾಗಿನಿಂದಲೂ ಜನತಾ ಪಕ್ಷ ಮಾಡಿದ ಪ್ರಯತ್ನಗಳ ಮುಂದುವರಿಕೆಯಾಗಿ ರಾಜ್ಯಪಾಲರ ಭಾಷಣದಲ್ಲಿ ಇನ್ನೂ ಅಧಿಕಾರ ವಿಕೇಂದ್ರೀಕರಣಕ್ಕೆ ಇನ್ನೂ ಹೆಚ್ಚಿನ ಒತ್ತು ಅಗತ್ಯವಾಗಿತ್ತು.

1996-97ರ ಯೋಜನೆ ಕಡಿತ

ಈ ಎಲ್ಲಾ ಯೋಜನೆಗಳನ್ನು ನಿರೂಪಿಸಿರುವ ರಾಜ್ಯಪಾಲರ ಭಾಷಣ ರಾಜ್ಯದ ವಾರ್ಷಿಕ ಯೋಜನೆಯಲ್ಲಿ 700 ಕೋಟಿ ರೂ.ಗಳಷ್ಟು ಕೊರತೆಯಾಗಿರುವುದನ್ನು ಇದರಿಂದ ರಾಜ್ಯದ ಅಭಿವೃದ್ಧಿಗೆ ತೀವ್ರ ಪೆಟ್ಟಾಗಿರುವುದನ್ನು ಸೂಚಿಸಲೂ ಮರೆತಿದೆ. ಶೇ. 18ರಷ್ಟು ತೀವ್ರ ಮಟ್ಟದ ಯೋಜನೆಯ ಕೊರತೆಯುಂಟಾಗಿದೆ. ಈ ಯೋಜನಾ ಕೊರತೆಯನ್ನು ನೀರಾವರಿ, ವಿದ್ಯುತ್ ಯೋಜನೆಗಳ ಹೊರತಾಗಿ ಇತರ ಪ್ರಮುಖವಲ್ಲವೆಂದು ಸರಕಾರ ಭಾವಿಸಿರುವ ವಿಭಾಗಗಳಲ್ಲಿ - ಶಾಲೆ, ಆಸ್ಪತ್ರೆ, ರಸ್ತೆಗಳಲ್ಲಿ ಸಮಾಜ ಕಲ್ಯಾಣ ಯೋಜನೆಗಳಿಂದ ಕಸಿದುಕೊಳ್ಳುವ ಮೂಲಕ ಆಗಿದೆ. 96-97ರಲ್ಲಿ ಯೋಜನೆಯನ್ನು ರೂಪಿಸುವಾಗ ಅತ್ಯಂತ ಹೆಚ್ಚಿನ ಪ್ರಮಾಣದ ಯೋಜನೆಯ ಬಗ್ಗೆ ಕೇಂದ್ರ ಸರಕಾರ ಅನುಮತಿ ಪಡೆದಿದ್ದೇವೆಂದು ಜನರಲ್ಲಿ ಪೊಳ್ಳು ನಿರೀಕ್ಷೆಗಳನ್ನು ಮೂಡಿಸಿದ್ದ ಸರಕಾರ ಇಂದು ಯೋಜನೆಗಳಲ್ಲಿ ಕಡಿತವಾಗಿರುವುದರ ಬಗ್ಗೆ ಯಾವುದೇ ಆತಂಕವೂ ಇಲ್ಲದಂತೆ ಸಾರಿದೆ. ಇದರ ಮೂಲಕ 96-97ರಲ್ಲಿ ರಾಜ್ಯದ ಯೋಜನೆ 95-96ರ ಯೋಜನೆಯ ನಿಜ ಸಾಧನೆಗಿಂತ ಕಡಿಮೆಯಾಗಲಿದೆ.

ಯೋಜನೆಯಲ್ಲಿ ಕಡಿತವಾಗಿರುವುದಾದರೂ ಏತಕ್ಕೆ? ರಾಜ್ಯ ಸರಕಾರ ಕೇಂದ್ರ ಸರಕಾರದೊಡನೆ ವಾರ್ಷಿಕ ಯೋಜನೆಯನ್ನು ಅಂತಿಮಗಳಿಸುವಾಗ ಒಪ್ಪಿಕೊಂಡಿದ್ದ ಆಂತರಿಕ ಸಂಪನ್ಮೂಲ ಸಂಗ್ರಹದ ಗುರಿಯನ್ನು ತಲುಪಲಾಗಲಿಲ್ಲವೆಂಬುದು ಸರಕಾರ ನೀಡುತ್ತಿರುವ ಕಾರಣ. ಈ ಹೆಚ್ಚಿನ ಸಂಪನ್ಮೂಲದ ನಿರೀಕ್ಷೆ ಇದ್ದದ್ದು ವಿದ್ಯುತ್ ಮಂಡಲಿ ಹಾಗೂ ಸಾರಿಗೆ ನಿಗಮದಿಂದ ಎಂದು ಅರ್ಥ ಮಂತ್ರಿಗಳ ಹೇಳಿಕೆಗಳು.

ಅಂದರೆ 96-97ರ ಯೋಜನೆಯನ್ನು 4300 ಕೋಟಿಗಳಷ್ಟು ನಿಗದಿಪಡಿಸಿದ್ದರಲ್ಲಿ ವಿದ್ಯುತ್ ದರ ಹಾಗೂ ಸಾರಿಗೆ ದರಗಳ ಹಾಗೆಯೇ ನೀರಾವರಿ ದರಗಳ ತೀವ್ರ ಏರಿಕೆಯ ನಿರೀಕ್ಷೆ ಅಡಗಿತ್ತು. ರಾಜ್ಯದ ಜನತೆಯ ಪ್ರತಿಭಟನೆ ಹಾಗೂ ವಿಧಾನ ಮಂಡಲದಲ್ಲಿ ಸಿಪಿಐ(ಎಂ) ಸೇರಿದಂತೆ ಇತರ ವಿರೋಧ ಪಕ್ಷಗಳ ಧರಣಗಳು ಇತ್ಯಾದಿ ವಿರೋಧದಿಂದ ಈ ಉದ್ದೇಶ ಸಾರ್ಥಕವಾಗಲಿಲ್ಲ. ಈಗಾಗಲೇ ಬೆಲೆ ಏರಿಕೆಯಿಂದ ಬಳಲುತ್ತಿರುವಾಗ ಸಾಮಾನ್ಯ ಜನತೆಯಿಂದ ಕಿತ್ತು ತಂದು ರಾಜ್ಯದ ಅಭಿವೃದ್ಧಿಯನ್ನು ಸಾಧಿಸಲು ಯೋಜಿಸಲಾಗಿತ್ತು.

96-97ರಲ್ಲಿ ಸಂಗ್ರಹಿಸಲು ವಿಫಲವಾದ ಈ ಸಂಪನ್ಮೂಲಗಳನ್ನು ಜನಸಾಮಾನ್ಯರಿಂದ

ಪುಟ 4 ಕ್ಕೆ

ಸಕ್ಕರೆ ಬೆಲೆಯೇರಿಕೆ
ಜನಗಳ ಸಂಕಟ ಹೆಚ್ಚಿಸುವ ಕ್ರಮ
ಸಿಪಿಐ(ಎಂ) ಖಂಡನೆ

ರೇಶನ್ ಮೂಲಕ ವಿತರಿಸುವ ಲೆವಿ ಸಕ್ಕರೆಯ ಬೆಲೆಯಲ್ಲಿ ರೂ. 1.45 ಹೆಚ್ಚಳ ಮಾಡಿರುವುದನ್ನು ಸಿಪಿಐ(ಎಂ) ಪೊಲಿಟ್‌ಬ್ಯೂರೋ ವಿರೋಧಿಸಿದೆ. ಇದು ಈಗಾಗಲೇ ಜೀವನಾವಶ್ಯಕ ವಸ್ತುಗಳ ಬೆಲೆಯೇರಿಕೆಗಳಿಂದ ತತ್ತರಿಸಿರುವ ಜನಗಳ ಸಂಕಟಗಳನ್ನು ಇನ್ನಷ್ಟು ಹೆಚ್ಚಿಸಲಿದೆ ಎಂದು ಅದು ಅಭಿಪ್ರಾಯಪಟ್ಟಿದೆ. ಇನ್ನು ಒಂದು ವಾರದಲ್ಲೇ ಸೇರಲಿರುವ ಸಂಸತ್ತನ್ನು ವಿಶ್ವಾಸಕ್ಕೆ ತೆಗೆದುಕೊಳ್ಳದೆ ಈ ಬೆಲೆಯೇರಿಕೆಯನ್ನು ಸರಕಾರ ಮಾಡಿರುವುದು ದೂಷಣೀಯ ಎಂದು ಅದು ಹೇಳಿದೆ.

ರಾಜ್ಯದ ಜನತೆಯಿಂದ ಮೂಡಿ ಬಂದ ಮೊಳಗು
"ಎಚ್ಚರ! ಜನತಾದಳ ಎಚ್ಚರ!!"

ಹಿಂದೆ ರಾಜ್ಯದಲ್ಲಿ ೮ ವಿಧಾನಸಭಾ ಸ್ಥಾನಗಳಿಗೆ ಉಪ ಚುನಾವಣೆಗಳು ನಡೆಧಾಗ ರಾಜ್ಯದಲ್ಲಿ ಇಂದು ಆಳುವ ಪಕ್ಷವಾದ ಜನತಾದಳಕ್ಕೆ ಅದೇ ಪಕ್ಷದವರು ಸಂಸತ್ ಸದಸ್ಯರಾಗಿ ಆಯ್ಕೆಯಾದ ಕೂಡಲೇ ರಾಜೀನಾಮೆ ನೀಡಿ ತೆರವು ಮಾಡಿದ್ದ ೬ ಸ್ಥಾನಗಳಲ್ಲಿ ಕೇವಲ ನಾಲ್ಕನ್ನು ಶತ ಪ್ರಯತ್ನ ಮಾಡಿ ಸೆಣಸಿದಾಗ ಮಾತ್ರ ಗೆಲ್ಲಿಸುವ ಉಳಿದೆರಡನ್ನು ಅವರಿಂದ ಕಸಿದುಕೊಳ್ಳುವ ಮೂಲಕ ಕರ್ನಾಟಕದ ಮತದಾರರು ಎಚ್ಚರದ ಕರೆಗಂಟೆ ಬಾರಿಸಿದ್ದರು.

ನಗರಸಭೆ, ಪುರಸಭೆಗಳ ಚುನಾವಣೆಗಳಲ್ಲಿಯೂ ಜನತಾದಳಕ್ಕೆ ಹೆಚ್ಚು ಸ್ಥಾನಗಳನ್ನಿತ್ತರೂ ಬಹುಮತವನ್ನು ನೀಡದೆ ಮತ್ತೆ ಅದೇ ಕರೆ ಗಂಟೆಯನ್ನೆಳೆದಿದ್ದರು. ನಮಗೆ ದೇಶವನ್ನು ಅಧೋಗತಿಗೆ ತಂದ ಭ್ರಷ್ಟ ಕಾಂಗ್ರೆ ಹಾಗೂ ದೇಶದೆಲ್ಲೆಡೆಯಲ್ಲಿ ಕೋಮುದಂಗೆಗಳ ತಾಂಡವವಾಡಿಸುವ ಬಿಜೆಪಿ ಎರಡೂ ಬೇಡ; ಆದರೆ ಹಾಗೆಂದು ಜನಸಾಮಾನ್ಯರಿಗೆ ಸೌಲಭ್ಯವನ್ನು ಕಲ್ಪಿಸುವ ಹೊಣೆಯನ್ನು ನಿರ್ವಹಿಸದೆ, ಜನತೆಗೆ ನೀವು ನೀಡಿದ ಆಶ್ವಾಸನೆಗಳನ್ನು ಮರೆತು ಮನಸ್ಸಿಗೆ ಬಂದಂತೆ ನಡೆದರೆ ನಾವು ಸುಮ್ಮನೆ ಇರುವುದಿಲ್ಲ ಎಂಬುದೂ ಈ ಎಚ್ಚರಿಕೆಯ ಸ್ವರೂಪ.

ಅದನ್ನು ಸಿಪಿಐ(ಎಂ) ರಾಜ್ಯ ಸಮಿತಿ ತನ್ನ ರಾಜಕೀಯ ನಿರ್ಣಯದಲ್ಲಿ ವಿಶ್ಲೇಷಿಸಿತ್ತು ಮತ್ತು ಎತ್ತಿ ತೋರಿಸಿತ್ತು.

ಇತ್ತೀಚೆಗೆ ಜೆ.ಎಚ್.ಪಟೇಲರ ಸರಕಾರದ ಆರು ತಿಂಗಳನ್ನು ವಿಮರ್ಶಿಸಿದ್ದ ರಾಜ್ಯ ಸಮಿತಿಯೂ ಸರಕಾರವನ್ನು ಎಚ್ಚರಿಸಿತು.

೧. ಈ ಸರಕಾರ ಜನರ ಸಮಸ್ಯೆಗಳ ಬಗ್ಗೆ ಗಮನ ಹರಿಸದೆ ತಮ್ಮ ಪಕ್ಷದೊಳಗಿನ ಆಂತರಿಕ ಕಲಹಗಳಲ್ಲಿ, ಸೌಂದರ್ಯ ಸ್ಪರ್ಧೆಯಂತಹ ಕಾರ್ಯಕ್ರಮಗಳಲ್ಲಿ ವ್ಯರ್ಥ ಕಾಲಹರಣ ಮಾಡಿದೆ.

೨. ಅಂದಿನ ನರಸಿಂಹರಾವ್‌ರವರ ಕೇಂದ್ರ ಸರಕಾರದ ಹೊಸ ಆರ್ಥಿಕ ನೀತಿಗಳನ್ನೇ ರಾಜ್ಯದಲ್ಲಿ ಅಳವಡಿಸುತ್ತಾ ಇದ್ದರೂ ಅದರ ಫಲವಾದ ವಿದ್ಯುತ್ ದರ ಏರಿಕೆ, ನೀರಿನ ದರ, ಹಾಲಿನ ದರ ಏರಿಕೆಗಳನ್ನು ಲೋಕಸಭಾ ಚುನಾವಣೆಯವರೆಗೂ ಮುಂದೂಡಿ ಚುನಾವಣೆಯಾದ ಕೂಡಲೇ ಒಂದಾದ ಮೇಲೊಂದರಂತೆ ದರ ಏರಿಕೆಗಳನ್ನು ಮಾಡುತ್ತಾ ಬಂದಿದೆ. ಮುಂದೆಯೂ ಮತ್ತೊಮ್ಮೆ ವಿದ್ಯುತ್ ದರ, ಬಸ್ ಪ್ರಯಾಣ ದರ, ಶಿಕ್ಷಣ ಶುಲ್ಕ, ನೀರಾವರಿ ದರಗಳನ್ನು ಏರಿಸುವ ಘೋಷಣೆ ಮಾಡಿದೆ.

೩. ಜನತಾದಳ ನೇತೃತ್ವದಲ್ಲಿರುವ ಸಂಯುಕ್ತ ರಂಗ ಕೇಂದ್ರ ಸರಕಾರ ಆಹಾರ ವಸ್ತುಗಳ ಬೆಲೆ ಏರಿಕೆಯನ್ನು ತಡೆಗಟ್ಟದಿರುವುದು ಹಾಗೂ ತಾನೇ ಬೆಲೆ ಏರಿಸುತ್ತಿರುವುದು.

೪. ಹಿಂದಿನ ಹತ್ತಾರು ವರ್ಷಗಳಲ್ಲಿ ತೀವ್ರ ಬೆಲೆ ಏರಿಕೆಯಿಂದಾಗಿ ಜನರು ಕಷ್ಟಕ್ಕೊಳಗಾಗಿದ್ದರೂ ಕನಿಷ್ಟ ಕೂಲಿ ಏರಿಸದಿರುವುದು, ಪತಿತರ, ಮನೆ, ವಸತಿ ಮೊದಲಾದ ಬಡತನ ಪರಿಹಾರ ಕಾರ್ಯಕ್ರಮಗಳಲ್ಲಿ ಗೊಂದಲ, ಅತೀವ ಭ್ರಷ್ಟಾಚಾರ.

೫. ರಾಜ್ಯದ ಅಭಿವೃದ್ಧಿಯ ಬಗ್ಗೆ ಯಾವುದೇ ಹೊಸ ಯೋಜನೆಯಿಲ್ಲದ್ದು, ಯೋಜನೆಯಲ್ಲಿ ಏಳು ನೂರು ಕೋಟಿ ಕಡಿತದಿಂದಾಗಿ ರಸ್ತೆ, ಸೇತುವೆ, ಶಾಲೆ, ಆಸ್ಪತ್ರೆಗಳ ದುರವಸ್ಥೆ ಬಗ್ಗೆ ಜನರ ಅಸಂತೃಪ್ತಿ.

ಪುಟ 2 ನೋಡಿ

ಹೆಜ್ಜಾಲ ಗೋಲೀಬಾರ್ ಘಟನೆ
ವಿಳಂಬ ನೀತಿಯ ಖಂಡನೆ

ಫೆ.3 ರಂದು ಹೆಜ್ಜಾಲದಲ್ಲಿ ನಡೆದ ಗೋಲೀಬಾರ್‌ನ್ನು ಖಂಡಿಸಿದ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷ ನ್ಯಾಯಾಂಗ ತನಿಖೆ ಆಗಬೇಕೆಂದೂ, ಜತೆಯಲ್ಲಿ ಸೂಪರಿಂಟೆಂಡೆಂಟ್ ಆಫ್ ಪೋಲೀಸ್ ನಾರಾಯಣ ಗೌಡ ಮತ್ತಿತರ ಪೋಲೀಸ್ ಅಧಿಕಾರಿಗಳನ್ನು ಅಮಾನತ್ತು ಮಾಡಬೇಕೆಂದೂ ಮುಖ್ಯ ಮಂತ್ರಿಗಳಿಗೆ ಮನವಿ ಕೊಟ್ಟಿತ್ತು. ಮುಖ್ಯಮಂತ್ರಿಗಳು ಚುನಾವಣಾ ಕಾಲದಲ್ಲಿ ಕ್ರಮ ತೆಗೆದು ಕೊಳ್ಳಲಾಗುವುದಿಲ್ಲ ಎಂದು ಹೇಳಿದ್ದರು. ಈಗ ಚುನಾವಣಾ ಪ್ರಕ್ರಿಯೆ ಮುಗಿದಿದ್ದು, ಸರಿಯಾದ ರೀತಿಯಲ್ಲಿ ತನಿಖೆ ನಡೆಸಲು ಅನುಕೂಲವಾಗುವಂತೆ ಈ ತಕ್ಷಣ ಸಂಬಂಧಪಟ್ಟ ಪೋಲೀಸ್ ಅಧಿಕಾರಿಗಳನ್ನು ಅಮಾನತ್ತಿನಲ್ಲಿ ಇರಿಸಬೇಕೆಂದು ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಸೂರ್ಯನಾರಾಯಣ ರಾವ್ ಒತ್ತಾಯಿಸಿದ್ದಾರೆ.

ಬಿಡದಿ ಪೋಲೀಸರು ವಿನಾ ಕಾರಣ, ಬೇಜವಾಬ್ದಾರಿ ಗೋಲೀಬಾರ್ ಮಾಡಿದ್ದಲ್ಲದೆ, ಬಂಧಿತರು ಬಿಡುಗಡೆ ಆಗಬಾರದೆಂದು ಪಬ್ಲಿಕ್ ಪ್ರಾಸಿಕ್ಯೂಟರ್‌ಗೆ ಪೋಲೀಸ್ ಡೈರಿ ನೀಡುತ್ತಿಲ್ಲ. ಈ ಹಿನ್ನೆಲೆಯಲ್ಲಿ ಜಾಮೀನು ಅರ್ಜಿ ವಿಚಾರಣೆ ಆಗುತ್ತಿಲ್ಲ. ಸಂಬಂಧ ಪಟ್ಟ ಪೋಲೀಸ್ ಅಧಿಕಾರಿಗಳು ಈ ಕೂಡಲೇ ಪೋಲೀಸ್ ಡೈರಿ(ಕೇಸ್ ಡೈರಿ)ಯನ್ನು ಪಬ್ಲಿಕ್ ಪ್ರಾಸಿಕ್ಯೂಟರ್‌ಗೆ ನೀಡಿ, ವಿಳಂಬ ನೀತಿಯನ್ನು ಕೈ ಬಿಡಬೇಕೆಂದು ಅವರು ಒತ್ತಾಯಿಸಿದ್ದಾರೆ.

ಜಾಮೀನು ಪಡಕೊಳ್ಳುವುದು ಅವರ ಹಕ್ಕು. ಅದರ ಪರಿಪಾಲನೆಗೆ ಪೋಲೀಸ್ ಇಲಾಖೆ ಅಡ್ಡಿ ಮಾಡುತ್ತಿದೆ ಎಂದಿರುವ ಅವರು ಈ ಬಗ್ಗೆ ಸರಕಾರ ಕೂಡಲೇ ಕ್ರಮ ಕೈಗೊಳ್ಳಬೇಕು, ರಾಜ್ಯಪಾಲರ ಭಾಷಣದಲ್ಲೂ ಹೆಜ್ಜಾಲ ಘಟನೆಯ ಬಗ್ಗೆ ಪ್ರಸ್ತಾವ ಇಲ್ಲದುದನ್ನು ಗಮನಿಸಿದರೆ ಸರಕಾರದ ನಿರ್ಲಕ್ಷ್ಯ ಭಾವನೆ ವ್ಯಕ್ತವಾಗುತ್ತದೆ. ಇದನ್ನು ಹೋಗಲಾಡಿಸಬೇಕು ಎಂದೂ ಅವರು ಆಗ್ರಹ ಪಡಿಸಿದ್ದಾರೆ.

ವಿ.ಪಿ.ಕುಲಕರ್ಣಿ

ಕನಿಷ್ಟ ಸೌಲಭ್ಯಗಳಿಗಾಗಿ ಬೀಡಿ ಕಾರ್ಮಿಕರ ಧೀಮಂತ ಹೋರಾಟ

ಬೆಳಗಾವಿ ಜಿಲ್ಲೆಯ ರಾಮದುರ್ಗ ವಿಲಾಸ ಬೀಡಿ ಕಾರ್ಖಾನೆಯ ಕಾರ್ಮಿಕರು ಕಳೆದ ಏಳು ತಿಂಗಳಿಂದ ಹೋರಾಟದ ಕಣದಲ್ಲಿದ್ದಾರೆ. ಮಾಲೀಕ ಕಾನೂನು-ಕಟ್ಟಳೆಗಳನ್ನು ಲೆಕ್ಕಿಸದೆ ಕಾರ್ಖಾನೆ ಮುಚ್ಚಿ ತನ್ನ ಬಾಡಿಗೆ ಹಿಂಬಾಲಕರ ಮೂಲಕ ಎಷ್ಟೇ ಬೆದರಿಸಿದರೂ, ಆಮಿಷ ಒಡ್ಡಿದರೂ, ಒಂದು ಹೊತ್ತಿನ ಊಟಕ್ಕೂ ಪರದಾಡುವ ಸ್ಥಿತಿ ಬಂದರೂ ಕಾರ್ಮಿಕರು ಹೋರಾಟ ಮುಂದುವರಿಸುತ್ತಿದ್ದಾರೆ. ಈ ಅವಧಿಯಲ್ಲಿ ಔಷಧೋಪಚಾರಕ್ಕೆ ಹಣವಿಲ್ಲದೆ ತೀರಿಕೊಂಡ ರಮೇಜಾ ಯಾದವಾಡ ಎಂಬ ಬೀಡಿ ಕಾರ್ಮಿಕಳು ಈ ಕಾರ್ಮಿಕರ ಧೈರ್ಯ ಸ್ಥೈರ್ಯದ ಪ್ರತೀಕವಾಗಿ ಬಿಟ್ಟಿದ್ದಾಳೆ. ತನ್ನ ಕೊನೆ ಗಳಿಗೆಯಲ್ಲೂ ಆಕೆಯ ಆಶಯ 'ಹೋರಾಟ ಮುಂದುವರಿಸಿ!' ಕರ್ನಾಟಕದ ಒಂದು ಮೂಲೆಯಲ್ಲಿ ನಮ್ಮ ಸ್ವಾತಂತ್ರ್ಯದ ಐವತ್ತನೇ ವರ್ಷದಲ್ಲಿ ಕಾನೂನು ನೀಡಿದ ಕನಿಷ್ಟ ಸೌಲಭ್ಯಗಳಿಗಾಗಿಯೂ ತಿಂಗಳು ಗಟ್ಟಲೆ ಒಂದು ಬಡ ಅಸಂಘಟಿತ ದುಡಿಯುವ ಜನರ ವಿಭಾಗ ಎಂತಹ ಹೋರಾಟ ನಡೆಸಬೇಕಾಗುತ್ತದೆ ಎಂಬ ಕಟುವಾಸ್ತವತೆಯತ್ತ ಗಮನ ಸೆಳೆಯುವ ಒಂದು ವರದಿ.

ಪ್ರತಿವರ್ಷ ಬರುವ ದೀಪಾವಳಿ ಹಬ್ಬದ ದಿನ ರಾಮದುರ್ಗ(ಬೆಳಗಾವಿ ಜಿಲ್ಲೆ)ದ ಬೀಡಿ ಕಾರ್ಮಿಕರು ಬೋನಸ್ ರೂಪವಾಗಿ ನಿತ್ಯದ ತಮ್ಮ ಕೂಲಿಯ ಜೊತೆಗೆ ಒಂದು ಸಾಧಾರಣ ಹ್ಯಾಂಡ್‌ಲೂಂ ಸೀರೆ ಹಾಗೂ ಜೊತೆಗೆ 20ರೂಗಳನ್ನು ಬಗಲಲ್ಲಿ ಅವುಚಿಕೊಂಡು ಬರುವುದು ಸುಮಾರು 20 ವರ್ಷಗಳಿಂದ ನಡೆದು ಬಂದಿತ್ತು. ಕನಿಷ್ಟ ಕೂಲಿ ಪ್ರಾವಿಡೆಂಟ್‌ಫಂಡ್, ಗುರುತಿನ ಚೀಟಿ ಇವಾವ ಗಂಧ ಗಾಳಿಯೂ ಇರಲಿಲ್ಲ.

1991 ನವೆಂಬರ್‌ನಲ್ಲಿಯೂ ಪ್ರತಿಸಲದಂತೆ ಕಾರ್ಮಿಕರು ಸೀರೆಯ ನಿರೀಕ್ಷೆಯಲ್ಲಿದ್ದರು. ಆದರೆ ಖಾತೂನಮಾ ಮುಲ್ಲಾ, ಇಮಾಂಬಿ ದಮಾದಾರ, ಇಮಾಂಬಿ ಮುಲ್ಲಾ ಈ ಮೂವರು ಸೀರೆಯನ್ನು ನಿರಾಕರಿಸಿ ಕಾನೂನಿನನ್ವಯ ತಮಗೆ ಸಲ್ಲಬೇಕಾದ ಬೋನಸ್‌ಗೆ ಆಡಳಿತ ವರ್ಗವನ್ನು ಒತ್ತಾಯಿಸಿದರು. ಈ ಒತ್ತಾಯ ರಾಮದುರ್ಗದಲ್ಲಿ ಹೊಸ ಅಲೆಯನ್ನೇ ಎಬ್ಬಿಸಿತು. ಪಟ್ಟಭದ್ರರು ನಿದ್ರೆಯಿಂದೆದ್ದು ಈ ಕೂಗನ್ನು ಹೊಸಕಿ ಹಾಕಲು 'ಧರ್ಮಯುದ್ಧ'ವನ್ನೇ ಸಾರಿದರು. ಸಂಘಟನೆಯ ಮುಖಂಡತ್ವ ವಹಿಸಿದವರು ಮುಸ್ಲಿಮರಲ್ಲದೇ ಇರುವುದರಿಂದ ಈ ಸಂಘಟನೆಯೇ ಕಾರ್ಮಿಕರ ತುತ್ತನ್ನು ಕಸಿಯುವ ಪ್ರಯತ್ನ ಎಂದು ಅಪಪ್ರಚಾರ ಆರಂಭವಾಯಿತು. ಕಾರ್ಖಾನೆಯ ಗೇಟ್ ಎದುರು ಹೋಗಿ ಮುಖಂಡರನ್ನು ಮನಸ್ವೀ ತೆಗಳಲಾಯಿತು.

ಈ ಮೂವರು ಮಹಿಳಾ ಬೀಡಿ ಕಾರ್ಮಿಕರ ಬೇಡಿಕೆಯ ಹಿಂದೆ ಆರು ವರ್ಷಗಳ ಸಂಘಟನಾ ಶ್ರಮದ ಹಿನ್ನೆಲೆಯಿದ್ದುದರಿಂದ ಬೀಡಿ ಕಾರ್ಮಿಕರು ಸಂಘ ಕಟ್ಟಿ ಕೊಳ್ಳದಂತೆ ಮಾಡುವ ಮಾಲಕರ ಪ್ರಯತ್ನ ವಿಫಲವಾಯಿತು.

ರಾಮದುರ್ಗದಲ್ಲಿ ಎರಡು ಬೀಡಿ ಫ್ಯಾಕ್ಟರಿಗಳಲ್ಲಿ ಸುಮಾರು 450 ಬೀಡಿ ಕಾರ್ಮಿಕರು ದುಡಿಯುತ್ತಿದ್ದಾರೆ. 1985-86 ರಲ್ಲಿ ಈ ಪ್ರದೇಶದಲ್ಲಿ ಕೆಲಸ ಮಾಡಲಾರಂಭಿಸಿದ ಕಮ್ಯುನಿಸ್ಟ್ ಪಕ್ಷದ ಕಾರ್ಯಕರ್ತರು ಎಲ್ಲಾ ಕಾನೂನು ಬದ್ಧ ಸೌಲಭ್ಯಗಳಿಂದ ವಂಚಿತರಾದ ಈ ಬಡಕಾರ್ಮಿಕರನ್ನು ಸಂಘಟಿಸಲು ಮನೆ-ಮನೆಗೆ ಅಲೆದಾಡಿದರು. ನಾಲ್ಕು ವರ್ಷಗಳ ಕಾಲದ ಸತತ ಶ್ರಮದಿಂದಾಗಿ ಸಿಐಟಿಯು ಬೀಡಿ ಕಾರ್ಮಿಕ ಸಂಘಟನೆಯ ರಾಜ್ಯ ಮಟ್ಟದ ಮುಖಂಡರು ಮತ್ತು ಧಾರವಾಡದ ಮುಖಂಡರು ಹಾಗೂ ಅಲ್ಲಿನ ಮಹಿಳಾ ಬೀಡಿ ಕಾರ್ಮಿಕರ ನೆರವಿನಿಂದ ಪಿಸ್ತೂಲ್ ಬೀಡಿ ಕಾರ್ಖಾನೆಯಲ್ಲಿ ಕೊನೆಗೂ ಮೇಲೆ ಹೇಳಿದ ಮೂವರು ಮಹಿಳಾ ಬೀಡಿ ಕಾರ್ಮಿಕರು ಪ್ರತಿಭಟನೆಯ ದನಿಯೆತ್ತುವ ಧೈರ್ಯ ಮಾಡಿದರು. ಸಂಘ ಆರಂಭವಾಯಿತು.

ಕಾನೂನಿನ ಪ್ರಕಾರ ಬೋನಸ್ ಕೇಳಿದ ಮೂವರಿಗೂ ಬೋನಸ್ ದೊರೆಯಿತು. ಕೆಲವೇ ದಿನಗಳಲ್ಲಿ ಕನಿಷ್ಟ ಕೂಲಿ ಕೇಳಿ ಫ್ಯಾಕ್ಟರಿಯ ಎದುರು ಬೀಡಿ ಕೊಡದೇ ಕುಳಿತು ಕೊಳ್ಳಲಾಯಿತು. ಮಾಲೀಕ ಅನಿವಾರ್ಯವಾಗಿ ಕನಿಷ್ಟ ಕೂಲಿ ಕೊಡ ಬೇಕಾಯಿತು. ನಂತರದ ಅವಧಿಯಲ್ಲಿ ಇತರ ಬೇಡಿಕೆಗಳಿಗೆ ಅನೇಕ ರೀತಿಯ ಹೋರಾಟ ನಡೆದವು. ಧರಣಿ, ಮುಷ್ಕರ, ಉಪವಾಸ ಸತ್ಯಾಗ್ರಹ, ಮೆರವಣಿಗೆಗಳು ನಡೆದವು. ಧರ್ಮದ ಹೆಸರಿನಲ್ಲಿ ಕೆಲವು ಕಟ್ಟುಪಾಡುಗಳಿಗೆ ಒಳಗಾಗಿದ್ದ ಬುರ್ಖಾಧಾರಿ ಕಾರ್ಮಿಕರು ದಿಟ್ಟತನದಿಂದ ಕೆಂಬಾವುಟಗಳನ್ನು ಹಿಡಿದು ಘೋಷಣೆ ಕೂಗುತ್ತಾ ನ್ಯಾಯಕೇಳುವ ಪರಿಪಾಠ ಆರಂಭಗೊಂಡಿದ್ದು ಎಂದೂ ಮರೆಯಲಾರದ ಸವಿನೆನಪುಗಳಾಗಿ ಉಳಿದವು. ಹೋರಾಟಗಳ ಫಲವಾಗಿ ಕೈತುಂಬ(ಸುಮಾರು 1500 ರೂ.ಗಳಿಂದ ರೂ.2000 ಗಳವರೆಗೆ) ಬೋನಸ್ ದೊರೆತಾಗ ಅವರ ಪ್ರತಿಕ್ರಿಯೆ ಕಂಡು ಸಂಘದ ಸಂಘಟಕರಿಗೆ ಸಾರ್ಥಕತೆ ದೊರೆತಂತಾಯಿತು.

ವಿಲಾಸ ಬೀಡಿ ಕಾರ್ಮಿಕರ ಸಂಘಟನೆ:

ಈ ಬೀಡಿ ಕಾರ್ಮಿಕರ ಸಂಘಟನೆ ಅನುಭವ, ದೊರೆತ ಸೌಲಭ್ಯಗಳು ನಗರದ ಇನ್ನೊಂದು ಬೀಡಿ ಫ್ಯಾಕ್ಟರಿ ವಿಲಾಸ ಬೀಡಿಯಲ್ಲಿ ಪರಿಣಾಮ ಬೀರಿದವು. ಕಾರ್ಮಿಕರು ಗುಂಪು-ಗುಂಪಾಗಿ ರಾತ್ರಿಯಿಡೀ ಕುಳಿತು ನೂರಾರು ಸಭೆ ನಡೆಸಿದರು. ಕೊನೆಯಲ್ಲಿ ಬೆಳಗಾವಿ ಜಿಲ್ಲಾ ಬೀಡಿ ಕಾರ್ಮಿಕರ ಸಂಘ ಸೇರುವ ನಿರ್ಣಯ ಕೈಗೊಂಡರು.

ತನ್ನ ಉದ್ಧಟತನ, ರಾಕ್ಷಸಿ ವರ್ತನೆ ಕಾರ್ಮಿಕ ದ್ರೋಹಿ ನೀತಿಗಳಿಂದ ನಿಪ್ಪಾಣಿಯಲ್ಲಿ ಕುಖ್ಯಾತರಾಗಿದ್ದ ಕುರುಬೆಟ್ಟ ಬಂಧುಗಳು ಈ ವಿಲಾಸ ಬೀಡಿ ಮಾಲೀಕರು. ರಾಮದುರ್ಗದ ತಮ್ಮ ಫ್ಯಾಕ್ಟರಿಯ ಕಾರ್ಮಿಕರು ಕಾರ್ಮಿಕ ಸಂಘ ಸೇರಿದ್ದನ್ನು ಕೇಳಿದೊಡನೆ ತಾನು ಫ್ಯಾಕ್ಟರಿ ಮುಚ್ಚುವ ಬೆದರಿಕೆ ಒಡ್ಡಿದ. ಈ ಬೆದರಿಕೆಯನ್ನು ಯಶಸ್ವಿಯಾಗಿ ಎದುರಿಸಲಾಯಿತು. ಫ್ಯಾಕ್ಟರಿಯಲ್ಲಿ ದುಡಿಯುತ್ತಿದ್ದ 175 ಕಾರ್ಮಿಕರಲ್ಲಿ ಕೇವಲ 35 ಜನರಿಗೆ ಮಾತ್ರ ಫಂಡ್ ಸೌಲಭ್ಯ ಇನ್ನುಳಿದ ಎಲ್ಲ ಕಾರ್ಮಿಕರಿಗೂ ಬೋನಸ್, ಹೆಸರಿನ ಹಾಜರಿ ಪುಸ್ತಕಗಳು, 12-13 ವರ್ಷಗಳಿಂದ ದುಡಿದರೂ ಯಾವುದೇ ದಾಖಲೆಗಳಿಲ್ಲ. ಕನಿಷ್ಟ ಕೂಲಿಯ ವಾಸನೆಯೂ ಇಲ್ಲ. ಬೋನಸ್ ಹೆಸರಿನಲ್ಲಿ ಒಂದು ತಂಬಿಗೆ ಹಾಗೂ ಲೋಟ ಮಾತ್ರ-ಇದು ಸಂಘ ಆರಂಭವಾಗುವ ಮೊದಲಿನ ಪರಿಸ್ಥಿತಿ.

ಕಾರ್ಮಿಕರು ಮಾನಸಿಕವಾಗಿ ಇನ್ನೂ ಪಕ್ವವಾಗದಿರುವುದರಿಂದ ಮಾಲೀಕನಿಗೆ ಕನಿಷ್ಟ ಕೂಲಿಯಲ್ಲಿ ರಿಯಾಯಿತಿ, ಬೋನಸ್‌ನಲ್ಲಿ ರಿಯಾಯಿತಿ, ಫಂಡ್ ಜಾರಿಯಾಗದ ಕಾರ್ಮಿಕರಿಗೆ ಹಂತ-ಹಂತವಾಗಿ ಫಂಡ್ ಜಾರಿ ಇವುಗಳಿಗೆ ಒಪ್ಪಬೇಕಾಯಿತು. ಈ ಹೊಂದಾಣಿಕೆ ತಾತ್ಕಾಲಿಕ ಘಟ್ಟ ಮಾತ್ರವಾಗಿತ್ತು.

1994 ಮಾರ್ಚ್‌ವರೆಗೆ ಈ ಹೊಂದಾಣಿಕೆ ಮುಂದುವರೆದಿತ್ತು. ಕಾರ್ಮಿಕರು ತಮಗೆ ಸಿಗಬೇಕಾದ ಎಲ್ಲಾ ನ್ಯಾಯಬದ್ಧ ಸೌಲಭ್ಯ ಪಡೆಯಲೇ ಬೇಕೆನ್ನುವ ಹಂತ ತಲುಪಿದಾಗ ನಿಗದಿತ ಕನಿಷ್ಟ ಕೂಲಿಗಾಗಿ ಬೇಡಿಕೆ ಸಲ್ಲಿಸಲಾಯಿತು. ಲೋಟ ತಂಬಿಗೆ ಬದಲು ಹಣದ ರೂಪದಲ್ಲಿ ಬೋನಸ್ ಪಡೆಯಲಾಯಿತು.

ಸಂಘ ಒಡೆಯಲು ಕುತಂತ್ರಗಳ ಆರಂಭ:

ಕಾರ್ಮಿಕರನ್ನು ಹಿಡಿತದಲ್ಲಿಟ್ಟುಕೊಳ್ಳಲು ಮಾಲೀಕ ಕೆಲವರನ್ನು ಸಾಕಿಕೊಂಡಿದ್ದನು. ಅವರುಗಳಿಗೆ ಹಣಕಾಸಿನ ಸಹಾಯ ಮಾಡಿ ಬೆದರಿಕೆ ನಡೆಸಲಾಯಿತು. ಬೆದರಿಕೆ, ನಾನಾ ರೀತಿಯ ಒತ್ತಡ, ತಂತ್ರ ಬಳಸಿ ಸಂಘ ಒಡೆಯುವ ಪ್ರಯತ್ನದಲ್ಲಿ ಭಾಗಶಃ ಮಾಲೀಕ ಯಶಸ್ವಿಯಾದ. ಸುಮಾರು 70 ಕಾರ್ಮಿಕರನ್ನು ಒಲಿಸಿಕೊಂಡು ಬೇನಾಮಿ ಹೆಸರಿನಲ್ಲಿ ಇನ್ನೊಂದು ಬೀಡಿ ಕಾರ್ಖಾನೆ ಆರಂಭಿಸಿ ಅಲ್ಲಿ ಸಂಘ ಮುರುಕರಿಗೆ ಕೆಲಸ ಒದಗಿಸಲಾಯಿತು.

ಸಂಘದಲ್ಲಿದ್ದವರಿಗೆ ಕೆಲಸದಲ್ಲಿ ಕಡಿತ ಮಾಡಲಾಯಿತು. ಈ ರೀತಿಯಾಗಿ ಕೂಲಿ ಕಡಿಮೆ ಬರುವಂತೆ ಮಾಡಲಾಯಿತು. ದೌರ್ಜನ್ಯ ಮಿತಿ ಮೀರಿದಾಗ ಕನಿಷ್ಟ ಕೂಲಿ, ಫಂಡ್ ಜಾರಿ, ದಬ್ಬಾಳಿಕೆ ವಿರೋಧಿಸಿ ಜೂನ್ 1994 ರಲ್ಲಿ ಮಾಲೀಕನ ಮನೆ ಎದುರು ನಿಪ್ಪಾಣಿಯಲ್ಲಿ ಧರಣಿ ಸತ್ಯಾಗ್ರಹ ನಡೆಯಿತು. ಸಂಘದ ಮುಖಂಡರಿಂದ 3 ದಿನ ಆಮರಣ ಉಪವಾಸ ಸತ್ಯಾಗ್ರಹ ನಡೆಯಿತು. ಧೋಧೋ ಸುರಿಯುತ್ತಿದ್ದ ಮಳೆಯಲ್ಲೇ ಈ ಪ್ರತಿಭಟನೆ ನಡೆಯಿತು. 4ನೇ ದಿನ ಸ್ಥಳೀಯ ಶಾಸಕ ಮತ್ತಿತರರು ಮಧ್ಯ ಪ್ರವೇಶಿಸಿ ಒಂದು ತಾತ್ಕಾಲಿಕ ಒಪ್ಪಂದ ನಡೆದು ಕನಿಷ್ಟ ಕೂಲಿ ಬಾಕಿ, ಎಲ್ಲರಿಗೂ ಫಂಡ್ ಜಾರಿ ಆಯಿತು. ಸಂಘಟನೆ ತೀವ್ರಗೊಂಡು ಕಾರ್ಮಿಕರ ವಿರುದ್ಧ ಅನ್ಯಾಯಗಳು ಹೆಚ್ಚಿದರೂ ಇದಕ್ಕೂ ಕಾರ್ಮಿಕರು ಬಗ್ಗದಿದ್ದಾಗ ನವೆಂಬರ್ 1, 1994 ರಂದು ಕಾರ್ಖಾನೆ ಮುಚ್ಚಿ ಮಾಲೀಕ ಹೊರಟು ಹೋಗಿಬಿಟ್ಟ. ಯಾವುದೇ ಸೂಚನೆ, ನೋಟೀಸ್ ನೀಡಿರಲಿಲ್ಲ. ಈ ಸಮಯ ಸಂಘದ ಮುಖಂಡರು ವಿಧಾನ ಸಭಾ ಚುನಾವಣೆಗೆ ಸ್ಪರ್ಧಿಸಿ ಪ್ರಚಾರದಲ್ಲಿ ತೊಡಗಿದ ಸಂದರ್ಭವಾಗಿತ್ತು. ಕಾರ್ಮಿಕರು ವಿಚಲಿತರಾಗದೇ ತಹಶೀಲದಾರ ಕಚೇರಿ ಎದುರು ಟೆಂಟ್ ಹಾಕಿ ಧರಣಿ ಸತ್ಯಾಗ್ರಹ ಆರಂಭಿಸಿದರು. ನವೆಂಬರ್ ಡಿಸೆಂಬರ್ ಭಾರಿ ಛಳಿಯೂ ಕಾರ್ಮಿಕರ ಹೋರಾಟದ ಕಾವನ್ನು ಕಡಿಮೆ ಮಾಡಲಿಲ್ಲ. ಕಾರ್ಮಿಕ ಕಚೇರಿಯಲ್ಲಿ ವಿವಾದ ಆರಂಭಿಸಲಾಯಿತು.

ಕಾರ್ಮಿಕರ ಹಸಿವಿನ ಲಾಭ ಪಡೆದುಕೊಂಡು ಅವರನ್ನು ಕೊಳ್ಳುವ ಪ್ರಯತ್ನ ಆರಂಭವಾದವು. ಕಾರ್ಮಿಕರ ಕೆಲವು ಕುಟುಂಬಗಳಲ್ಲಿ ಅಸ್ವಸ್ಥರಿದ್ದುದರ ಬಗ್ಗೆ ಭಾರೀ ಕಾಳಜಿಯನ್ನು ಮಾಲೀಕ ವ್ಯಕ್ತಪಡಿಸಿದ. ಕಾರ್ಮಿಕಳ ಗಂಡನೊಬ್ಬನಿಗೆ ಗ್ಯಾಂಗ್ರೀನ್ ಆಗಿ ಕಾಲು ಕತ್ತರಿಸಿದಾಗ ಖರ್ಚು ವಹಿಸಿಕೊಳ್ಳುವ ಆಮಿಷ ತೋರಿಸಲಾಯಿತು. ಆದರೆ ಇದಾವುದೂ ಕಾರ್ಮಿಕರನ್ನು ಹೋರಾಟದ ಹಾದಿಯಿಂದ ಹಿಂತೆಗೆಸುವಲ್ಲಿ ಸಫಲವಾಗಲಿಲ್ಲ. ಅನಿವಾರ್ಯವಾಗಿ ದಿ 2.1.95 ರಂದು ಕಾರ್ಮಿಕ ಅಧಿಕಾರಿ ಎದುರು ಒಪ್ಪಂದ ನಡೆಯಿತು. ಕಾರ್ಮಿಕ ಅಧಿಕಾರಿ ಶ್ರೀ ಖರಾಡೆಯವರು ಈ ಹೋರಾಟದಲ್ಲಿ ತುಂಬಾ ನೆರವು ನೀಡಿದರು. ಎರಡು ತಿಂಗಳ ಹೋರಾಟ ಅವಧಿಯ ನಷ್ಟವನ್ನು ಮಾಲೀಕ ತುಂಬಿ ಕೊಡಬೇಕಾಯಿತು.

ಕಾರ್ಮಿಕರ ಈ ಯಶಸ್ಸಿನಿಂದ ಕುದಿಯುತ್ತಿದ್ದ ವಿಲಾಸ ಬೀಡಿ ಮಾಲೀಕ ಕಾರ್ಮಿಕರಿಗೆ ಪಾಠ ಕಲಿಸಲು ಕಾಯುತ್ತಿದ್ದ. ಅವನಿಗೆ ಕರಟಕ - ದಮನಕನಂತಿರುವ ಇಬ್ಬರು ಮಾಜಿ ಕಾರ್ಮಿಕ ಅಧಿಕಾರಿಗಳು ತಂತ್ರಗಳನ್ನು ರೂಪಿಸಿಕೊಡಲು ಆರಂಭಿಸಿದರು.

ಚಾರಿತ್ರಿಕ ಹೋರಾಟ ಆರಂಭ

ಏಪ್ರಿಲ್ 15, 1996 ರಂದು ಕಾರ್ಖಾನೆ ಮುಚ್ಚಲಿರುವುದಾಗಿ ಲಿಖಿತ ನೋಟೀಸ್ ನೀಡಿ ದಿ.15.6.96 ರಂದು ಕಾರ್ಖಾನೆ ಮುಚ್ಚಲಾಯಿತು.

ಕಾರ್ಮಿಕ ಕಚೇರಿಯಲ್ಲಿ ವಿವಾದ ಆರಂಭಿಸಲಾಯಿತು. ಲೇಬರ್ ಸೆಕ್ರೆಟರಿಯವರು ದಿ.15.6.96 ರ ಮೊದಲೇ ಅಂದರೆ 12.6.96ರಂದು ಕಾರ್ಖಾನೆ ಮುಚ್ಚಬಾರದೆಂದು ಆಜ್ಞೆ ಹೊರಡಿಸಿದ್ದರು. ಸರಕಾರದ ಈ ಆಜ್ಞೆಗೆ ಮಾಲೀಕ ಕವಡೆ ಕಿಮ್ಮತ್ತೂ ಕೊಡಲಿಲ್ಲ. ಮುಚ್ಚಿದ ಕಾರ್ಖಾನೆ ತೆಗೆಯಲೇ ಇಲ್ಲ. ಸರಕಾರದ ಈ ಆಜ್ಞೆಗೆ ಕೇವಿಯಟ್ ಹಾಕಲಾಯಿತು. ಕಾರ್ಖಾನೆಯನ್ನು ಮುಚ್ಚಬಾರದೆಂದು ಸರಕಾರ ತಿಳಿಸಿದ್ದರೂ ಮುಚ್ಚಿರುವುದು ಸರಕಾರದ ಆಜ್ಞೆಯ ಉಲ್ಲಂಘನೆಯಾಗುವ ಕಾರಣದಿಂದ ಕಾರ್ಮಿಕರು ಮುಚ್ಚಿರುವ ಅವಧಿಗೆ ವೇತನಕ್ಕೆ ಅರ್ಹರು ಎಂದು ಕಾರ್ಮಿಕ ಕಮೀಷನರ್ ಎದುರು ವೇತನ ರಿಕವರಿಗಾಗಿ ಅರ್ಜಿ ಸಲ್ಲಿಸಲಾಯಿತು. ಜೊತೆಗೆ ಸರಕಾರದ ಆಜ್ಞೆ ಉಲ್ಲಂಘಿಸಿರುವುದರಿಂದ ಆಡಳಿತ ವರ್ಗದ ವಿರುದ್ಧ ಕಾನೂನು ಕ್ರಮ ಮಾಡಲು ಅನುಮತಿ ಕೇಳಲಾಯಿತು.

ರಿಕವರಿ ಅರ್ಜಿಯನ್ನು ಮನ್ನಿಸಿ ಲೇಬರ್ ಕಮಿಷನರ್ ಜೂನ್ 15 ರಿಂದ ಆಗಸ್ಟ್ 15 ವರೆಗಿನ ಅವಧಿಯ ವೇತನ ರೂ. 1,62,000 ಗೆ ರಿಕವರಿ ಸರ್ಟಿಫಿಕೇಟ್ ನೀಡಿದರು. ಹಾಗೂ ಲೇಬರ್ ಸೆಕ್ರೆಟರಿಯವರಿಂದ ಪ್ರಾಸಿಕ್ಯೂಷನ್ ಅನುಮತಿಯೂ ದೊರಕಿತು. ರಿಕವರಿ ಸರ್ಟಿಫಿಕೇಟ ಜಾರಿಗಾಗಿ ಬೆಳಗಾಂವಿ ಜಿಲ್ಲಾಧಿಕಾರಿ ಮೂಲಕ ಚಿಕ್ಕೋಡಿ ತಹಶೀಲದಾರರಿಗೆ ಮನವಿ ಸಲ್ಲಿಸಿ ರಿಕವರಿ ಪ್ರಯತ್ನ ಅಂತಿಮ ಹಂತದಲ್ಲಿದ್ದಾಗ, ರಿಕವರಿ ಸರ್ಟಿಫಿಕೇಟ್ ನೀಡುವಾಗ ಕಮಿಷನರರು ಮಾಲೀಕನಿಗೆ ತನ್ನ ವಾದ ಮಂಡಿಸಲು ಅವಕಾಶ ನೀಡಿಲ್ಲವೆಂದು ರಿಕವರಿ ಸರ್ಟಿಫಿಕೇಟ್‌ಗೆ ಹೈಕೋರ್ಟ್ ತಡೆಯಾಜ್ಞೆ ನೀಡಿ ಮಾಲೀಕನಿಗೆ ಅವಕಾಶ ನೀಡಿ ಇನ್ನೊಮ್ಮೆ ಪರಿಸ್ಥಿತಿ ಅವಲೋಕಿಸಿ ಕ್ರಮ ಕೈಗೊಳ್ಳಬೇಕೆಂದು ಆದೇಶ ನೀಡಿತು.

ಐತಿಹಾಸಿಕ ತೀರ್ಪು:

ದಿ.12.6.96 ರಂದು ಫ್ಯಾಕ್ಟರಿ ಮುಚ್ಚಬಾರದಾಗಿ ಸರಕಾರ ನೀಡಿದ ತೀರ್ಪನ್ನು ಪ್ರಶ್ನಿಸಿ ಮಾಲಿಕ ಹೈಕೋರ್ಟ್‌ಗೆ ಅಪೀಲು ಹೋದ. ಬೀಡಿ ಕಾರ್ಖಾನೆಯು ಫ್ಯಾಕ್ಟರಿ ಕಾಯಿದೆಯಡಿಯಲ್ಲಿ ಬರುವುದಿಲ್ಲ, ಈ ಕಾರ್ಮಿಕರಿಗೆ ಕೈಗಾರಿಕಾ ಕಾಯ್ದೆಗಳು ಅನ್ವಯವಾಗುವುದಿಲ್ಲ, ಕೈಗಾರಿಕಾ ವಿವಾದ ಕಾಯ್ದೆಯ 5ಬಿ ತಮಗೆ ಅನ್ವಯಿಸುವುದಿಲ್ಲವೆಂದು ಆಡಳಿತ ವರ್ಗದಿಂದ ಹೈಕೋರ್ಟಿನಲ್ಲಿ ವಾದ ಮಂಡಿಸಲಾಯಿತು. ತೀವ್ರ ವಾದ-ಪ್ರತಿವಾದದ ನಂತರ ಈ ರಿಟ್‌ನ್ನು ಹೈಕೋರ್ಟ್ ತಿರಸ್ಕರಿಸಿತು. ಆಡಳಿತ ವರ್ಗದ ಎಲ್ಲಾ ವಾದಗಳನ್ನು ಹೈಕೋರ್ಟ್ ತಳ್ಳಿಹಾಕಿತು. ಬೀಡಿ ಕೈಗಾರಿಕೆಯು ಫ್ಯಾಕ್ಟರಿ ಕಾಯಿದೆಯಡಿಯಲ್ಲಿ ಬರುತ್ತದೆ ಎಂದು ಹೈಕೋರ್ಟ್ ಐತಿಹಾಸಿಕ ತೀರ್ಪನ್ನು ನೀಡಿದ್ದು ರಾಜ್ಯದ ಬೀಡಿ ಕಾರ್ಮಿಕರಿಗೆ ಇದೊಂದು ವರದಾನವಾಗಿದೆ.

ಈ ತೀರ್ಪು ನೀಡುವಾಗ ವಿಲಾಸ ಬೀಡಿ ಕಾರ್ಖಾನೆಯಲ್ಲಿ 100 ಕ್ಕೂ ಹೆಚ್ಚು ಕಾರ್ಮಿಕರಿರುವರೋ ಇಲ್ಲವೋ, ಕೈಗಾರಿಕಾ ವಿವಾದ ಕಾಯ್ದೆ 5ಬಿ ಅನ್ವಯಿಸುವುದೋ ಇಲ್ಲವೋ ಎಂಬ ಬಗ್ಗೆ ಖಚಿತ ತೀರ್ಮಾನಕ್ಕೆ ಬರುವಂತೆ ಜನವರಿ 13 ರೊಳಗೆ ಜಂಟಿ ಸಭೆ ನಡೆಸಬೇಕೆಂದು ಲೇಬರ್ ಸೆಕ್ರೆಟರಿಯವರಿಗೆ ಆದೇಶವನ್ನು ಹೈಕೋರ್ಟ್ ನೀಡಿತು.

ಈ ಆದೇಶದಂತೆ ದಿನಾಂಕ 2.1.97 ರಂದು ಲೇಬರ್ ಸೆಕ್ರೆಟರಿಯವರ ಸಮ್ಮುಖದಲ್ಲಿ ಸಭೆ ನಡೆದಿದ್ದು ವಿವಾದವನ್ನು 30 ದಿನಗಳೊಳಗೆ ಕಲಾಪ ಪೂರ್ಣಗೊಳಿಸಿ ತೀರ್ಮಾನಿಸಬೇಕೆಂದು ಹುಬ್ಬಳ್ಳಿ ಇಂಡಸ್ಟ್ರಿಯಲ್ ಟ್ರಿಬ್ಯುನಲ್‌ಗೆ ಸಲ್ಲಿಸಲಾಗಿದೆ.

ರಾಮದುರ್ಗದ ವಿಲಾಸ ಬೀಡಿ ಮುಚ್ಚಿ ಸುಮಾರು 7 ತಿಂಗಳುಗಳಾಗಿವೆ. ಈ ಅವಧಿಯಲ್ಲಿ ಔಷದೋಪಚಾರಕ್ಕೆ ಹಣವಿಲ್ಲದೆ, ರಮೇಜಾ ಯಾದವಾಡ ಎಂಬ ಕಾರ್ಮಿಕಳು ನಿಧನರಾಗಿದ್ದಾರೆ. ನಿಧನಳಾಗುವ ಘಳಿಗೆಯಲ್ಲೂ ಹೋರಾಟ ಮುಂದುವರಿಸಲೇ ಬೇಕು ಎಂದು ತಿಳಿಸಿದ್ದಳು. ಕಾರ್ಮಿಕರು ಕನಿಷ್ಟ ಒಂದು ಹೊತ್ತಿನ ಊಟಕ್ಕೂ ಪರದಾಡುವಂತಹ ಪರಿಸ್ಥಿತಿ ಇದೆ. ಮಾಲೀಕನ, ಮಾಲೀಕನ ನಾಯಿಗಳ ಯಾವ ಒತ್ತಡಕ್ಕೂ, ಆಮಿಷಕ್ಕೂ ಕಾರ್ಮಿಕರು ಬಲಿ ಬಿದ್ದಿಲ್ಲ. ಕೆಂಬಾವುಟವನ್ನು ದೃಢವಾಗಿ ಎತ್ತಿ ಹಿಡಿದಿದ್ದಾರೆ.

ರಾಮದುರ್ಗ ಬೀಡಿ ಕಾರ್ಮಿಕರು ಈ ಮೊದಲಿನಿಂದಲೂ ಕೇವಲ ತಮ್ಮ ಸೌಲಭ್ಯಗಳಿಗಾಗಿ ಮಾತ್ರ ಹೋರಾಡಿಲ್ಲ. ಎಲ್ಲಾ ಜನಪರ ಹೋರಾಟಗಳ ಮುಂಚೂಣಿಯಲ್ಲಿದ್ದಾರೆ. ಪ್ರತಿ ವರುಷ ದೀಪಾವಳಿಯಲ್ಲಿ ತಮಗೆ ದೊರೆಯುವ ಬೋನಸ್ ಹಣದಲ್ಲಿ ಸಂಘದ ವಾರ್ಷಿಕ ವಂತಿಗೆ ರೂ 36-00 ರ ಜೊತೆಗೆ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷಕ್ಕೆ ರೂ 64-00 ನ್ನು ಸಂಘದ ಕಚೇರಿಗೆ ತಾವೇ ಬಂದು ಕೊಡುವ ಅಪರೂಪದ ಪರಂಪರೆ ಹೊಂದಿದ್ದಾರೆ. ಕಾರ್ಮಿಕ ಮುಖಂಡರ ಮೇಲೆ ಹಿಂದೆ ನಡೆದ ಹಲ್ಲೆಯ ಸಂದರ್ಭದಲ್ಲಿ ತೀವ್ರ ಪ್ರತಿಭಟನೆ ನಡೆಸಿದ್ದರು. 1994 ರ ವಿಧಾನ ಸಭೆಯ ಚುನಾವಣೆಯಲ್ಲಂತೂ ಈ ಬಡ ಕಾರ್ಮಿಕರ ಪಾತ್ರ ಚಿರಸ್ಮರಣೀಯ. ಸುಮಾರು ಒಂದು ತಿಂಗಳು ಪ್ರಚಾರದ ಸಂದರ್ಭದಲ್ಲಿ ಪ್ರತಿ ಕಾರ್ಮಿಕರು ತನ್ನ ಮನೆಯಿಂದ ರೊಟ್ಟಿಗಳನ್ನು ಒದಗಿಸಿದ್ದರು. ಪ್ರತಿನಿತ್ಯ ಕಚೇರಿಯಲ್ಲಿ ಸೇರುವ ಸಾವಿರಾರು ರೊಟ್ಟಿಗಳನ್ನು ಪ್ರೀತಿಯಿಂದ ತಿಂದು ಕಾರ್ಯಕರ್ತರು ಕೆಲಸ ಮಾಡುತ್ತಿದ್ದರು.

ಬೀಡಿ ಕಾರ್ಮಿಕರ ಚಳುವಳಿ ಇಂದು ರಾಮದುರ್ಗದಲ್ಲಿ ದುಡಿಯುವ ಜನರ ಪಕ್ಷದ ಬೆನ್ನೆಲುಬಾಗಿ ಬೆಳೆದು ಬಂದಿದೆ. ಇಂದು ಈ ಬಡ ಕಾರ್ಮಿಕ ಸಂಘಟನೆಗಳ ಉದಾರ ನೆರವಿನ ನಿರೀಕ್ಷೆಯಲ್ಲಿದ್ದಾರೆ. ಹೋರಾಟವನ್ನು ಗೆದ್ದೇ ತೀರುತ್ತೇವೆ ಎಂಬ ಛಲ ಹೊಂದಿದ್ದಾರೆ.

ಎಚ್ಚರ! ಜನತಾ ದಳ ಎಚ್ಚರ!!

ಪುಟ 1ರಿಂದ

೬. ಹೆಚ್ಚುತ್ತಿರುವ ಲಾಕಪ್ ಸಾವುಗಳು, ಹೆಜ್ಜಾಲದಲ್ಲಿ ಕಾರ್ಮಿಕರ ಮೇಲಿನ ಗುಂಡೇಟು, ಪೋಲೀಸ್ ದುರಾಡಳಿತ ಜನ ಸಾಮಾನ್ಯರ ಸಮಸ್ಯೆಗಳ ಬಗ್ಗೆ ಅಧಿಕಾರ ಯಂತ್ರದ ನಿಷ್ಕಾಳಜಿ.

ಈ ಕಾರಣಗಳಿಂದ ಜನತಾದಳ ಜನತೆಯಿಂದ ದೂರವಾಗುತ್ತಿದೆ ಎಂದು ಹೇಳಿತ್ತು.

ಜನತೆಯ ನಾಡಿ ಬಡಿತವನ್ನು ನಿರಂತರವಾಗಿ ಆಲಿಸುತ್ತಿರಬೇಕು ಎಂಬ ಸೂಕ್ಷ್ಮತೆಯನ್ನೇ ಕಳೆದುಕೊಂಡಿರುವ ರಾಜ್ಯ ಸರಕಾರ ರಾಮನಗರ, ಚಿಕ್ಕನಾಯಕನಹಳ್ಳಿ ಉಪಚುನಾವಣೆಯ ಫಲಿತಾಂಶದಿಂದಲಾದರೂ ಎಚ್ಚೆತ್ತುಕೊಳ್ಳಬೇಕಾಗಿದೆ.

ಹೆಜ್ಜಾಲದಲ್ಲಿ ಹೋರಾಟ ನಿರತ ಕಾರ್ಮಿಕರ ಮೇಲೆ ಗುಂಡು ಹಾರಿಸಿದ್ದು ಗ್ರಾಮದ ಬೀದಿ ಹಾಗೂ ಹೊಲಗಳಲ್ಲಿ ಗುಂಡಿನ ಕಾಳಗ ಮಾಡಿ ಮೂರು ಜನ ಅಮಾಯಕರನ್ನು ಕೊಂದದ್ದು ಹತ್ತಾರು ಜನರ ಅಂಗಹೀನತೆಗಳಿಗೆ ಕಾರಣವಾಗಿದ್ದು ಸುತ್ತಮುತ್ತಲ ಹಳ್ಳಿಗಳಲ್ಲಿ ಮನೆ ಮನೆಗೆ ನುಗ್ಗಿ ಬೆದರಿಕೆಯ ವಾತಾವರಣ ಉಂಟು ಮಾಡಿದ್ದು ಜನತಾದಳ ಸರಕಾರದ ಅಧಿಕಾರಶಾಹಿ ಧೋರಣೆಯನ್ನು ಪ್ರತಿಬಿಂಬಿಸುತ್ತದೆ. ಜನಸಾಮಾನ್ಯರ ಸಮಸ್ಯೆಗಳ ಬಗ್ಗೆ, ಎರಡೂವರೆ-ಮೂರು ವರ್ಷಗಳಿಂದಲೂ ನಿರಂತರವಾಗಿ ಹೋರಾಟದಲ್ಲಿರುವ ಕಾರ್ಮಿಕರ ಸಮಸ್ಯೆಯನ್ನು ಬಗೆಹರಿಸದ ನಿಷ್ಕಾಳಜಿಯ ಪ್ರತಿಬಿಂಬವಾಗಿದೆ. ರಾಜ್ಯಾದ್ಯಂತ ಪ್ರಕಟವಾಗುತ್ತಿರುವ ಈ ಧೋರಣೆಯ ಬಗ್ಗೆ ರಾಜ್ಯದ ಜನತೆ ಬೇಸತ್ತಿದ್ದಾರೆ ಎಂಬುದರ ಸೂಚಕವಾಗಿದೆ ರಾಮನಗರದ ಸೋಲು.

ಪ್ರಧಾನಿಯವರು ಕರ್ನಾಟಕದ ಬಗ್ಗೆ ಅದರ ಅಭಿವೃದ್ಧಿ ಅಗತ್ಯಗಳ ಬಗ್ಗೆ ಕಾಳಜಿ ತೋರಿಸಿ ವಿಶೇಷ ಯೋಜನೆಗಳಲ್ಲಿ ಹಣ ಬಿಡುಗಡೆ ಮಾಡುವುದು ಸ್ವಾಗತಾರ್ಹವೇ, ಆದರೆ ಆಗಾಗ್ಗೆ ಕರ್ನಾಟಕಕ್ಕೆ ಬರುವುದರಿಂದ ಈ ಯೋಜನೆಗಳ ಶಂಕುಸ್ಥಾಪನೆ ಮಾಡುವುದರಿಂದ ಜನರ ಮನಸ್ಸನ್ನು ಗೆಲ್ಲಬಹುದು. ಉಳಿದಂತೆ ಎಷ್ಟೇ ಬೆಲೆಯೇರಿಕೆಯಾದರೂ ಜನ ಸಹಿಸುತ್ತಾರೆ ಎಂದು ತಿಳಿದುಕೊಂಡಂತಿದೆ. ಎರಡೂ ಕ್ಷೇತ್ರಗಳ ಜನತೆ ಅದು ತಪ್ಪು ಎಂದು ಸಾರಿದ್ದಾರೆ.

ಪ್ರಧಾನಿಯವರು ತೆರವು ಮಾಡಿದ ಜಾಗದಲ್ಲಿ ಇತ್ತೀಚೆಗೆ ಪ್ರಧಾನಿಯವರ ಮಗ ಸಂಸತ್ ಸದಸ್ಯನಾಗಿ ಆಯ್ಕೆಯಾಗಿದ್ದ ಕ್ಷೇತ್ರದಲ್ಲಿ ಅವರ ಪಕ್ಷ ಸೋಲನ್ನಪ್ಪಿದ್ದು ಇಂದು ದೇಶಾದ್ಯಂತ ಚರ್ಚೆಗೊಳಗಾಗಿದೆ. ಅಂಬರೀಷ್‌ರಂತಹ ಜನಪ್ರಿಯ ನಟನೇ ಅಭ್ಯರ್ಥಿಯಾಗಿದ್ದರೂ ನಿರ್ಣಾಯಕವಾಗಿ ಸೋತದ್ದು ದೇವೇಗೌಡರು ಹಾಗೂ ಅವರ ಕುಟುಂಬ ಈ ಕ್ಷೇತ್ರದ ಬಗ್ಗೆ ವರ್ತಿಸುತ್ತಿರುವ ರೀತಿಯ ಬಗ್ಗೆ ವಿಮರ್ಶೆಯೂ ಹೌದು. ಇದನ್ನು ಅವರು ಮನಗಾಣಬೇಕಾಗಿದೆ.

ಲೋಕಸಭಾ ಚುನಾವಣೆಯ ನಂತರದ ೧೦ ವಿಧಾನಸಭಾ ಉಪ ಚುನಾವಣೆಗಳಲ್ಲಿ ಜನತಾದಳದ ಅಭ್ಯರ್ಥಿಯ ಆಯ್ಕೆಯೂ ಸೋಲಿನ ಒಂದು ಪ್ರಮುಖ ಕಾರಣವಾಗಿದೆ. ಹಿಂದೆ ಒಂದು ಕ್ಷೇತ್ರದಲ್ಲಿ ಈಗ ಒಂದು ಕ್ಷೇತ್ರದಲ್ಲಿ ಬಂಡಾಯ ಅಭ್ಯರ್ಥಿಗಳು ಗೆಲುವು ಸಾಧಿಸಿರುವುದು, ರಾಮನಗರದಲ್ಲಿ ಕಾಂಗ್ರೆಸ್ಸಿನ ಲಿಂಗಪ್ಪನವರ ಗೆಲುವು ಹಿಂದೆ ಬಾಗಲಕೋಟೆಯಲ್ಲಿ ಬಿಜೆಪಿಯ ಗೆಲುವು ಜನತಾದಳ ಅಭ್ಯರ್ಥಿಯ ಆಯ್ಕೆಯೂ ಪ್ರಮುಖ ಕಾರಣ ಎಂಬುದು ಗಮನಾರ್ಹ. ತಮ್ಮ ಪಕ್ಷದಿಂದ ಯಾರನ್ನೇ ನಿಲ್ಲಿಸಿದರೂ ಗೆಲ್ಲಬಹುದೆಂಬ ಹಮ್ಮಿನಿಂದ ಪಕ್ಷದೊಳಗಿನ ಆಂತರಿಕ ಪ್ರಜಾಸತ್ತಾತ್ಮಕ ಪ್ರಕ್ರಿಯೆಗಳಿಗೆ ಪೆಟ್ಟು ನೀಡುವುದು ಪಕ್ಷದ ಬೆಳವಣಿಗೆಗೆ ಹಾನಿಕರ ಎಂಬುದನ್ನು ಸೂಚಿಸುತ್ತದೆ.


ಒಟ್ಟಿನಲ್ಲಿ ರಾಜ್ಯದಲ್ಲಿ ಕಾಂಗ್ರೆಸ್ ವಿರೋಧಿ ಜಾತ್ಯಾತೀತ ರಾಜಕೀಯ ಪ್ರಧಾನ ವಾಹಿನಿಯಾಗಿ ಉಳಿಯಬೇಕಾದರೆ, ದೇಶದಲ್ಲಿ ಮೂರನೇ ಶಕ್ತಿ ದೃಢವಾಗಬೇಕಾದರೆ ಸಂಯುಕ್ತ ರಂಗದ ಕೇಂದ್ರ ಸರಕಾರವೂ ಮುಖ್ಯವಾಗಿ ರಾಜ್ಯ ಸರಕಾರವೂ, ಜನತಾ ದಳದ ರಾಜ್ಯ ಘಟಕವೂ ಈ ಫಲಿತಾಂಶಗಳಿಂದ ಪಾಠ ಕಲಿಯಬೇಕಾಗಿದೆ.

ಹಿಂದೆ ಕುವೆಂಪುರವರೆಂದಂತೆ,

ಕೂಗುತಿವೆ ಕಲ್ಲು(ಜನತೆ) ಕಿವಿವೆತ್ತ ಕಿವುಡರಿರಾ ಕೇಳಿ ಆ ಸೊಲ್ಲು.

— ಜೆ.ಎನ್.ನಾಗರಾಜ್

"ಕಾಂಗ್ರೆಸ್ ದಾರಿ ಬಿಡಿ-ಜನಗಳ ಸಮಸ್ಯೆಗಳನ್ನು ಪರಿಹರಿಸುವ ದಾರಿ ಹಿಡಿಯಿರಿ"



ರಾಜ್ಯಾದ್ಯಂತ ಜನವರಿ ೧೬ರಿಂದ ೩೦ವರೆಗೆ ಸಿಪಿಐ(ಎಂ) ನೇತೃತ್ವದಲ್ಲಿ ಮೊಳಗಿದ ಈ ದನಿಯ ಬಗ್ಗೆ ಈಗಾಗಲೇ ಸಂಕ್ಷಿಪ್ತ ವರದಿಯನ್ನು ನೀವು ಓದಿರುವಿರಿ.

ಕೇಂದ್ರ ಮತ್ತು ರಾಜ್ಯ ಸರಕಾರಗಳು ಅನುಸರಿಸುತ್ತಿರುವ ಜನವಿರೋಧಿ ನೀತಿ ಹಾಗೂ ಬೆಲೆ ಏರಿಕೆಯ ವಿರುದ್ಧವಾಗಿ ಮತ್ತು ಮುಂಬರುವ ಆಯವ್ಯಯದಲ್ಲಿ ಜೀವನಾವಶ್ಯಕ ಬೆಲೆಗಳನ್ನು ಏರಿಸುವ ಸೂಚಿಸಲ್ಲಿರುವ ಕೇಂದ್ರ ಮತ್ತು ರಾಜ್ಯ ಸರಕಾರಗಳ ವಿರುದ್ಧ ಸಿಪಿಐ(ಎಂ) ರಾಜ್ಯ ಸಮಿತಿ ಮತ್ತು ಕೇಂದ್ರ ಸಮಿತಿಯ ಕರೆಯ ಮೇರೆಗೆ ಜನವರಿ ೧೬ರಿಂದ ೩೦ರವರೆಗೆ ರಾಜ್ಯದ ಜಿಲ್ಲಾ ಕೇಂದ್ರಗಳು ಹಾಗೂ ತಾಲೂಕು ಕೇಂದ್ರಗಳಲ್ಲಿ ನಡೆದ ತೀವ್ರ ಪ್ರಚಾರಾಂದೋಲನದ ಭಾಗವಾಗಿ ನಡೆದ ಸಾರ್ವಜನಿಕ ಸಭೆಗಳು, ಮೆರವಣಿಗೆಗಳು ಹಾಗೂ ಪಿಕೆಟಿಂಗ್ ಕಾರ್ಯಕ್ರಮಗಳ ವಿವರಗಳನ್ನು ಇಲ್ಲಿ ಕೊಡುತ್ತಿದ್ದೇವೆ.

ಧಾರವಾಡ: ಸಿಪಿಐ(ಎಂ) ಜಿಲ್ಲಾ ಸಮಿತಿಯ ನೇತೃತ್ವದಲ್ಲಿ ಸಂಘಟಿಸಿದ್ದ ಕೈಗಾರಿಕೆಗಳ ಕಾರ್ಮಿಕರು, ರೈತರು, ಕೃಷಿ ಕೂಲಿಕಾರರು, ಬೀಡಿ ಕಾರ್ಮಿಕರು, ಕೈಮಗ್ಗ ನೇಕಾರರು, ವಿದ್ಯಾರ್ಥಿ ಯುವಜನರು ಹಾಗೂ ಹೆಚ್ಚಿನ ಸಂಖ್ಯೆಯಲ್ಲಿ ಮಹಿಳೆಯರು ಪಾಲ್ಗೊಂಡಿದ್ದ ಬೃಹತ್ ಮೆರವಣಿಗೆಯು ಹುಬ್ಬಳ್ಳಿಯ ರೈಲ್ವೇ ನಿಲ್ದಾಣದಿಂದ ಹೊರಟು ನಗರದ ಪ್ರಮುಖ ಬೀದಿಗಳಲ್ಲಿ ಸಂಚರಿಸಿತು. ಮೆರವಣಿಗೆಯ ಮುಂಚೂಣಿಯಲ್ಲಿ ಪಕ್ಷದ ಕೇಂದ್ರ ಸಮಿತಿ ಸದಸ್ಯರು ಹಾಗೂ ಕೃಷಿ ಕೂಲಿಕಾರರ ಸಂಘದ ರಾಷ್ಟ್ರೀಯ ಮುಖಂಡರಾದ ಸುನೀತ್ ಚೋಪ್ರಾ ಭಾಗವಹಿಸಿದರು. ಜೊತೆಯಲ್ಲಿ ಜಿಲ್ಲಾ ಕಾರ್ಯದರ್ಶಿ ನಿತ್ಯಾನಂದಸ್ವಾಮಿ, ರಾಜ್ಯ ಸಮಿತಿ ಸದಸ್ಯರಾದ ಸಿ.ಆರ್.ಭಟ್ ಹಾಗೂ ಸಾಮೂಹಿಕ ಸಂಘಟನೆಗಳ ಮುಖಂಡರು ಪಾಲ್ಗೊಂಡಿದ್ದರು.

ನಂತರ ನಡೆದ ಸಭೆಯಲ್ಲಿ ಸುನೀತ್ ಚೋಪ್ರಾ ಮಾತನಾಡುತ್ತಾ ಕೇಂದ್ರ ಸರಕಾರ ಸಾಮಾನ್ಯ ಕನಿಷ್ಠ ಕಾರ್ಯಕ್ರಮವನ್ನು ಜಾರಿಗೆ ತಂದು ದೇಶದ ಬಡ ಜನತೆಯನ್ನು ರಕ್ಷಿಸಬೇಕೆಂದರು. ಸಭೆಯಲ್ಲಿ ಮಾತನಾಡಿದ ನಿತ್ಯಾನಂದಸ್ವಾಮಿ, ಹಾನಗಲ್, ಶಿಗ್ಗಾಂವ್, ಕಲಘಟಗಿ, ಬ್ಯಾಡಗಿ, ಹಿರೇಕೆರೂರ್ ಮೊದಲಾದ ತಾಲೂಕುಗಳಲ್ಲಿ ಭೂಹೀನ ಕೃಷಿ ಕೂಲಿಕಾರರ ಮೇಲೆ ಹಾಕಿರುವ ಮೊಕದ್ದಮೆಗಳನ್ನು ಹಿಂತೆಗೆದುಕೊಂಡು, ಅವರಿಗೆ ಬಂಜರು ಭೂಮಿಯ ಸಾಗುವಳಿ ಪತ್ರಗಳನ್ನು ನೀಡಬೇಕೆಂದರು. ಹಾಗೂ ಇತರಕಾರ್ಮಿಕರಿಗೂ ಸಮಾನ ಕೆಲಸಕ್ಕೆ ಸಮಾನ ವೇತನ ನೀಡಬೇಕೆಂದರು. ಸಭೆಯನ್ನುದ್ದೇಶಿಸಿ ಕಾರ್ಮಿಕ ಮುಖಂಡ ಕೆ. ದೇಶಪಾಂಡೆ, ಸಿ.ಆರ್.ಭಟ್, ಎಂ.ಬಿ.ಕಟ್ಟಿ, ಬಿ.ಜಿ.ಗೊಂದಕರ, ಕೆ.ಎಲ್.ಭಟ್, ವಿ.ಎನ್. ದೇಶಪಾಂಡೆ, ಕೃಷಿ ಕೂಲಿಕಾರರ ಮುಖಂಡರಾದ ಹಕ್ಕಲಗೌಡ ಪಾಟೀಲ್, ಫಕ್ಕೀರಪ್ಪ ಕುಂದೂರಾ, ಸುಲ್ತಾನ್ ಸಾಬ್ ಹಾವೇರಿ, ಶಾರವ್ವಾ, ಭೀಮನವ್ವಾ ಲಂಬಾಣಿ ಮುಂತಾದವರು ಮಾತನಾಡಿದರು.

ದಕ್ಷಿಣ ಕನ್ನಡ: ದ.ಕ. ಜಿಲ್ಲೆಯಲ್ಲಿ ಕಾರ್ಯಕ್ರಮಗಳು ನಡೆದ ವರದಿ ಬರುತ್ತಿದ್ದು ಜಿಲ್ಲೆಯ ಕುಂದಾಪುರದಲ್ಲಿ ಜನವರಿ 24ರಂದು ಬೃಹತ್ ಮೆರವಣಿಗೆ ನಡೆಸಿ ಗಾಂಧಿ ಮೈದಾನದಲ್ಲಿ ಬಹಿರಂಗ ಸಭೆ ನಡೆಯಿತು. ಸಭೆಯನ್ನುದ್ದೇಶಿಸಿ ಪಕ್ಷದ ರಾಜ್ಯ ಕಾರ್ಯದರ್ಶಿ ಪಿ.ರಾಮಚಂದ್ರರಾವ್ ಮಾತನಾಡಿ ಸಂಯುಕ್ತ ರಂಗ ಸರಕಾರಕ್ಕೆ ನಮ್ಮ ಪಕ್ಷವು ಬೆಂಬಲ ನೀಡುತ್ತಿದ್ದರೂ ಕೂಡಾ ಇಂತಹ ಜನವಿರೋಧಿ ನೀತಿಗಳು ಬಂದಾಗ ತೀವ್ರ ವಿರೋಧ ಮಾಡುವುದು ಅನಿವಾರ್ಯ ಎಂದರು. ನಂತರ ಮಾತನಾಡಿದ ತಾಲೂಕು ಸಮಿತಿ ಕಾರ್ಯದರ್ಶಿ ಕೆ.ಶಂಕರ್ "ಪರಿಸರದ ಮಾಲಿನ್ಯದ ಹೆಸರಿನಲ್ಲಿ ಜಿಲ್ಲೆಗೆ ಅಗತ್ಯವಾಗಿ ಬರಬೇಕಾದ ಕಾರ್ಖಾನೆಗಳು ಬೇಡ ಎನ್ನುವುದು ಸರಿಯಲ್ಲ" ಎಂದರು. ಸಭೆಯ ಅಧ್ಯಕ್ಷತೆಯನ್ನು ಅಬ್ರಹಾಂ ಕರ್ಕಡ ವಹಿಸಿದ್ದರು. ವೇದಿಕೆಯ ಮೇಲೆ ಸಿ.ನಾರಾಯಣ, ಮಹಾಬಲ ವಡೇರ ಹೋಬಳಿ, ದಾಸ್ ಭಂಡಾರಿ ಹಾಗೂ ಹೆಚ್. ನರಸಿಂಹ ಉಪಸ್ಥಿತರಿದ್ದರು. ಮಂಗಳೂರು ನಗರದ ಜಪ್ಪಿನ ಕೆಂಬೆಟ್ಟುನಲ್ಲಿ ಜನವರಿ 20 ರಂದು ಸಾರ್ವಜನಿಕ ಸಭೆಯು ಮಾಜಿ ಕಾರ್ಪೋರೇಟರ್ ಜೆ.ಸದಾಶಿವಶೆಟ್ಟಿಯವರ ಅಧ್ಯಕ್ಷತೆಯಲ್ಲಿ ನಡೆಯಿತು. ಈ ಸಭೆಯಲ್ಲಿ ಪಿ.ರಾಮಚಂದ್ರರಾವ್ ಭಾಗವಹಿಸಿದ್ದರು.

ಕುಂದಾಪುರ ತಾಲೂಕು ಸಮಿತಿಯ ನೇತೃತ್ವದಲ್ಲಿ ಜನವರಿ 30ರಂದು ಕೋಟೇಶ್ವರ ಪಂಚಾಯತ್ ಕಚೇರಿ ಬಳಿ ಸಂಜೆ ನೂರಾರು ಜನರು ಭಾಗವಹಿಸಿದ್ದ ಸಭೆ ನಡೆಯಿತು. ಇದರ ಅಧ್ಯಕ್ಷತೆಯನ್ನು ಮಾಜಿ ಪಂಚಾಯತ್ ಸದಸ್ಯರಾದ ಶ್ರೀಯುತ ಕರಿಯಣ್ಣನವರು ವಹಿಸಿದ್ದರು. ಸಭೆಯಲ್ಲಿ ಕೆ.ಶಂಕರ್ ಅಬ್ರಹಾಂ ಕರ್ಕಡ,ಗೋವಿಂದ ಶೆಟ್ಟಿಗಾರ ಮುಂತಾದವರು ಮಾತನಾಡಿದರು.

ಬೆಂಗಳೂರು: ಜನವರಿ 20ರಿಂದ ಆರಂಭವಾದ ಪ್ರಚಾರಾಂದೋಲನದಲ್ಲಿ 10 ದಿನಗಳ ಕಾಲ ವ್ಯಾನ್ ಪ್ರಚಾರ ನಡೆಯಿತು. ಹಾಡಿನ ತಂಡ ನಗರದ ಹಲವು ಪ್ರದೇಶಗಳಲ್ಲಿ ಹಾಡುಗಳ ಮೂಲಕ ಪ್ರಸ್ತುತ ರಾಜಕೀಯ ಪರಿಸ್ಥಿತಿಯ ಬಗ್ಗೆ ಜನಗಳಲ್ಲಿ ಅರಿವು ಮೂಡಿಸಲು ಪ್ರಯತ್ನಿಸಿತು. ನಾಲ್ಕೈದು ಪ್ರದೇಶಗಳಲ್ಲಿ ಮನೆ-ಮನೆ ಪ್ರಚಾರ ನಡೆಯಿತು. ಇದಕ್ಕಾಗಿ 50000 ಕರಪತ್ರಗಳನ್ನು ಮುದ್ರಿಸಲಾಯಿತು. ಹಲವಾರು ಸಭೆಗಳನ್ನು ನಡೆಸಲಾಯಿತು. ಕೊನೆಯ ದಿನ ಜನವರಿ 30ರಂದು ಈಗಾಗಲೇ 'ಐಕ್ಯರಂಗ'ದಲ್ಲಿ ವರದಿಯಾಗಿರುವಂತೆ ಸುಮಾರು ಒಂದು ಸಾವಿರ ಕಾರ್ಯಕರ್ತರು ಭಾಗವಹಿಸಿದ್ದ "ವಿಧಾನಸೌಧ ಚಲೋ" ಹಾಗೂ ನಂತರ ಅದನ್ನು ತಡೆದಾಗ ಕೆ.ಆರ್.ಸರ್ಕಲ್‌ನಲ್ಲೇ ಧರಣಿ ಮತ್ತು ಬಹಿರಂಗ ಸಭೆ ನಡೆಯಿತು. ಸೂರ್ಯನಾರಾಯಣರಾವ್, ಆರ್.ಶ್ರೀನಿವಾಸ್, ಕೆ.ಎಸ್.ವಿಮಲಾ ಮತ್ತಿತರ ಮುಖಂಡರು ಮಾತನಾಡಿದರು.

ಉತ್ತರ ಕನ್ನಡ: ದೇಶದಲ್ಲಿ ರಾಷ್ಟ್ರೀಯ ರಂಗ ಸರಕಾರದ ನೇತೃತ್ವದಲ್ಲಿ ದೇವೇಗೌಡ ಸರಕಾರ ತಾನು ಕೊಟ್ಟ ಜನತೆಗೆ ಆಶ್ವಾಸನೆಯನ್ನು ಕಡೆಗಣಿಸಿ ದೇಶದ ಆರ್ಥಿಕ ನೀತಿ ಮತ್ತು ಕೈಗಾರಿಕಾ ನೀತಿಯಿಂದ ಮುಕ್ತ ಮಾರುಕಟ್ಟೆಯಿಂದ ದೇಶದ ಪರಿಸ್ಥಿತಿ ಚಿಂತಾಜನಕವಾಗಿದೆ ಎಂದು ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಕಾಂ.ವಿ.ಜೆ.ಕೆ.ನಾಯರ್‌ರವರು ಕಾರವಾರ ಜನತೆಗೆ ಬಹಿರಂಗ ಸಭೆಯನ್ನುದ್ದೇಶಿಸಿ ವಿವರಿಸಿದರು. ಅಧ್ಯಕ್ಷತೆ ವಹಿಸಿದ್ದ ಜಿಲ್ಲಾ ಕಾರ್ಯದರ್ಶಿ ಟಿ.ಎಸ್.ನಾಯ್ಕ ಮಾತನಾಡಿ ರಾಜ್ಯ ಸರಕಾರ ಜನರ ಸಮಸ್ಯೆ ಬಗೆಹರಿಸುವ ಬದಲು ಆಂತರಿಕ ಕಿತ್ತಾಟದಲ್ಲಿ ಬಿಕ್ಕಟ್ಟಿಗೆ ಸಿಲುಕಿದೆ, ಜಿಲ್ಲೆಯಲ್ಲಿ ನಿರಾಶ್ರಿತರ ಸಂಖ್ಯೆ ಹೆಚ್ಚುತ್ತಿದೆ, ಸೀಬರ್ಡ್, ಕೈಗಾ ಕೊಡಸಳ್ಳಿ ಕದ್ರಾ, ಕೊಂಕಣ ರೈಲ್ವೇ ಜಮೀನು ಮನೆ ಕಳಕೊಂಡ ನಿರಾಶ್ರಿತರಿಗೆ ಸರಕಾರ ಯೋಗ್ಯ ಪರಿಹಾರ ನೀಡದೆ ಜನ ಪರಿತಪಿಸುತ್ತಿದ್ದಾರೆ ಎನ್ನುತ್ತಾ ಯೋಗ್ಯ ಪರಿಹಾರ ನೀಡಲು ಒತ್ತಾಯಿಸಿದರು. ಸುಭಾಷ್ ಕೊಪ್ಪಿಕರ ಸ್ವಾಗತಿಸಿದರು, ಭೀಮರಾವ ಜೇರಟಿಗೆ ಧನ್ಯವಾದ ಅರ್ಪಿಸಿದರು. ಮೆರವಣಿಗೆಯಲ್ಲಿ 500 ಕ್ಕಿಂತ ಹೆಚ್ಚು ಭಟ್ಕಳ, ಹೊನ್ನಾವರ, ಅಂಕೋಲಾ, ದಾಂಡೇಲಿಯಿಂದ ಬಂದಿದ್ದು ರ್ಯಾಲಿಯಲ್ಲಿ ಭಾಗವಹಿಸಿದ್ದರು.

ಮಂಡ್ಯ ಜಿಲ್ಲೆ: ಮಂಡ್ಯ ಜಿಲ್ಲೆಯ ಮಳವಳ್ಳಿ ತಾಲ್ಲೂಕು ಸಮಿತಿಯು ತಾಲ್ಲೂಕಿನ ತಳಗವಾದಿ ಹಾಗೂ ದುಗ್ಗನಹಳ್ಳಿ ಗ್ರಾಮ ಪಂಚಾಯ್ತಿ ವ್ಯಾಪ್ತಿಯಲ್ಲಿ ಬರುವ ಗ್ರಾಮಗಳಲ್ಲಿ ಜನವರಿ 27ರಂದು ಸೈಕಲ್ ಜಾಥಾವನ್ನು ಸಂಘಟಿಸಿ ಯಶಸ್ವಿಯಾಗಿ ನಡೆಸಿತು. ಜನವರಿ 30ರಂದು ಮುನ್ನೂರು ಜನ ಪಕ್ಷದ ಕಾರ್ಯಕರ್ತರು ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣದಿಂದ ಮೆರವಣಿಗೆ ಹೊರಟು ಸರಕಾರಿ ಬಾಲಕಿಯರ ಪ್ರೌಢಶಾಲಾ ಮೈದಾನದಲ್ಲಿ ಬಂದು ಸೇರಿ ಬಹಿರಂಗ ಸಭೆ ನಡೆಯಿತು.

ರಾಷ್ಟ್ರಪಿತ ಗಾಂಧೀಜಿಯವರಿಗೆ ಶ್ರದ್ಧಾಂಜಲಿ ಸಲ್ಲಿಸಿದ ನಂತರ ಸಿಪಿಐ(ಎಂ) ತಾಲೂಕು ಕಾರ್ಯದರ್ಶಿ ಜಿ.ರಾಮಕೃಷ್ಣರವರು ಪ್ರಾಸ್ತಾವಿಕ ಭಾಷಣ ಮಾಡಿದರು.

ಸಿಪಿಐ(ಎಂ) ರಾಜ್ಯ ಸಮಿತಿ ಸದಸ್ಯರಾದ ಎಸ್.ವೈ.ಗುರುಶಾಂತ್‌ರವರು ಮಾತನಾಡುತ್ತಾ ರಾಜ್ಯ ಸರಕಾರ ಕುಡಿಯುವ ನೀರಿನ ಪೂರೈಕೆಗೆ ಗಮನ ಕೊಡುತ್ತಿಲ್ಲ. ರಸ್ತೆ ಆಗಿಲ್ಲ, ನೀರಾವರಿ ಆಗಿಲ್ಲ, ಆಸ್ಪತ್ರೆಯಿಲ್ಲ, ಸಾರಿಗೆ ವ್ಯವಸ್ಥೆ ಸುಗಮವಾಗಿಲ್ಲ, ಇದಕ್ಕೆಹಣ ಖರ್ಚು ಮಾಡಿ ಎಂದರೆ ವಿಶ್ವ ಸುಂದರಿ ಸ್ಪರ್ಧೆಗೆ ಹಣ ಖರ್ಚು ಮಾಡುತ್ತಿದೆ ಎಂದರು.

ಕಾಂ. ನಾರಾಯಣ ಸ್ವಾಗತ ಭಾಷಣ ಮಾಡಿದರು.

ಕೋಲಾರ: ಜಿಲ್ಲೆಯ ವಿವಿದೆಡೆಗಳಿಂದ ಬಂದ ಸುಮಾರು 5 ಸಾವಿರಕ್ಕೂ ಹೆಚ್ಚು ಜನರು ಪಾಲ್ಗೊಂಡಿದ್ದ ಬೃಹತ್ ಜನಸ್ತೋಮವು ನಗರದ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ನಡೆಸಿತು. ನಗರದಜನರ ಮಾತಿನಲ್ಲಿ ಹೇಳುವುದಾದರೆ ಜಿಲ್ಲಾ ಕೇಂದ್ರ ಕಂಡ ಮೊದಲ ದೊಡ್ಡ ಮೆರವಣಿಗೆ ಇದಾಗಿತ್ತು ಹಾಗೂ ಕಮ್ಯುನಿಸ್ಟರಿಗೆ ಜಿಲ್ಲೆಯಲ್ಲಿ ದೊಡ್ಡ ಜನ ಬೆಂಬಲವಿದೆ ಎಂದು ಮಾತನಾಡಿಕೊಳ್ಳುತ್ತಿದ್ದುದು ಕೇಳಿ ಬರುತ್ತಿತ್ತು. ಮೆರವಣಿಗೆಯ ನೇತೃತ್ವವನ್ನು ಶಾಸಕರೂ ಹಾಗೂ ಪಕ್ಷದ ಜಿಲ್ಲಾ ಕಾರ್ಯದರ್ಶಿಯಾದ ಕಾಂ.ಜಿ.ವಿ. ಶ್ರೀರಾಮರೆಡ್ಡಿ, ಜಿ.ಸಿ.ಬಯ್ಯಾರೆಡ್ಡಿ, ಕೆ.ಎಂ. ವೆಂಕಟೇಶ್ ಹಾಗೂ ಮಾಜಿ ಶಾಸಕರಾದ ಟಿ.ಎಸ್.ಮಣಿ ಇನ್ನೂ ಮುಂತಾದವರು ವಹಿಸಿದ್ದರು.

ನಂತರ ನಡೆದ ಬಹಿರಂಗ ಸಭೆಯನ್ನುದ್ದೇಶಿಸಿ ಮಾತನಾಡಿದ ಶ್ರೀರಾಮರೆಡ್ಡಿಯವರು ರಾಜ್ಯದ ಪಟೇಲ್ ಸರಕಾರ ಜನರ ಆಶೋತ್ತರಗಳಿಗೆ ಸ್ಪಂದಿಸಬೇಕೇ ಹೊರತು, ಬೇಜವಾಬ್ದಾರಿ ರೀತಿಯಲ್ಲಿ ವರ್ತಿಸಬಾರದೆಂದರು ಹಾಗೂ ಕೇಂದ್ರ ಸರಕಾರ ದೇಶದ ಸಾಮಾನ್ಯ ಜನರ ಜೀವನಾವಶ್ಯಕ ವಸ್ತುಗಳ ಬೆಲೆಯನ್ನು ಏರಿಸದೆ ಅವುಗಳು ಜನರ ಕೈಗೆ ಸಿಗುವಂತಾಗಲು ನೆರವಾಗಬೇಕೆಂದರು. ನಂತರ ಸಭೆಯನ್ನುದ್ದೇಶಿಸಿ ಜಿ.ಸಿ.ಬಯ್ಯಾರೆಡ್ಡಿ, ಕೆ.ಎಂ.ವೆಂಕಟೇಶ್, ಅಶ್ವಥನಾರಾಯಣರೆಡ್ಡಿ ಮುಂತಾದವರು ಮಾತನಾಡಿದರು. ಸಭೆಯ ಅಧ್ಯಕ್ಷತೆಯನ್ನು ಟಿ.ಎಸ್.ಮಣಿಯವರು ವಹಿಸಿ ನಡೆಸಿಕೊಟ್ಟರು.

ಇದಕ್ಕೂ ಮುನ್ನ ಜಿಲ್ಲೆಯ ತಾಲೂಕು ಕೇಂದ್ರಗಳಾದ ಬಾಗೇಪಲ್ಲಿ, ಚಿಂತಾಮಣಿ, ಕೆ.ಜಿ.ಎಫ್., ಶ್ರೀನಿವಾಸಪುರ, ಶಿಡ್ಲಘಟ್ಟ ಮುಂತಾದ ಕಡೆಗಳಲ್ಲಿ ಪ್ರಚಾರಾಂದೋಲನ ಕಾರ್ಯಕ್ರಮ ನಡೆಯಿತು. ಬಾಗೇಪಲ್ಲಿಯಲ್ಲಿ ನೂರಾರುಜನರು ಭಾಗವಹಿಸಿದ್ದ ಬಹಿರಂಗ ಸಭೆ ನಡೆಯಿತು. ಒಟ್ಟು ಈ 15 ದಿನಗಳಲ್ಲಿ 30 ಬಹಿರಂಗ ಸಭೆಗಳು, 35000 ಕರಪತ್ರಗಳು, 1000.ಪೋಸ್ಟರ್‌ಗಳ ಮೂಲಕ ಜನರನ್ನು ತಲುಪುವ ಪ್ರಯತ್ನ ಯಶಸ್ವಿಯಾಗಿ ನಡೆಯಿತು.

ಗುಲಬರ್ಗಾ: ಜಿಲ್ಲೆಯಲ್ಲಿ ಈ ಅವಧಿಯಲ್ಲಿ 69 ಬಹಿರಂಗ ಸಭೆಗಳು, 42 ಹಳ್ಳಿಗಳಲ್ಲಿ ಗುಂಪು ಸಭೆಗಳು ನಡೆದವು. ಜನವರಿ 30ರಂದು ಗುಲಬರ್ಗಾ ನಗರದಲ್ಲಿ ನಡೆದ ರ್ಯಾಲಿಯಲ್ಲಿ ಸಾವಿರಕ್ಕೂ ಹೆಚ್ಚು ಜನ ಭಾಗವಹಿಸಿದ್ದರು. ಗಣನೀಯ ಸಂಖ್ಯೆಯಲ್ಲಿ ಮಹಿಳೆಯರು ಭಾಗವಹಿಸಿದ್ದು ಗುಲ್ಬರ್ಗಾ ನಗರದ ಜನತೆಯ ಗಮನ ಸೆಳೆಯುವಂತಹ ರ್ಯಾಲಿಯಾಯಿತು. ಜಿಲ್ಲಾಧಿಕಾರಿಗಳ ಕಚೇರಿ ಎದುರು ಪ್ರದರ್ಶನ ನಡೆದು ಅಲ್ಲಿಯೇ ಬಹಿರಂಗ ಸಭೆ ನಡೆಯಿತು. ಬಹಿರಂಗ ಸಭೆಯಲ್ಲಿ ಜಿಲ್ಲಾ ಸಮಿತಿ ಕಾರ್ಯದರ್ಶಿ ಮಾರುತಿ ಮಾನ್ಪಡೆ, ನೀಲಾ ಕೆ., ಚಂದು ಜಾಧವ್, ಮೇಘರಾಜ ಕಠಾರೆ ಮಾತನಾಡಿದರು.



ಕಮಲಾಪುರ ಕ್ಷೇತ್ರದಲ್ಲಿ 5 ದಿನಗಳ ಜೀಪ್ ಜಾಥಾ ನಡೆಯಿತು. 29 ಬಹಿರಂಗ ಸಭೆಗಳು 7 ಗುಂಪು ಸಭೆಗಳನ್ನು ನಡೆಸಿ ಕರಪತ್ರಗಳನ್ನು ಹಂಚಿ ಸಾವಿರಾರು ಜನರನ್ನು ತಲುಪಲಾಯಿತು.

ಗುಲಬರ್ಗಾ ನಗರದಲ್ಲಿ 7 ಗುಂಪು ಸಭೆಗಳು ನಡೆದವು. 6000 ಕರಪತ್ರಗಳನ್ನು ಹಂಚಲಾಗಿದೆ. ಆಳಂದ ತಾಲೂಕಿನಲ್ಲಿ 3 ದಿನಗಳ ಕಾಲಜೀಪ್ ಜಾಥಾ ನಡೆಯಿತು. 18 ಬಹಿರಂಗ ಸಭೆಗಳು, 6 ಗುಂಪು ಸಭೆಗಳು ನಡೆದವು. ಶಹಾಬಾದ್ ಕೇಂದ್ರದಿಂದ 2 ದಿನಗಳ ಕಾಲ ಜೀಪ್ ಜಾಥಾ, 3 ದಿನಗಳು ಸೈಕಲ್ ಜಾಥಾ ನಡೆದವು. 13 ಬಹಿರಂಗ ಸಭೆಗಳು, 9 ಗುಂಪು ಸಭೆಗಳು ನಡೆದವು. ಶಹಾಪುರದಲ್ಲಿ 2 ದಿನ ಕಾಲು ನಡಿಗೆಯಿಂದ 8 ಬಹಿರಂಗ ಸಭೆಗಳು 12 ಗುಂಪು ಸಭೆಗಳನ್ನು ನಡೆಸಿದರು.

ಬಳ್ಳಾರಿ: ಜನವರಿ 30ರಂದು ಜಿಲ್ಲಾ ಮುಖ್ಯ ಸ್ಥಳವಾದ ಬಳ್ಳಾರಿಯಲ್ಲಿ 1500ಕ್ಕೂ ಹೆಚ್ಚಿನ ಕಾರ್ಮಿಕರು, ಕೂಲಿಕಾರರು, ಅಂಗನವಾಡಿ ನೌಕರರು, ವಿದ್ಯಾರ್ಥಿ ಯುವಜನರು, ಮಹಿಳೆಯರು ಸೇರಿದ್ದ ಬೃಹತ್ ಜನ ಸಾಗರ ಮತ ಪ್ರದರ್ಶನ ನಡೆಸಿತು. ರಾಜ್ಯ, ಕೇಂದ್ರ ಸರಕಾರಗಳ ಬೆಲೆ ಏರಿಕೆಯ ನೀತಿಗಳನ್ನು ಪ್ರತಿಭಟಿಸಿ ನಡೆಸಿದ ಬಹಿರಂಗ ಸಭೆಗೆ ಜಿಲ್ಲೆಯ ಬಳ್ಳಾರಿ, ತೆಕ್ಕಲಕೋಟೆ,ಕುರುಗೋಡು, ಸಿರುಗುಪ್ಪ, ಹೊಸಪೇಟೆ, ಹಗರಿಬೊಮ್ಮನಹಳ್ಳಿ ಪ್ರದೇಶದಿಂದ ಜನರು ಹೆಚ್ಚಿನ ಸಂಖ್ಯೆಯಲ್ಲಿ ಬಂದಿದ್ದರು. ಜಿಲ್ಲೆಯ ಆಡಳಿತ ಈ ರ್ಯಾಲಿಯನ್ನು ಗಂಭೀರವಾಗಿ ಪರಿಗಣಿಸುವಂತಾಗಿದೆ. ನಗರದ ಜನರು ಇತ್ತೀಚಿನ ದಿನಗಳಲ್ಲಿ ನಡೆದ ಬೃಹತ್ 'ಜನಪ್ರದರ್ಶನ ಎಂದು ಜನಪರವಾದ ಘೋಷಣೆಗಳು ಮೊಳಗಿದ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.

ಬಹಿರಂಗ ಸಭೆಯಲ್ಲಿ ರಾಜಕೀಯ ನಿರ್ಣಯವನ್ನು ಹಗರಿಬೊಮ್ಮನಹಳ್ಳಿ ಸಿಪಿಐ (ಎಂ) ತಾಲೂಕು ಸಮಿತಿ ಕಾರ್ಯದರ್ಶಿ ಎಸ್.ಜಗನ್ನಾಥ್ ಮಂಡಿಸಿದರು. ಹೊಸಪೇಟೆ ತಾಲೂಕು ಕಾರ್ಯದರ್ಶಿ ಡಿ.ವೆಂಕಟರಮಣ, ಹಗರಿಬೊಮ್ಮನಹಳ್ಳಿಯ ಡಿ.ಗಣೇಶ, ಬಳ್ಳಾರಿ ತಾಲೂಕಿನ ಶಿವಶಂಕರ್, ರಾಜಪುರದ ಮರಿಯಪ್ಪ, ಸಿರುಗುಪ್ಪದ ಹೆಚ್.ರಾಮಾಂಜನೇಯ ಹಾಗೂ ಜಿಲ್ಲಾ ಕಾರ್ಯದರ್ಶಿ ಪ್ರಸನ್ನ ಕುಮಾರ್ ಮಾತನಾಡಿದರು. ಜಿಲ್ಲಾ ಕಾರ್ಯದರ್ಶಿ ಮಂಡಳಿ ಸದಸ್ಯ ಯು.ಬಸವರಾಜ್ ಅಧ್ಯಕ್ಷತೆ ವಹಿಸಿದ್ದರು.

ಜಿಲ್ಲಾದ್ಯಂತ 60ಕ್ಕೂ ಹೆಚ್ಚು ಸಭೆಗಳು, ಕರಪತ್ರಗಳ ಮೂಲಕ ಸುಮಾರು 5000 ಜನರನ್ನು ಈ ಪ್ರಚಾರಾಂದೋಲನದ ಅವಧಿಯಲ್ಲಿ ತಲುಪಲಾಯಿತು.

ಶಿವಮೊಗ್ಗ: ಜನವರಿ 25ರಿಂದ 28ರವರೆಗೆ ರಾಜಕೀಯ ಪ್ರಕ್ಷೋಭೆ ಕಾರ್ಯಕ್ರಮದ ಭಾಗವಾಗಿ ಬೀದಿ ಸಭೆಗಳನ್ನು ನಡೆಸಲಾಯಿತು.

ಜನವರಿ 30ರಂದು ಶಿವಮೊಗ್ಗ ನಗರಸಭಾ ಮುಂಭಾಗದಿಂದ ಪ್ರತಿಭಟನಾ ಮೆರವಣಿಗೆ ನಡೆಸಲಾಯಿತು. ಪ್ರಮುಖ ಬೀದಿಗಳಲ್ಲಿ ಮೆರವಣಿಗೆಯಾಗಿ ಸರಕಾರದ ವಿರುದ್ಧದ ಘೋಷಣೆ ಕೂಗಿ, ಜಿಲ್ಲಾಧಿಕಾರಿಗಳ ಕಚೇರಿ ತಲುಪಿ, ರಾಜ್ಯ ಮುಖ್ಯಮಂತ್ರಿಗಳು, ಪ್ರಧಾನಮಂತ್ರಿಗಳಿಗೆ ಮನವಿ ನೀಡಲಾಯಿತು.

ಅದರೊಟ್ಟಿಗೆ ಸ್ಥಳೀಯ ಸಮಸ್ಯೆಗಳತ್ತಲೂ ಗಮನ ಸೆಳೆಯಲಾಯಿತು.

ವಿಜಾಪುರ: ರೈತ ಸಂಘದ ಕಾರ್ಯಾಲಯದಿಂದ ಹೊರಟ ಮೆರವಣಿಗೆಯು ನಗರ ಮುಖ್ಯ ಬೀದಿಗಳಲ್ಲಿ ಹಾಯ್ದು ಹೋಗುವಾಗ ಜಿಲ್ಲಾಧಿಕಾರಿ ಕಚೇರಿ ಮುಂತಾದ 6-7 ಸ್ಥಳಗಳಲ್ಲಿ ಸಭೆಗಳನ್ನು ನಡೆಸಿದವು. ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಎನ್.ಕೆ.ಉಪಾಧ್ಯಾಯ, ಜಿಲ್ಲಾ ಕಾರ್ಯದರ್ಶಿ ಭೀಮಸಿ ಕಲಾದಗಿ, ಜಿಲ್ಲಾ ಸಮಿತಿ ಸದಸ್ಯ ಅಣ್ಣಾರಾಯ ಈಳಗೇರ ಮುಂತಾದವರು ಮಾತನಾಡಿ ರಾಜ್ಯ ಹಾಗೂ ಕೇಂದ್ರ ಸರಕಾರದ ಜನ ವಿರೋಧಿ ನೀತಿಗಳನ್ನು ಖಂಡಿಸಿದರು. ನೀರು, ವಿದ್ಯುತ್, ಪಡಿತರ ಆಹಾರ ಧಾನ್ಯ ಮುಂತಾದವುಗಳ ಸಮರ್ಪಕ ವಿತರಣೆ ಬಡಜನರೆಲ್ಲರಿಗೂ , ಆಶ್ರಯ ಮನೆ, ಅತಿಕ್ರಮಣ ಭೂಮಿ ಸಕ್ರಮಗೊಳಿಸಬೇಕು, ಬೆಲೆ ಏರಿಕೆ ತಡೆಗಟ್ಟಬೇಕು, ಶೇರು ಹಗರಣ, ಸಕ್ಕರೆ ಹಗರಣ, ಹವಾಲಾ ಹಗರಣ, ಟೆಲಿಕಾಂ ಹಗರಣ, ಯೂರಿಯಾ ಹಗರಣ, ಮೇವು ಹಗರಣ ಮುಂತಾದ ಹಗರಣಗಳಲ್ಲಿ ಸಿಕ್ಕಿಕೊಂಡಿರುವ ಕಾಂಗ್ರೆಸ್, ಜನತಾದಳ, ಬಿಜೆಪಿ ಮುಂತಾದ ಪಕ್ಷಗಳ ಮುಖಂಡರುಗಳನ್ನು ಶಿಕ್ಷೆಗೆ ಗುರಿಪಡಿಸಬೇಕು ಎಂದು ಮೆರವಣಿಗೆಕಾರರು ಘೋಷಣೆ ಕೂಗುತ್ತಿದ್ದರು.

ಜಿಲ್ಲಾಧಿಕಾರಿಗಳ ಮುಖಾಂತರ ರಾಷ್ಟ್ರಪತಿಗಳಿಗೆ ಮನವಿ ಅರ್ಪಿಸಲಾಯಿತು.



ಮತ್ತೆ ಬಂದಿದೆ ಆಯ-ವ್ಯಯದ ಸಮಯ

ಸಂಸತ್ತಿನ ಬಜೆಟ್ ಅಧಿವೇಶನ ಸದ್ಯದಲ್ಲೇ ಪ್ರಾರಂಭವಾಗಲಿದೆ. ನರಸಿಂಹರಾಯರ ಪೂರ್ತಿ ಉದಾರೀಕರಣ
ಪರ ಸರಕಾರ ಹೋಗಿ ಸಂಯುಕ್ತರಂಗವೆಂಬ ಉದಾರೀಕರಣ ಪರವಾದರೂ ಉದಾರೀಕರಣದ ಮೇಲೆ ಗಟ್ಟಿ
ಕಡಿವಾಣಕ್ಕೊಳಪಟ್ಟ ಸರ್ಕಾರ ಆಡಳಿತದಲ್ಲಿದೆ. ಈ ಸಂಯುಕ್ತರಂಗ ಸರಕಾರ ಐಎಂಎಫ್
ವಿಶ್ವಬ್ಯಾಂಕುಗಳು ದೇಶೀ ಬಂಡವಾಳಗಾರರು ಕೇಳಿದ್ದನ್ನೆಲ್ಲ ಮಾಡುವಂತಿಲ್ಲ. ಹಿಂದಿನ ಕಾಂಗ್ರೆಸ್
ಸರ್ಕಾರ ಅಂತಹ ಆಗ್ರಹದೊಳಗೇ ಇತ್ತು. ಈ ಮುಖ್ಯ ವ್ಯತ್ಯಾಸದ ಹಿನ್ನೆಲೆಯಲ್ಲಿ ಹಿಂದಿನ ಎರಡು
ಬಜೆಟ್‌ಗಳ ಒಂದು ಅವಲೋಕನವನ್ನು ಇಲ್ಲಿ ಮಾಡಲಾಗಿದೆ.

ಸಂಯುಕ್ತ ರಂಗ ಸರಕಾರವೂ ಬೂರ್ಝ್ವಾ ಪಕ್ಷಗಳ ನೇತೃತ್ವದ ಸರಕಾರವೇ. ಬಿಜೆಪಿ ಮತ್ತು ಕಾಂಗ್ರೆಸ್ ಪಕ್ಷಗಳನ್ನು ಅಧಿಕಾರದ ಹೊರಗಿರಿಸುವ ಪ್ರಯತ್ನದಲ್ಲಿ ಎಡ ಪಕ್ಷಗಳೂ ಈ ಸರಕಾರವನ್ನು ಬೆಂಬಲಿಸಿವೆ. ಆದರೆ ಇದರಿಂದಾಗಿ ಸಂಯುಕ್ತರಂಗಸರಕಾರ ಪೂರ್ತಿ ಜನಪರ ಅನ್ನುವಂತಿಲ್ಲ. ಸಂಯುಕ್ತ ರಂಗದ ಚಾಲನಾ ಸಮಿತಿಯಲ್ಲಿ ಮುಖ್ಯ ನೀತಿಗಳ ಚರ್ಚೆಯಾಗಬೇಕಾದ ಅವಶ್ಯವನ್ನು ಎಡಪಕ್ಷಗಳು ಒತ್ತಿ ಹೇಳುತ್ತಿವೆ. ಒತ್ತಡವನ್ನೂ ಹೇರುತ್ತಿವೆ. ಆದರೂ ಸಂಯುಕ್ತರಂಗ ಸರಕಾರ ಹಲವು ಜನ.ವಿರೋಧಿ ಕ್ರಮಗಳನ್ನೂ ಕೈಗೊಳ್ಳುತ್ತಿವೆ. ಸಮಾನ ಕನಿಷ್ಠ ಕಾರ್ಯಕ್ರಮವೊಂದಿದೆ. ಆದರೆ ಎಲ್ಲವೂ ಈ ಕಾರ್ಯಕ್ರಮಕ್ಕೆ ಅನುಗುಣವಾಗಿಯೇ ನಡೆಯುತ್ತಿಲ್ಲ. ಈ ಹಿನ್ನೆಲೆಯಲ್ಲಿಯೇ ಕಾಂಗ್ರೆಸ್ ಮತ್ತು ಸಂಯುಕ್ತ ರಂಗ ಸರಕಾರಗಳ ಬಜೆಟ್ಟುಗಳನ್ನು ವಿಶ್ಲೇಷಿಸಬೇಕಾಗುತ್ತದೆ.

ಕಾಂಗ್ರೆಸ್ ಸರಕಾರ 1996-97ಕ್ಕೆ ಪೂರ್ಣ ಪ್ರಮಾಣದ ಬಜೆಟ್ ಮಂಡಿಸಲಿಲ್ಲ. ಯಾಕೆಂದರೆ ಅದರ ಅಧಿಕಾರದ ಅವಧಿ 1996ರ ಮೇ ತಿಂಗಳಿಗೆ ಕೊನೆಗೊಳ್ಳುವುದಿತ್ತು. ಆದ್ದರಿಂದ 1996-97ರ ಬಜೆಟ್ಟನ್ನು ಸಂಯುಕ್ತ ರಂಗ ಸರಕಾರದ ಹಣಕಾಸು ಮಂತ್ರಿ ಪಿ.ಚಿದಂಬರಂ ಮಂಡಿಸಿದರು.

ಮನಮೋಹನ ಸಿಂಗರ ಲೇಖಾನುದಾನ

ತಮ್ಮ ಅಧಿಕಾರಾವಧಿಯ ಕೊನೆಯಲ್ಲಿದ್ದ ನರಸಿಂಹರಾಯರ ಸರ್ಕಾರ 1996-97ನೇ ಸಾಲಿಗೆ ಪೂರ್ಣ ಪ್ರಮಾಣದ ಬಜೆಟನ್ನು ಮಂಡಿಸಲಿಲ್ಲ. ಬದಲಿಗೆ ನಾಲ್ಕು ತಿಂಗಳುಗಳಿಗೆ ಲೇಖಾನುದಾನ ಮಂಡಿಸಿತು. 1995ನೇ ಇಸವಿಯ ಫೆಬ್ರವರಿ 28 ರಂದು ಮಂಡನೆಯಾದ ಈ ಲೇಖಾನುದಾನವನ್ನೂ ಬೂರ್ಝ್ವಾ ಪತ್ರಿಕೆಗಳೂ ಟೀಕಿಸಿದ್ದವು. ಯಾಕೆಂದರೆ ಅದು ಕಾಂಗ್ರೆಸ್ ಸರ್ಕಾರದ ಚುನಾವಣಾ ಸಿದ್ಧತೆಯ ಕ್ರಮದಂತಿತ್ತು. ಐದು ವರ್ಷಗಳ ಕಾಲ ಉದಾರೀಕರಣವನ್ನು ಎಡೆಬಿಡದೆ ನಡೆಸಿಕೊಂಡು ಬಂದಿದ್ದ ಸರ್ಕಾರ ದೇಶದ ಜನತೆ ತನ್ನ ಕಾಲ ಕೆಳಗಿನ ಕಸ ಎಂಬಂತೆ ವರ್ತಿಸಿದ್ದ ಸರ್ಕಾರ ಈಗ ಮಾತ್ರ ತಾನು ಜನಸಾಮಾನ್ಯರ ಹಿತರಕ್ಷಕ ಎಂಬ ಪೋಸು ಕೊಡುವ ಪ್ರಯತ್ನ ಮಾಡಿತು. 'ಜನಪ್ರಿಯ' ಕಾರ್ಯಕ್ರಮಗಳ ಬದಲು ವಸ್ತುನಿಷ್ಠವಾಗಿ ದೇಶದ ಅಭಿವೃದ್ದಿಗೆ ಗಮನ ನೀಡುವ ನಿಷ್ಠುರ ಆರ್ಥಿಕ ಚಿಂತಕ ಎಂದೆಲ್ಲ ಹೊಗಳಿಸಿಕೊಂಡ ಡಾ|| ಮನಮೋಹನಸಿಂಗ್ ಮಹಾಶಯರೇ ಇಂತಹ ಜನಪ್ರಿಯ ಕಾರ್ಯಕ್ರಮಗಳಿಗೆ ಈ ಲೇಖಾನುದಾನದಲ್ಲಿ ಹೆಚ್ಚಿನ ಆದ್ಯತೆ ನೀಡಿದರು. ಕೆಲವು ಉದಾಹರಣೆಗಳನ್ನು ನೋಡುವುದಾದರೆ ಸಾಮಾಜಿಕ ಕಲ್ಯಾಣ ಯೋಜನೆಗಳಿಗೆ ಹೆಚ್ಚು ಹಣ ತೆಗೆದಿರಿಸಿದರು.

- ದಶಲಕ್ಷ ಬಾವಿ ಯೋಜನೆಗೆ 444 ಕೋಟಿ ರೂಪಾಯಿಗಳು
- ಉದ್ಯೋಗ ಭರವಸೆ ಯೋಜನೆಗೆ 1970 ಕೋಟಿ ರೂಪಾಯಿಗಳು
- ಶಾಲಾ ಮಕ್ಕಳಿಗೆ ಮಧ್ಯಾಹ್ನದ ಊಟದ ಯೋಜನೆಗೆ 880 ಕೋಟಿ ರೂಪಾಯಿಗಳು.

ಇವು ಚುನಾವಣೆಯ ಮೇಲೆ ಕಣ್ಣಿಟ್ಟೇ ಮಂಡಿಸಿದ ಲೇಖಾನುದಾನ ಎಂಬುದನ್ನು ಮನಮೋಹನಸಿಂಗ್‌ರ ಕಟ್ಟಾ ಅಭಿಮಾನಿಗಳೂ ಗಮನಿಸಿ ಬರೆದರು.

ಇನ್ನೂ ಕೆಲವು ಕ್ರಮಗಳನ್ನು ನೋಡುವುದಾದರೆ

- ಆದಾಯ ತೆರಿಗೆ ಕಸ್ಟಮ್ಸ್ ಮತ್ತು ಅಬ್ಕಾರಿ ಸುಂಕಗಳಲ್ಲಿ ವ್ಯತ್ಯಯವಿಲ್ಲ.
- ಗ್ರಾಮೀಣ ಅಭಿವೃದ್ಧಿಗೆ ಹೆಚ್ಚಿನ ಹಣ ತೆಗೆದಿರಿಸುವಿಕೆ.
- ರಾಷ್ಟ್ರೀಯ ಸಾಮಾಜಿಕ ನೆರವು ಕಾರ್ಯಕ್ರಮಗಳಿಗೆ 930 ಕೋಟಿ ರೂಪಾಯಿಗಳು ಮೀಸಲು ಇತ್ಯಾದಿ.
- ಸಾಮಾಜಿಕ ವಲಯಕ್ಕೆ ನಿಜದಲ್ಲಿ ಹೆಚ್ಚಿನ ಹಣವನ್ನೇನೂ ತೆಗೆದಿರಿಸಲಿಲ್ಲ ಆದರೆ ಕಡಿತ ಮಾಡಲಿಲ್ಲ ಅಷ್ಟೇ.

ಆದರೆ ಉದಾರೀಕರಣದ ವಿಷ ಫಲ ಕಂಡು ಉಂಡಿದ್ದ ಜನ ಸರಿಯಾಗೇ ಉತ್ತರ ನೀಡಿದ್ದರು. ಕಾಂಗ್ರೆಸ್ ಚುನಾವಣೆಯಲ್ಲಿ ಧೂಳಿಪಟವಾಯಿತು. ಉದಾರೀಕರಣ ಮಾಡುವ ಅದರ ಕನಸಿಗೆ ತೆರೆ ಬಿತ್ತು. ಕಾಂಗ್ರೆಸ್ಸೇ ಅಧಿಕಾರಕ್ಕೆ ಬಂದಿದ್ದರೆ ಅದರಲ್ಲೂ ಪೂರ್ಣ ಬಹುಮತದೊಂದಿಗೆ ಆರಿಸಿ ಬಂದಿದ್ದರೆ ಉದಾರೀಕರಣ ಭಾರತ ದೇಶದ ಮೇಲ್ಭಾವಣಿಯನ್ನೇ ಹಾರಿಸಿಬಿಡುತ್ತಿತ್ತು.

ಸಂಯುಕ್ತರಂಗ ಸರ್ಕಾರ ಮತ್ತು ಉದಾರೀಕರಣ

ಸಾರ್ವತ್ರಿಕ ಚುನಾವಣೆಯ ನಂತರ ಸಂಯುಕ್ತರಂಗ ಸರ್ಕಾರ ಅಧಿಕಾರಕ್ಕೆ ಬಂತು. ಕರ್ನಾಟಕದಲ್ಲೂ ಮುಖ್ಯಮಂತ್ರಿಯಾಗಿ ನರಸಿಂಹರಾಯರ ಉದಾರೀಕರಣದ ಹಲವು ಕ್ರಮಗಳನ್ನು ಜಾರಿಗೆ ತಂದ ಶ್ರೀ ಹೆಚ್.ಡಿ. ದೇವೇಗೌಡರು ಪ್ರಧಾನ ಮಂತ್ರಿಗಳಾದರು. ನರಸಿಂಹರಾಯರ ಸರ್ಕಾರದಲ್ಲಿ ವಾಣಿಜ್ಯ ಮಂತ್ರಿಯಾಗಿದ್ದ ಪಿ. ಚಿದಂಬರಂ ಕೇಂದ್ರದ ಹಣಕಾಸು ಮಂತ್ರಿಗಳಾದರು. ಇದು ನರಸಿಂಹರಾಯರ ಸರ್ಕಾರದ ಮುಂದುವರಿಕೆಯಂತೇ ಎಂದರು ಕೆಲವರು. ಆದರೆ ಸಮಾನ ಕನಿಷ್ಠ ಕಾರ್ಯಕ್ರಮ ಮತ್ತು ಚಾಲನಾ ಸಮಿತಿಯ ರೂಪದಲ್ಲಿ ಕಡಿವಾಣಗಳು ಬಂದವು. ಆದರೆಈ ಕಡಿವಾಣ ಅಂತಹ ಹಿಡಿತ ಸಾಧಿಸುವ ಕಡಿವಾಣವಾಗಿ ಉಳಿಯಲಿಲ್ಲ. ಸಮಾನ ಕನಿಷ್ಠ ಕಾರ್ಯಕ್ರಮದ ಹಲವು ಅಂಶಗಳನ್ನು ತಮಗೆ ಸೈದ್ಧಾಂತಿಕ ತಿಳುವಳಿಕೆಗೆ ತಕ್ಕಂತೆ ತಿರುಚಿ ವಿರೋಧಿ ಕ್ರಮಗಳನ್ನೇ ಕೈಗೊಂಡರು. ಪಿ.ಚಿದಂಬರಂ ಎಂಬ ಹಣಕಾಸು ಮಂತ್ರಿ ವಿದೇಶೀ ಬಂಡವಾಳಿಗರಿಗೆ ರತ್ನಗಂಬಳಿಯ ಸ್ವಾಗತ ನೀಡಲು ಸನ್ನದ್ಧರಾಗೇ ಇದ್ದಾರೆ. ಅಲ್ಲದೆ ಈತ ಐಎಂಎಫ್-ವಿಶ್ವಬ್ಯಾಂಕ್‌ಗಳಿಗೆ ಅವರ ನಿರ್ದೇಶನದಂತ ನಡೆವ ಭರವಸೆಯನ್ನೂ ನೀಡಿದ್ದಾರೆ. ವಿದೇಶೀ ಹೂಡಿಕೆದಾರರು ನಮ್ಮ ದೇಶದಲ್ಲಿ ಹಣ ಹೂಡಲು ಎಲ್ಲ ತರಹದ ನಿರ್ಬಂಧಗಳ ಸಡಿಲಿಕೆ ಮಾಡುವ ಭರವಸೆಯನ್ನೂ ನೀಡಿದ್ದಾರೆ.

ಮೇಲಿಂದ ಮೇಲೆ ಸಮಾನ ಕನಿಷ್ಠ ಕಾರ್ಯಕ್ರಮವನ್ನೇ ಜಾರಿಗೆ ತರುತ್ತಿರುವ ಮಾತುಗಳನ್ನು ಆಡುತ್ತಿದ್ದರೂ ಹಣಕಾಸು ಮಂತ್ರಿಗಳ ಆಳದಲ್ಲಿ ಉದಾರೀಕರಣದ ವಿಚಾರಗಳು ನರ್ತನಗೈಯುತ್ತಿವೆ. ಇಂತಹ ಪಿ.ಚಿದಂಬರಂ 1996-97 ರ ಪೂರ್ಣ ಪ್ರಮಾಣದ ಬಜೆಟ್ಟನ್ನು ಮಂಡಿಸಿದರು. ಈ ಬಜೆಟ್ಟಿನಲ್ಲಿ ಕ್ರಾಂತಿಕಾರಕವಾಗಿ ಜನಪರ ಎನ್ನುವಂತಹದ್ದೇನೂ ಇಲ್ಲದಿದ್ದರೂ ಜನ ವಿರೋಧಿ ಅಂಶಗಳು ಬಹಳ ಕಡಿಮೆಯಾಗಿದ್ದವು. ಈ ಬಜೆಟ್ಟಿನ ಮುಖ್ಯಾಂಶಗಳನ್ನು ನೋಡುವುದಾದರೆ

- ಶೂನ್ಯ ತೆರಿಗೆ ಕಂಪನಿಗಳ ಮೇಲೆ ಕನಿಷ್ಠ ಪರ್ಯಾಯ ತೆರಿಗೆ. ಉದಾರೀಕರಣದ ಫಲವಾಗಿ ಹಲವು ಕಂಪನಿಗಳು ಲಾಭಗಳಿಸುತ್ತಿದ್ದರೂ ತೆರಿಗೆ ಕೊಡುತ್ತಿರಲಿಲ್ಲ. ಒಂದಲ್ಲ ಒಂದು ಸೆಕ್ಷನ್ನಿನಡಿ ತೆರಿಗೆ ವಿನಾಯಿತಿ ಪಡೆಯುತ್ತಿದ್ದರು. 1994-95ರ ಸಾಲಿನಲ್ಲಿ 1047 ಕಂಪನಿಗಳು 14440 ಕೋಟಿ ರೂಪಾಯಿಗಳ ಲಾಭ ಹೊಂದಿದ್ದವು. ಆದರೆ ತೆರಿಗೆ ತೆತ್ತಿದ್ದು ಶೂನ್ಯ. ಇದನ್ನು ಹಲವು ಬೂರ್ಝ್ವಾ ಆರ್ಥಿಕ ತಜ್ಞರೂ ಎತ್ತಿ ತೋರಿದ್ದರು. ಈ ಬಜೆಟ್ ಕನಿಷ್ಠ ಪರ್ಯಾಯ ತೆರಿಗೆ ಹೇರುವುದರ ಮೂಲಕ ಇಂತಹ ಕಂಪನಿಗಳೂ ತೆರಿಗೆ ತೆರುವಂತೆ ಮಾಡಿತು.
- ನೀರಾವರಿ ಮೇಲಿನ ಹೂಡಿಕೆಗಳ ಮೇಲೆ ಐದು ವರ್ಷಗಳ ಕಾಲ ತೆರಿಗೆ ರಜಾ.
- ಸಿಗರೇಟುಗಳ ಮೇಲೆ ಹೆಚ್ಚಿನ ತೆರಿಗೆ
- ಅಂತರ್ರಚನಾ ಸೌಕರ್ಯಗಳ ಅಭಿವೃದ್ಧಿಗೆ ಕಾರ್ಪೊರೇಷನ್ ರಚನೆ ಇತ್ಯಾದಿ.

ಹಾಗೆ ಈ ಬಜೆಟ್ಟಿನಲ್ಲಿ ಹಲವು ನಕಾರಾತ್ಮಕ ಅಂಶಗಳೂ ಇದ್ದವು. ಅವುಗಳೆಂದರೆ

- ಯೋಜನಾ ವೆಚ್ಚಕ್ಕೆ ಈ ಬಜೆಟ್ಟಿನ ಕೊಡುಗೆ ಅತ್ಯಲ್ಪ.
- ಮೂಲಭೂತ ಕನಿಷ್ಠ ಅಗತ್ಯವನ್ನು ಪೂರೈಸುವ ಜವಾಬ್ದಾರಿಯನ್ನು ಸರ್ಕಾರ ವಹಿಸುವ ಮಾತು ಇದರಲ್ಲಿಲ್ಲ.
- ಉದ್ಯೋಗ ನಿರ್ಮಾಣದ ವಿಷಯದಲ್ಲೂ ಅದು ನಿರಾಶೆ ಉಂಟು ಮಾಡಿತು.
- ಉದಾರೀಕರಣದ ಮೂಲಕ ಸಾಮಾಜಿಕ ನ್ಯಾಯ ತರುವ ಅಸಂಬದ್ಧ ಮಾತುಗಳನ್ನು ಈ ಬಜೆಟ್ ಆಡಿತು.

ಸಂಯುಕ್ತರಂಗ ಸರಕಾರದ ಕೆಲವು ಮುಖ್ಯ ಆರ್ಥಿಕಕ್ರಮಗಳು

ಎಲ್ಲಕ್ಕೂ ಕಿರೀಟವಿಡುವಂತಹ ಜನ ವಿರೋಧಿ ಕ್ರಮವೆಂದರೆ ಪೆಟ್ರೋಲಿಯಂ ಉತ್ಪನ್ನಗಳ ಬೆಲೆಯನ್ನು ವಿಪರೀತವಾಗಿ ಏರಿಸಿದ್ದು. ತೈಲ ಖಾತೆಯಲ್ಲಿನ ಕೊರತೆಯನ್ನು ನೀಗಿಸುವ ಸಲುವಾಗಿ ಜಾರಿಗೆ ತಂದ ಕ್ರಮವೆಂದು ಸರಕಾರ ಇದನ್ನು ಸಮರ್ಥಿಸಿಕೊಂಡಿತು. ನಿಷ್ಠುರ ನಿರ್ಧಾರ ಕೈಗೊಂಡು ದೇಶದ ಒಳಿತನ್ನು ಸಾಧಿಸುತ್ತಿದ್ದೇನೆ ಎಂದಿತು. ಇದೊಂದೇ ಕ್ರಮ ಈ ಸಂಯುಕ್ತರಂಗ ಸರಕಾರ ಜನಪರವಾದದ್ದಲ್ಲ ಎಂಬ ಭಾವನೆಯನ್ನು ಉಂಟುಮಾಡಿದೆ. ಪೆಟ್ರೋಲಿಯಂ ಉತ್ಪನ್ನಗಳಿಂದ ಲಾಭ ಪಡೆವ ಬಂಡವಾಳಿಗರಿಂದ ಹೆಚ್ಚು ವಸೂಲಿ ಮಾಡಿ ಜನ ಸಾಮಾನ್ಯರ ಹೊರೆ ಕಡಿಮೆ ಮಾಡಬಹುದೆಂಬ ತೀರಾ ಸಾಮಾನ್ಯ ವಿಷಯವೂ ಈ ಸರಕಾರದ ತಲೆಯೊಳಗೆ ಹೋಗಲಿಲ್ಲ.

ಬೆಲೆ ಏರಿಕೆ ಮತ್ತು ಉದಾರೀಕರಣದ ವಿಷಯದಲ್ಲಿ ಹಿಂದಿನ ಕಾಂಗ್ರೆಸ್ ಸರಕಾರದ ತಂತ್ರವನ್ನು ಸಂಯುಕ್ತ ರಂಗ ಸರಕಾರ ಆಳವಡಿಸಿಕೊಂಡಿತು. ಬಜೆಟ್ಟಿನಲ್ಲಿ ಪ್ರಸ್ತಾಪಿಸದೆ ಸಂಸತ್ತಿನಲ್ಲಿ ಚರ್ಚಿಸದೆ ಏಕಾಏಕಿ ಬೆಲೆ ಏರಿಕೆ/ಉದಾರೀಕರಣದ ಕ್ರಮಗಳನ್ನು ಘೋಷಿಸುವುದೇ ಆ ತಂತ್ರ.

ವೆಚ್ಚ ನಿಯಂತ್ರಣ

ಸರ್ಕಾರಿ ನೌಕರರ ವೇತನ ಸ್ತಂಭನವೂ ಸೇರಿದ ಖರ್ಚುಹಿಡಿತ ಕ್ರಮ ಘೋಷಿಸಿತು. ಆದರೆ ಎಡಪಕ್ಷಗಳ ಮಧ್ಯಸ್ಥಿಕೆಯಿಂದಾಗಿ ಅದನ್ನು ಹಿಂತೆಗೆದುಕೊಂಡಿತು. ತೆರಿಗೆ ಸುಧಾರಣೆ, ತೆರಿಗೆ ಸಂಗ್ರಹಣದ ತಳಹದಿಯನ್ನು ವ್ಯಾಪಕಗೊಳಿಸಲು ಕನಿಷ್ಠ ಪರ್ಯಾಯ ತೆರಿಗೆಯ ಹೇರಿಕೆ.

ಪುಟ ಐದು ನೋಡಿ

......ಇದೆಂಥಾ ಘೋಷಣಾ ಪತ್ರ!

ಹಿರಿದು ಸಂಗ್ರಹಿಸಲೆಂದೇ ಈಗ ಸಾರಿಗೆ ದರಗಳನ್ನು ಶೇ. 35-40ರಷ್ಟು ಏರಿಸುವ ಹಾಗೂ ವಿದ್ಯುತ್ ದರಗಳನ್ನು ಮತ್ತೆ ಏಪ್ರಿಲ್‌ನಲ್ಲಿ ಏರಿಸುವ, ಮೀಟರ್ ಬದಲಾಯಿಸುವ ದರ, ವಿದ್ಯುತ್ ಸಕ್ರಮಗೊಳಿಸಲು ದಂಡ ವಸೂಲಾತಿ ಮೊದಲಾದ ಕ್ರಮಗಳಿಗೆ ಕೈ ಹಾಕುತ್ತಿರುವುದು.

1997-98ರ ಯೋಜನೆ

97-98ರ ಯೋಜನೆಯನ್ನು ಅಂತಿಮಗೊಳಿಸಲು ಇತ್ತೀಚಿಗೆ ಮುಖ್ಯಮಂತ್ರಿ, ಉಪಮುಖ್ಯಮಂತ್ರಿಗಳು ಯೋಜನಾ ಆಯೋಗದೊಡನೆ ಚರ್ಚಿಸಲು ಹೋಗಿದ್ದಾಗ ಹಿಂದಿನ ವರ್ಷದ ಈ ತಪ್ಪನ್ನು ತಿದ್ದಿಕೊಳ್ಳಲು ರಾಜ್ಯ ಸರಕಾರಕ್ಕೆ ಆದೇಶ ನೀಡಲಾಗಿದೆ. ಆ ಮೂಲಕ ಎಂದರೆ ಸರಕಾರ ಒದಗಿಸುವ ಎಲ್ಲಾ ಸೇವೆಗಳನ್ನು ಹಾಗೂ ಉತ್ಪಾದಿಸುವ ವಸ್ತುಗಳನ್ನು ಅವುಗಳ ಮಾರುಕಟ್ಟೆ ಬೆಲೆಯಲ್ಲಿ ಒದಗಿಸಬೇಕೆಂದು ಈ ನಿರ್ದೇಶನದ ಸಾರ. ಹಿಂದಿನ ವರ್ಷದ ಯೋಜನಾ ಗುರಿಯಾದ 4300 ಕೋಟಿ ಅವಾಸ್ತವಿಕವೆಂದು ಅಂದರೆ ಆ ಯೋಜನೆಯನ್ನು ಪೂರೈಸಲು ಅಗತ್ಯವಾದ ಹಣವನ್ನು ಬೆಲೆ, ದರ ಏರಿಕೆಯ ಮೂಲಕ ಜನತೆಯನ್ನು ಸುಲಿದು ಸಂಗ್ರಹಿಸಲು ಹೋದರೆ ನಿರಂತರ ಪ್ರತಿಭಟನೆಯನ್ನು ಎದುರಿಸಬೇಕಾಗುವುದೆಂದೂ ಸರಕಾರಕ್ಕೆ ಅರಿವಾಗಿದೆ. ಅದೇ ಕಾರಣಕ್ಕೆ 97-98ರ ಸಾಲಿನ ಯೋಜನೆಯನ್ನು 200 ಕೋಟಿ ರೂ.ಗಳಷ್ಟು ಕಡಿಮೆ ಮಾಡಿ ನಿರ್ದಿಷ್ಟಪಡಿಸಲಾಗಿದೆ. ಹಿಂದಿನ ವರ್ಷದ ಗುರಿಗಿಂತ ಕಡಿಮೆ ಗುರಿಯನ್ನು ಹಾಕಿಕೊಂಡಿರುವುದು ಇದೇ ಮೊದಲ ಬಾರಿಗೆಂದು ಕಾಣುತ್ತದೆ. ಒಂದು ರೀತಿಯಲ್ಲಿ ಇದು ಜನತೆಯ ಪ್ರತಿಭಟನೆಯ ಶಕ್ತಿಯ ಸಾಧನೆ ಅಥವಾ ಜನತೆಯ ಹೋರಾಟಕ್ಕೆ ಸಂದ ವಿಜಯ.

ಆದರೆ ಕರ್ನಾಟಕದ ಅಭಿವೃದ್ಧಿಯ ಗತಿಯೇನು? ಒಂದು ಗಂಟೆಯಲ್ಲಿ ಪ್ರಯಾಣ ಮಾಡಬಹುದಾದ ರಸ್ತೆಗಳು ಎರಡೂವರೆ-ಮೂರು ಗಂಟೆ ತೆಗೆದುಕೊಳ್ಳುತ್ತಿರುವುದು ಹಳ್ಳಿಗಳ ರಸ್ತೆಗಳಿಗಿಂತ ಅದ್ವಾನವಾಗಿರುವ ರಾಜ್ಯ ಹೆದ್ದಾರಿಗಳು - ಇವುಗಳಿಂದ ಮಾರುಕಟ್ಟೆಗೆ ವಸ್ತುಗಳನ್ನು ಸಾಗಿಸಲಾಗದೆ ಆರ್ಥಿಕವಾಗಿ ಅತ್ಯಂತ ತೀವ್ರ ಹಿಂದುಳಿಕೆಯನ್ನು ಕಂಡಿರುವ ಹೈದ್ರಾಬಾದ್ ಕರ್ನಾಟಕ, ಬಾಂಬೆ ಕರ್ನಾಟಕದ ಬಿಜಾಪುರ ಜಿಲ್ಲೆ ಇವುಗಳು ಹಾಗೇ ಉಳಿಯಬೇಕೇ? ರಾಜ್ಯದ ಅಭಿವೃದ್ಧಿಗೆಂದು ರಾಜ್ಯದ ಶ್ರೀಮಂತರ ಮೇಲೆ ತೆರಿಗೆ ಹಾಕಿ - ರಾಜ್ಯದ ಅಧಿಕಾರಕ್ಕೆ ಬರುವ ಕೃಷಿ ಆದಾಯ ತೆರಿಗೆ ಹಾಕುವ ವಿಪರೀತವಾಗಿ ಹೆಚ್ಚುತ್ತಿರುವ ನಗರ ಆಸ್ತಿಯ ಮೇಲಿನ ತೆರಿಗೆ, ಸೋರಿ ಹೋಗುತ್ತಿರುವ ನೂರಾರು ಕೋಟಿ ರೂ.ಗಳ ಎಕ್ಸೈಸ್ ತೆರಿಗೆ(ಮದ್ಯಗಳ ಮೇಲೆ ಹಾಕುವ ತೆರಿಗೆ) ಹೆಚ್ಚುತ್ತಿರುವ ಸೆಕೆಂಡ್ಸ್ ಮದ್ಯಗಳು(ತೆರಿಗೆ ತಪ್ಪಿಸಿಕೊಂಡ ಮದ್ಯ) ಸರಕಾರಕ್ಕೆ ಸಂದಾಯವಾಗದ ಮಾರಾಟ ತೆರಿಗೆ, ಹತ್ತಾರು ಲಕ್ಷ ರೂ.ಗಳ ಆಸ್ತಿ ನೊಂದಣಿಯಲ್ಲಿ ಆಗುತ್ತಿರುವ ದಿನನಿತ್ಯದ ಮೋಸ - ಇವುಗಳೆಲ್ಲದರ ಮರೆಯಲ್ಲಿ ಅಡಗಿರುವ ಅಗಾಧ ಭ್ರಷ್ಟಾಚಾರ. ಇವುಗಳಿಗೆ ತಡೆ ಹಾಕಿ ರಾಜ್ಯದ ಸಂಪನ್ಮೂಲದ ಸಂಗ್ರಹಣೆಯನ್ನು ಉತ್ತಮಗೊಳಿಸುವ ಜನ ವಿರೋಧಿಯಲ್ಲದ ಮಾರ್ಗಗಳಿವೆ ರಾಜ್ಯದ ಅಭಿವೃದ್ಧಿಗೆ. ಆದರೆಅದಕ್ಕೆ ಬದಲಾಗಿ ರಾಜ್ಯ ಸರಕಾರ ರಾಜ್ಯಪಾಲರ ಭಾಷಣದ ಮೂಲಕ ತನ್ನ ನೀತಿಯೇನು ಎಂದು ಸಾರಿದೆ. ಜನತೆಯ ಮೇಲೆ ಧಾಳಿಯೆಸಗುವ ತನ್ನ ಸಂಕಲ್ಪವನ್ನು ಸಾರಿದೆ.

ಪ್ರತಿಯೊಂದು ಅವುಗಳ ಬೆಲೆಗೆ?

ಇದು ಐಎಂಎಫ್ ಹಾಗೂ ಗ್ಯಾಟ್ (ಈಗ ವಿಶ್ವ ವಾಣಿಜ್ಯ ಸಂಸ್ಥೆ ಅಥವಾ ವಿ.ವಾ.ಸಂ.) ಬಡ ದೇಶಗಳು ಮಾತ್ರವೇ ಅಲ್ಲದೆ ಶ್ರೀಮಂತ ದೇಶಗಳ ಅಮೇರಿಕಾ-ಯುರೋಪುಗಳ ಬಡಜನರ ಗಂಟಲಲ್ಲಿ ತುರುಕುತ್ತಿರುವ ನಿಧಾನ ವಿಷಗಳಲ್ಲೊಂದು. ಕರ್ನಾಟಕ ಸರಕಾರ ಅದನ್ನು ವೇದ ವಾಕ್ಯದಂತೆ ಪುನರುಚ್ಚರಿಸಿದೆ. ಸರಕಾರ ಒದಗಿಸುವ ಎಲ್ಲ ಸೇವೆಗಳು ಹಾಗೂ ವಸ್ತುಗಳನ್ನು ಅವುಗಳ ಆರ್ಥಿಕ ವೆಚ್ಚಕ್ಕೆ ಅನುಗುಣವಾಗಿ ಬೆಲೆ ನಿರ್ಧರಿಸಬೇಕು ಎನ್ನುತ್ತಾರೆ ರಾಜ್ಯಪಾಲರು. ಭಾರತದ ಬಡವರಿಗಾಗಿ ನೀಡುತ್ತಿರುವ ಪ್ರತ್ಯಕ್ಷ ಹಾಗೂ ಅಪ್ರತ್ಯಕ್ಷ ಸಬ್ಸಿಡಿ(ಸಹಾಯಧನ)ಯನ್ನು ತೆಗೆದು ಹಾಕಬೇಕೆಂಬುದು ಅದರ ಅರ್ಥ.ಅಂದರೆ ಕೇವಲ ಬಸ್ ದರ, ವಿದ್ಯುತ್ ದರ, ನೀರಿನ ದರಗಳು ಮಾತ್ರವೇ ಅಲ್ಲ, ನೀರಾವರಿ ದರ, ಶಿಕ್ಷಣ ಶುಲ್ಕಗಳು ಕೂಡಾ ಅಲ್ಲ. ಇಲ್ಲಿಯವರೆಗೂ ಇಲ್ಲದ ರಸ್ತೆ ಕರ, ಸೇತುವೆ ಕರ, ಉದ್ಯಾನ ಕರ, ಪೌರ ಕಂದಾಯಗಳು ಎಲ್ಲದರ ಏರಿಕೆ.

ಸರಕಾರ ಇರುವುದು ಜನರಿಗೆ ಸೇವೆ ಸಲ್ಲಿಸಲಲ್ಲ, ಒಂದು ಅಂಗಡಿಯನ್ನು ತೆರೆದು ವಸ್ತುಗಳನ್ನು ಮಾರುವುದಕ್ಕಾಗಿ ಎಂಬಂತೆ ದರಗಳ ಏರಿಕೆ. ಕರ್ನಾಟಕಕ್ಕೆ ಬರಲಿರುವ ವಿದೇಶೀ ಹಾಗೂ ದೇಶಿ ಗುತ್ತೇದಾರರುಗಳಿಗೆ ರಂಗ ಸಜ್ಜು ಮಾಡಲು - ಅವರೇ ರಸ್ತೆ, ಸೇತುವೆ, ನಿರ್ಮಾಣ ಮಾಡಲು, ಬಸ್ ಓಡಿಸಲು, ವಿದ್ಯುತ್ ತಯಾರಿಸಲು - ಈ ಸಿದ್ಧಾಂತವನ್ನು ರಾಜ್ಯ ಸರಕಾರ ಘೋಷಿಸಿದೆ.

ಕರ್ನಾಟಕದಲ್ಲಿ ಇಂದು ಕೊರತೆಯಾಗಿರುವ ಮೂಲಭೂತ ಸೇವೆಗಳಲ್ಲಿ, ಕರ್ನಾಟಕದ ಜನತೆಯ ಜೀವನಾವಶ್ಯಕ ಹಾಗೂ ಅಭಿವೃದ್ಧಿಗೆ ಪೂರಕವಾಗಿ ವಿದೇಶೀ ಬಂಡವಾಳದೇಶೀ ಖಾಸಗಿ ಬಂಡವಾಳ ಹೂಡುವುದು ಬೇಡ ಎಂದು ನಾವು ಹೇಳುವುದಿಲ್ಲ. ಕರ್ನಾಟಕದ ಅಭಿವೃದ್ಧಿಯ ಅಗತ್ಯಗಳಿಗೆ ಇಂದು ಅಪಾರ ಬಂಡವಾಳ ಬೇಕಾಗಿದೆ. ಆದರೆ ಬಂಡವಾಳದ ಶರತ್ತುಗಳ ಮೇಲೆ, ಲಾಭ, ದುರ್ಲಾಭದ ಉದ್ದೇಶದಿಂದಲ್ಲ, ನಮ್ಮ ಅವಶ್ಯಕತೆಗಳಿಗೆ ತಕ್ಕಂತೆ. ಆದರೆ ಇಂದು ಈ ವಿದೇಶೀ ಬಂಡವಾಳ ಬರುತ್ತಿರುವುದರ ಪರಿಣಾಮವೇನು?

ಮತ್ತೆ ಪೊಳ್ಳು ಭರವಸೆ?

ಇಂದು ಭಾರತದಲ್ಲಿ ಅಂತೆಯೇ ಕರ್ನಾಟಕದಲ್ಲಿಯೂ ಶೇ. 40ಕ್ಕಿಂತ ಹೆಚ್ಚು ಬಡತನದ ರೇಖೆಯ ಕೆಳಗೆ ಇದ್ದಾರೆ ಎಂದು ರಾಜ್ಯದ ಅರ್ಥ ಮಂತ್ರಿಗಳು ಹಿಂದಿನ ಬಜೆಟ್ ಭಾಷಣದಲ್ಲಿ ಸಾರಿದ್ದಾರೆ. ಈ ಬಡತನದ ರೇಖೆಯ ಕೆಳಗಿರುವವರ ಗತಿಯೇನು? ಬಡತನದ ರೇಖೆ ಎಂದರೆ ಎರಡು ಹೊತ್ತಿಗೆ ಬೇಕಾಗುವಷ್ಟು ಊಟ ಮಾತ್ರ ಎಂದ ಮೇಲೆ ಬಡತನ ರೇಖೆಯ ಮೇಲೂ ಇರುವ ಬಡವರ ಕಥೆ ಏನು? ಎಲ್ಲ ದರಗಳ ಬೆಲೆಗಳ ಏರಿಕೆಯಿಂದ ಬಡತನದ ರೇಖೆಯ ಕೆಳಗೆ ದೂಡಲ್ಪಡುವ ಮತ್ತಷ್ಟು ಜನ ಬದುಕು ಹೇಗೆ?

ಸಮಾಜದ ದುರ್ಬಲ ವರ್ಗಗಳಿಗೆ ಕಷ್ಟವಾಗದಂತೆ ಈ ಬೆಲೆ ಏರಿಕೆಯನ್ನು ಸಾಧಿಸಲು ಸರಕಾರ ಬಯಸುತ್ತದೆ ಎಂಬ ಈ ಹಿಂದಿನ ಐದು ವರ್ಷಗಳಲ್ಲಿ ನೂರಾರು ಬಾರಿ ಕೇಳಲ್ಪಟ್ಟ ಪೊಳ್ಳು ಭರವಸೆಯನ್ನು ಮತ್ತೆ ರಾಜ್ಯಪಾಲರು ಪುನರುಚ್ಚರಿಸಿದ್ದಾರೆ. ನಂಬಬಹುದಾದ ರೀತಿಯ ಯಾವುದೇ ಕ್ರಮ ಈ ಭಾಷಣದಲ್ಲಿಲ್ಲ.

ಈಗ ಹತ್ತಾರು ವರ್ಷಗಳಿಂದಲೂ ಬೆಲೆ ಏರಿಕೆಯಿಂದ ಬಳಲುತ್ತಿರುವ ದುರ್ಬಲ ವರ್ಗಗಳಿಗೆ ಕನಿಷ್ಠ ಕೂಲಿಯ ಏರಿಕೆಯಿಲ್ಲ. ಅದರ ಮಾತೂ ಕೂಡಾ ಇಲ್ಲ. ಅವರ ಶ್ರಮವನ್ನು ಅದರ ಬೆಲೆಯಲ್ಲಿ ಕೊಳ್ಳುವ ಪ್ರಶ್ನೆ ಇಲ್ಲ. ತೊಗರಿ, ಈರುಳ್ಳಿ(ಉಳ್ಳಾಗಡ್ಡಿ), ಕಬ್ಬು, ಹತ್ತಿ ಮೊದಲಾದ ಅನೇಕ ಬೆಳೆಗಳನ್ನು ಅದರ ಬೆಲೆಯಲ್ಲಿ ಕೊಳ್ಳುವ ಮಾತಿಲ್ಲ. ರೈತರ ಸಂಕಷ್ಟಕ್ಕೆ ಯಾವುದೇ ಪರಿಹಾರವಿಲ್ಲ.

ಅದಕ್ಕೆ ಬದಲಾಗಿ ಅವರನ್ನು ಮತ್ತಷ್ಟು ಕಂಗೆಡಿಸುವಂತೆ ಹೊಸ ಕೃಷಿ ನೀತಿಯನ್ನು ಜಾರಿಗೆ ತರಲು ಕ್ರಮಗಳನ್ನು ಘೋಷಿಸಲಾಗಿದೆ. ನೀರಾವರಿ ಯೋಜನೆಗಳ ನೀರನ್ನು ಹಂಚಿಕೊಳ್ಳುವ ಅಧಿಕಾರವನ್ನು ರೈತರ ಗುಂಪುಗಳಿಗೇ ಬಿಡಲಾಗುವುದು. ಯಾವ ಬೆಳೆಯನ್ನು ಬೆಳೆಯುವುದು ಎಂಬ ತೀರ್ಮಾನವನ್ನು ಅವರಿಗೇ ಬಿಡಲಾಗುವುದು ಎಂದು ಸಾರಲಾಗಿದೆ.

ಇದರ ಪರಿಣಾಮವೆಂದರೆ ಹಳ್ಳಿಗಳಲ್ಲಿ ಪ್ರಬಲವಾಗಿರುವ ಭೂಮಾಲ್ಲಕರ ಶ್ರೀಮಂತರ ರೈತರ ಕೈಗೆ ಈಗ ಅವರ ಮುಷ್ಟಿಯಲ್ಲಿರುವ ಭೂಮಿಯ ಜೊತೆಗೆ ಸರಕಾರದ ಹಣದಿಂದ -ಬಡವರ ತೆರಿಗೆಯ ಹಣದಿಂದ ಕಟ್ಟಲಾದ ಜಲಾಶಯಗಳ ನೀರನ್ನು

ಶ್ರೀಮಂತರ ಭೋಗಾನುಕೂಲಕ್ಕಾಗಿ ಮತ್ತೆ ಆಮದು ಉದಾರೀಕರಣ

ಸಂಯುಕ್ತ ರಂಗದ ಸರಕಾರವೂ ಈಗ ಕಾಂಗ್ರೆಸ್ ಸರಕಾರದಂತೆ ಆಮದು ಉದಾರೀಕರಣ ಮಾಡಿದೆ. ಬಜೆಟ್ಟು ಕೆಲವೇ ದಿನಗಳಷ್ಟೇ ದೂರವಿರುವಾಗ ಅದು 161 ವಸ್ತುಗಳ ಆಮದನ್ನು ಉದಾರೀಕರಿಸಿದೆ. ಸಂಯುಕ್ತ ರಂಗ ಸರಕಾರದ ಮಂತ್ರಿ ಬಿ.ಬಿ.ರಾಮಯ್ಯ ಇದನ್ನು ಫೆಬ್ರವರಿ 9 ರಂದು ತಿಳಿಸಿದ್ದಾರೆ. ಈ ವಸ್ತುಗಳಲ್ಲಿ ಸೌಂದರ್ಯ ಸಾಮಗ್ರಿ, ಅತ್ತರುಗಳು, ಕಾರಿನ ಏರ್‌ಕಂಡಿಷನರ್‌ಗಳು, ಕ್ಯಾಮರಾ, ಗಾಜಿನ ವಸ್ತುಗಳು, ರಕ್ಷಣೆ ಯಂತ್ರಗಳು ಸೇರಿವೆ.

ಮೇಲು ನೋಟದಲ್ಲೇ ಈ ವಸ್ತುಗಳು ಶ್ರೀಮಂತರ ಭೋಗ ವಸ್ತುಗಳು ಎಂಬುದು ಸ್ಪಷ್ಟವಾಗಿಬಿಡುತ್ತದೆ. ಈಗ ಆಮದು ಉದಾರೀಕರಣ ಏಕೆಂಬುದಕ್ಕೆ ಮಂತ್ರಿ ಮಹಾಶಯರು ವಿವರಣೆ ನೀಡುತ್ತ ಈ ವರ್ಷಗಳಲ್ಲಿ ಆಮದು ಕಡಿಮೆಯಾಗಿರುವುದರಿಂದ ಆಮದಿನ ಮೇಲಿನ ಸುಂಕ ಸಂಗ್ರಹಣೆ ಕಡಿಮೆಯಾಗಿದೆ. ಆದ್ದರಿಂದ ಸುಂಕ ಸಂಗ್ರಹಣೆ ಹೆಚ್ಚಿಸಲು ಈ ಕ್ರಮ ಎಂದಿದ್ದಾರೆ. ಆದರೆ ಈ ಸುಂಕ ಸಂಗ್ರಹಣೆಗಾಗಿ ಅತ್ಯಮೂಲ್ಯವಾದ ವಿದೇಶೀ ವಿನಿಮಯ ದೇಶದ ಹೊರಗೆ ಹರಿದು ಹೋಗುತ್ತದೆ ಎಂಬುದು ಮಂತ್ರಿ ಮಹಾಶಯರಿಗೆ ಗೊತ್ತಾಗಬೇಕಲ್ಲವೇ?

ಇದಲ್ಲದೇ ಏಪ್ರಿಲ್ ತಿಂಗಳಲ್ಲಿ ಮುಂದಿನ ಐದು ವರ್ಷಗಳಿಗಾಗಿ ಆಮದು ರಫ್ತು ನೀತಿಯನ್ನು ಘೋಷಿಸುವುದಾಗಿ ಅವರು ಹೇಳಿದ್ದಾರೆ.

ಈ ಸಮಯದಲ್ಲಿ ಯಾಕೆ ಈ ಆಮದು ಉದಾರೀಕರಣ ಎನ್ನುವುದರ ಬಗ್ಗೆ ಮಂತ್ರಿಗಳು ಏನೂ ಹೇಳಿಲ್ಲ. ಆದರೆ ಭಾರತದ ಆಮದು ಕಡಿಮೆಯಾದರೆ ಅದರಿಂದ ಅಭಿವೃದ್ಧಿ ಹೊಂದಿದ ದೇಶಗಳ ರಫ್ತು ಕಡಿಮೆಯಾಗಿ ಅವರ ಆದಾಯ ಕಡಿಮೆ ಆಗುತ್ತದೆ. ಆದ್ದರಿಂದ ಐಎಂಎಫ್ ವಿಶ್ವಬ್ಯಾಂಕ್‌ಗಳ ಸಹಿತ ಸಾಮ್ರಾಜ್ಯಶಾಹಿಗಳ ಲಾಬಿ ಈ ಆಮದು ಉದಾರೀಕರಣಕ್ಕಾಗಿ ಒತ್ತಡ ಹೇರುತ್ತಲೇ ಇರುತ್ತವೆ. ಇಂತಹ ಒತ್ತಡಕ್ಕೆ ಮಣಿದು ಈ ಸರಕಾರ ಆಮದು ಉದಾರೀಕರಣ ಮಾಡಿರುವುದು ಸ್ಪಷ್ಟ.

ಈ ಉದಾರೀಕರಣ ಶ್ರೀಮಂತರ ಭೋಗ ವಸ್ತುಗಳಾದ್ದರಿಂದ ಶ್ರೀಮಂತರಿಗೆ ಮಾತ್ರ ಇದರಿಂದ ಲಾಭ. ದೇಶದ ಜನಸಮಾನ್ಯರಿಗೆ ಇದರಿಂದ ಹಾನಿ ಹೆಚ್ಚು. ಯಾಕೆಂದರೆ ಬರುವ ವರ್ಷದಿಂದ ವಿದೇಶಿ ಸಾಲಗಳ ಮರುಪಾವತಿಯು ಹೊರೆ ಹೆಚ್ಚಾಗುತ್ತದೆ. ಈ ಹೆಚ್ಚು ಭಾರವನ್ನು ದೇಶದ ಜನ ಸಾಮಾನ್ಯರೇ ಹೊರಬೇಕಾಗುತ್ತದೆ.

ಇಲ್ಲಿ ಶ್ರೀಮಂತರ ಭೋಗ ವಸ್ತುಗಳ ಆಮದಿನ ಮೇಲೆ ಹೆಚ್ಚಿನ ಸುಂಕ ಹೇರಬೇಕಾದ ಅವಶ್ಯಕತೆ ಇತ್ತು. ಆದರೆ ಆ ಸುಂಕವನ್ನು ಕಡಿಮೆ ಮಾಡಲಾಗಿದೆ. ಶ್ರೀಮಂತರ ಐಷಾರಾಮಿ ಜೀವನಕ್ಕೆ ಜನಸಾಮಾನ್ಯರು ಬೆಲೆ ತೆರಬೇಕು.

ಬ್ಯಾಂಕುಗಳ ಲೂಟಿ ಮಾಡಿದ ಗಣ್ಯರು

ದರೋಡೆಕೋರರು ಬಂದು ಬ್ಯಾಂಕುಗಳ ದರೋಡೆ ಮಾಡಿದರೆ ದೊಡ್ಡ ಸುದ್ದಿಯಾಗುತ್ತದಲ್ಲವೇ? ಬ್ಯಾಂಕಿನ ಉನ್ನತ ಅಧಿಕಾರಿಗಳು ತಮ್ಮವರಿಗಾಗಿ ಬ್ಯಾಂಕಿನ ತಿಜೋರಿಗಳ ಬಾಗಿಲನ್ನೇ ತೆರೆದಿಟ್ಟರೇ? ಅಂದು ಅದು ದರೋಡೆ ಎನಿಸಿಕೊಳ್ಳದಿದ್ದರೂ ಇಂದು ವಿಷಯ ಬಯಲಾಗಿದೆ.

ಈಗ ಪಂಜಾಬ್ ನ್ಯಾಷನಲ್ ಬ್ಯಾಂಕಿನಲ್ಲಿ ವಿಲೀನವಾಗಿರುವ ನ್ಯೂ ಬ್ಯಾಂಕ್ ಆಫ್ ಇಂಡಿಯಾ ಮತ್ತು ಕೆನರಾ ಬ್ಯಾಂಕಿನ ಅಂದಿನ ಅಧ್ಯಕ್ಷರುಗಳು ನಡೆಸಿದ ಅಕ್ರಮಗಳು ಇಂದು ಹೊರ ಬಂದಿವೆ. ಈ ಬ್ಯಾಂಕುಗಳ ಅಧ್ಯಕ್ಷರುಗಳು 11 ಕೋಟಿ ರೂಪಾಯಿಗಳ ಸಾಲ/ಜಾಮೀನನ್ನು ಅಕ್ರಮವಾಗಿ ನೀಡಿದ್ದರು. ಅದೂ ತಮ್ಮ ಹತ್ತಿರದ ಸಂಬಂಧಿಗಳಿಗೆ. ಅಂದು ನ್ಯೂ ಬ್ಯಾಂಕಿನ ಅಧ್ಯಕ್ಷರಾಗಿದ್ದವರು ಆರ್.ಸಿ.ಸುನೇಜಾ ಮತ್ತು ಕೆನರಾ ಬ್ಯಾಂಕಿನ ಅಧ್ಯಕ್ಷರಾಗಿದ್ದವರು ಬಿ.ಆರ್.ರತ್ನಾಕರ.

ಸರ್ವೋಚ್ಚ ನ್ಯಾಯಾಲಯ ಈ ಇಬ್ಬರು ಅಧ್ಯಕ್ಷರುಗಳು ನೀಡಿದ ಸಾಲಗಳ ಬಗ್ಗೆ ಭಾರತೀಯ ರಿಸರ್ವ್ ಬ್ಯಾಂಕ್‌ನ ಡೆಪ್ಯೂಟಿ ಗವರ್ನರ್ ನೇತೃತ್ವದಲ್ಲಿ ವಿಚಾರಣೆ ನಡೆಸಬೇಕೆಂದು ಸೂಚಿಸಿದೆ. ನ್ಯಾಯಾಲಯ ರತ್ನಾಕರರ ಮಕ್ಕಳಾದ ಪ್ರತಿಮಾನಂದ ಶೆಣೈ, ನವೀನ್ ಶೆಣೈ ಮತ್ತು ಅವರ ಪತ್ನಿ ಪ್ರೇಮಾ ಶೆಣೈ ಅವರಿಗೆ ಈ ವಿಷಯದಲ್ಲಿ ನೋಟೀಸ್ ನೀಡಿದೆಯಲ್ಲದೆ ಅವರು ತಮ್ಮ ಯಾವುದೇ ಸ್ವತ್ತನ್ನು ಮಾರಬಾರದೆಂದು ಆದೇಶ ನೀಡಿದೆ(ಬಿಆರ್.ರತ್ನಾಕರ ನಿಧನರಾಗಿದ್ದಾರೆ). ಬ್ಯಾಂಕುಗಳನ್ನು ಹೀಗೆ ಲೂಟಿ ಮಾಡಿದವರಿಗೆ ಎಂತಹ ಶಿಕ್ಷೆ ನೀಡಬೇಕು ಹೇಳಿ?

ವಾರದ ಆರ್ಥಿಕ ಟಿಪ್ಪಣಿಗಳು

ಜಿ.ಎಸ್.ಮಣಿ

ಶ್ರಮಿಕರ ಹಕ್ಕುಗಳ ಉಲ್ಲಂಘನೆಯ ಕಾಂಟ್ರಾಕ್ಟು

ಯಾರಿಗೆ? ಬಹುರಾಷ್ಟ್ರೀಯ ಕಂಪನಿಗಳಿಗೆ ತಮ್ಮ ಬಹುತೇಕ ಕೆಲಸಗಳಿಗೆ ಉದ್ಯೋಗಿಗಳನ್ನು ನೇಮಿಸಿಕೊಳ್ಳುವ ಬದಲು ಕಂಟ್ರಾಕ್ಟರ್‌ಗಳ ಮೂಲಕವೇ ಕೆಲಸ ಮಾಡಿಸಿಕೊಳ್ಳುವ ಬಹುರಾಷ್ಟ್ರೀಯ ಕಂಪನಿಗಳು ಶ್ರಮಿಕರ ಹಕ್ಕುಗಳ ಬಗ್ಗೆ ಕಾಳಜಿಯನ್ನೇನು ವಹಿಸಿಯಾವು?

ಕರ್ನಾಟಕ ಸರಕಾರವೇ ಕಾರ್ಮಿಕ ಕಾಯಿದೆಯ ಉಲ್ಲಂಘನೆಗಾಗಿ ಹಲವು ಪ್ರಕರಣಗಳನ್ನು ದಾಖಲು ಮಾಡಿಕೊಂಡಿದೆಯಂತೆ. ಮುಖ್ಯವಾಗಿ ಈ ಪ್ರಕರಣಗಳನ್ನು ಕಾಂಟ್ರಾಕ್ಟರುಗಳ ವಿರುದ್ಧ ದಾಖಲಿಸಿಕೊಂಡರು ಮುಖ್ಯ ನೇಮಕದಾರರ(ಅಂದರೆ ಬಹುರಾಷ್ಟ್ರೀಯ ಕಂಪನಿಗಳು) ವಿರುದ್ಧವೂ ಕ್ರಮ ಜರುಗಿಸಲಾಗುವುದೆಂದು ಕಾರ್ಮಿಕ ಇಲಾಖೆ ಹೇಳಿದೆ.

ಈ ಬಹುರಾಷ್ಟ್ರೀಯ ಕಂಪನಿಗಳಲ್ಲಿ ಮೈಕೋಬಾಸ್ಚ್, ಎಸ್ಕಾರ್ಟ್-ಗೋಯೆಟ್ಜ್, ವಿಡಿಯಾ ಇಂಡಿಯಾ ಸೇರಿವೆ.

ಇಲ್ಲಿ ಪರಿಣತ ಕಾರ್ಮಿಕರನ್ನು ಸಾಮಾನ್ಯ ಕಾರ್ಮಿಕರಂತೆ ದುಡಿಸಿಕೊಳ್ಳಲಾಗುತ್ತದಂತೆ. ಅವರಿಗೆ ಸಮಾನ ಕಾರ್ಮಿಕರಂತೆ ದಿನಗೂಲಿ ನೀಡಲಾಗುವುದಂತೆ, ಇವೆಲ್ಲವುಗಳ ಹಿಂದಿನ ಉದ್ದೇಶ ಲಾಭ. ಕಡಿಮೆ ಬೆಲೆಯ ಶ್ರಮ ಹೆಚ್ಚಿನ ಲಾಭ.

ಇದು ಬಹುರಾಷ್ಟ್ರೀಯ ಕಂಪನಿಗಳ ಪರಮೋದ್ದೇಶವಲ್ಲವೇ?

ಉದಾರೀಕರಣ ದಿನದಿಂದ ದಿನಕ್ಕೆ ಇನ್ನೂ ಹೆಚ್ಚೆಚ್ಚು ಇಂತಹ ಸುದ್ದಿಗಳನ್ನು ತರಲಿದೆ.

ಸಣ್ಣ ಮೀನುಗಳ ಕೊಳದಲ್ಲಿ ದೊಡ್ಡ ಮೀನು

ದೊಡ್ಡ ಮೀನುಗಳು ಸಣ್ಣಮೀನುಗಳನ್ನು ನುಂಗಿ ಹಾಕುವ ವಿಚಾರ ಗೊತ್ತೇ ಇದೆಯಲ್ಲವೇ? ಆದ್ದರಿಂದ ಸಣ್ಣ ಮೀನುಗಳು ಮತ್ತು ದೊಡ್ಡ ಮೀನುಗಳು ಬೇರೆ ಬೇರೆ ಕೊಳಗಳಲ್ಲಿ ಇದ್ದರೆ ಒಳಿತು. ಒಂದೇ ಕೊಳದಲ್ಲಿದ್ದರೇ? ಸಣ್ಣ ಮೀನುಗಳಿಗೆ ಅಪಾಯ.

ಬಂಡವಾಳಿಗರ ವಿಷಯದಲ್ಲೂ ಇದು ನಿಜ. ದೊಡ್ಡ ಬಂಡವಾಳಿಗರು ಸಣ್ಣ ಬಂಡವಾಳಿಗರನ್ನು ತಿಂದು ಹಾಕುತ್ತಾರೆ. ಆಬಿದ್ ಹುಸೇನ್ ಎಂಬ ಮಹಾಶಯನ ನೇತೃತ್ವದಲ್ಲಿ ರಚಿಸಿದ್ದ ಸಮಿತಿ (ಮನಮೋಹನ್ ಸಿಂಗರ ಕಾಲದಲ್ಲೇ ರಚಿಸಿದ್ದು) ಈಗ ವರದಿ ನೀಡಿದೆ. ಸಣ್ಣ ಕೈಗಾರಿಕೆಗಳ ಬಗ್ಗೆ ಅಧ್ಯಯನ ಮಾಡಿದ ಈ ಸಮಿತಿ ಉದಾರೀಕರಣದ ಕ್ರಮಗಳನ್ನು ಶಿಫಾರಸು ಮಾಡಲೆಂದೇ ರಚಿತವಾದ ಸಮಿತಿ.

ಎಲ್ಲರೂ ಹೆಚ್ಚಾಗಿ ಸಣ್ಣ ಕೈಗಾರಿಕೆಗಳಿಗೆಂದೇ ಮೀಸಲಿರುವ ಉತ್ಪನ್ನಗಳನ್ನು ಮೀಸಲಾತಿಯಿಂದ ಹೊರ ತೆಗೆಯುವುದೂ ಒಂದು ಅಂಶವಾಗಿತ್ತು.

ಸಮಿತಿ ತನ್ನ ವರದಿಯಲ್ಲಿ ಮುಖ್ಯವಾಗಿ ಶಿಫಾರಸು ಮಾಡಿರುವುದು.

1. ಸ್ಥಾವರ/ಯಂತ್ರೋಪಕರಣಗಳಲ್ಲಿ ಮೂರು ಕೋಟಿ ರೂಪಾಯಿಗಳಷ್ಟು ಹೂಡಿಕೆಯಿರುವ ಘಟಕಗಳನ್ನೆಲ್ಲ ಸಣ್ಣ ಕೈಗಾರಿಕೆಗಳೆಂದು ಪರಿಗಣಿಸಬೇಕು (ಸದ್ಯಕ್ಕೆ ಇದು 60 ಲಕ್ಷ ರೂಪಾಯಿಗಳಷ್ಟಿದೆ)
2. ಸಣ್ಣ ಕೈಗಾರಿಕೆಗಳ ಉತ್ಪಾದನೆಗೆಂದೇ ಮೀಸಲಾಗಿರುವ 836 ಉತ್ಪನ್ನಗಳನ್ನು ತೆಗೆದು ಹಾಕುವುದು ಆಗ ದೊಡ್ಡ ಮತ್ತು ಮಧ್ಯಮ ಕೈಗಾರಿಕೆಗಳೂ ಈ ಉತ್ಪನ್ನಗಳನ್ನು ಉತ್ಪಾದಿಸುವಂತಾಗುತ್ತದೆ.
3. ಈ ಕ್ರಮಗಳಿಂದಾಗಿ ಸಣ್ಣ ಕೈಗಾರಿಕೆಗಳು ತೊಂದರೆಗೀಡಾಗುವುದರಿಂದ ಅವುಗಳಿಗೆ ನೆರವುನೀಡಲುನಿಧಿಯೊಂದನ್ನುಸ್ಥಾಪಿಸುವುದು.

ಹೀಗೆ ಈ ಸಮಿತಿ ಬಹುರಾಷ್ಟ್ರೀಯ ಕಂಪನಿಗಳು ಮತ್ತು ದೇಶೀ ದೊಡ್ಡ ಬಂಡವಾಳಗಾರರ ಅನುಕೂಲಕ್ಕೆ ತಕ್ಕಂತೆ ವರದಿ ನೀಡಿದೆ.

ಸಂಯುಕ್ತ ರಂಗ ಸರಕಾರ ಮೇಲ್ಕಾಣಿಸಿರುವ ಮೊದಲನೇ ಶಿಫಾರಸ್ಸು ಒಪ್ಪಿಕೊಂಡಿದೆ. ಇದರಿಂದಾಗಿ ಈಗ ಮೂರು ಕೋಟಿ ರೂಪಾಯಿಗಳವರೆಗೆ ಹೂಡಿಕೆಯಿರುವ ಎಲ್ಲ ಔದ್ಯಮಿಕ ಘಟಕಗಳೂ ಸಣ್ಣ ಕೈಗಾರಿಕೆಗಳೆಂದೇ ಪರಿಗಣಿತವಾಗುತ್ತವೆ. ಇದನ್ನು ಹಣದುಬ್ಬರದ ಪರಿಣಾಮವನ್ನು ಗಣನೆಗೆ ತೆಗೆದುಕೊಳ್ಳುವ ಕ್ರಮ ಎಂದುಅದು ಸಮರ್ಥಿಸಿಕೊಂಡಿದೆ. ಮೇಲ್ನೋಟದಿಂದ ನೋಡಿದರೆ ಈ ವಿವರಣೆ ಸರಿ ಎನಿಸಬಹುದು. ಆದರೆ ವಾಸ್ತವದಲ್ಲಿ ಈಗ ಸಣ್ಣ ಕೈಗಾರಿಕೆಗಳೊಡನೆ ದೊಡ್ಡವೂ ಇದೇ ಪಂಗಡದಲ್ಲಿ ಸೇರಿಕೊಳ್ಳುತ್ತವೆ. ಹೀಗಾದಾಗ ಅದೇ ಗುಂಪಿನ ದೊಡ್ಡ ಕೈಗಾರಿಕೆಗಳು ಈ ಗುಂಪಿಗಾಗಿ ಇರುವ ಎಲ್ಲ ಅನುಕೂಲ/ಸವಲತ್ತು/ಸಹಾಯಧನಗಳನ್ನು ಕಬಳಿಸಿ ಬಿಡುತ್ತವೆ. ಸಣ್ಣ ಕೈಗಾರಿಕೆಗಳಿಗೆ ವಿಶೇಷ ರಕ್ಷಣೆ ಸ್ಥಾನಮಾನ ಎಂಬುದಕ್ಕೆ ಅರ್ಥವೇ ಇರುವುದಿಲ್ಲ.

ದೇಶದ ಆರ್ಥಿಕದಲ್ಲಿ ಮಹತ್ತರ ಪಾತ್ರ ಹೊಂದಿರುವ ಸಣ್ಣ ಕೈಗಾರಿಕೆಗಳಿಗೆ ಈ ಹೆಚ್ಚಿದ ಸ್ಪರ್ಧೆಯಿಂದಾಗಿ ಹೆಚ್ಚಿನ ಹೊಡೆತ ಬೀಳುತ್ತದೆ. ಈ ಘಟಕಗಳಲ್ಲಿ ರೋಗ ಗ್ರಹಣ ಹೆಚ್ಚಾಗುತ್ತದೆ. ಘಟಕಗಳು ಮುಚ್ಚಿದಂತೆಲ್ಲ ನಿರುದ್ಯೋಗ ಉಂಟಾಗುತ್ತದೆ. ಉದ್ಯೋಗಿಗಳು ಬೀದಿ ಪಾಲಾಗುತ್ತಾರೆ. ಉದಾರೀಕರಣದ ಉದ್ದೇಶವೂ ಇದೇ ಅಲ್ಲವೇ?

→

ಕೊಡುವುದು ಎಂದು ಅರ್ಥ. ಈಗಾಗಲೇ ಬಡವರಿಗೆ ನೀರಿನ ಆಗುತ್ತಿರುವ ಅನ್ಯಾಯವನ್ನು ಮತ್ತಷ್ಟು ತೀವ್ರಗೊಳಿಸುವುದು ನೀರಿನ ಹಂಚಿಕೆಯಲ್ಲಿ ಕಾಳಗಗಳಾಗಿ ಗ್ರಾಮೀಣ ಪ್ರದೇಶಗಳಲ್ಲಿ ಅಶಾಂತಿಗೆ, ಬಡವರ ತುಳಿತಕ್ಕೆ ನಾಂದಿ ಹಾಡುವುದು ಎಂದರ್ಥ.

ಅದೇ ರೀತಿ ರೈತರೇ ತಮಗೆ ಬೇಕಾದ ಬೆಳೆಗಳನ್ನು ಬೆಳೆದುಕೊಳ್ಳಬಹುದು ಎಂದರೇ ಸಮಾಜದ ಹಣದಿಂದ ಕಟ್ಟಲಾದ ಜಲಾಶಯಗಳ ನೀರನ್ನು, ಸಮುದಾಯದ ಆಸ್ತಿಯಾದ ನೀರನ್ನು ಉಪಯೋಗಿಸುವವರು ಸಮುದಾಯಕ್ಕೆ ಯಾವುದೇ ಹೊಣೆಗಾರಿಕೆಯಿಲ್ಲದೆ ಕೇವಲ ಸ್ವಂತ ಲಾಭಕ್ಕಾಗಿ ತಮಗೆ ಬೇಕಾದ ಬೆಳೆ ಬೆಳೆಯುವುದು. ಅದರ ಪರಿಣಾಮವಾಗಿ ಆಹಾರದ ಬೆಳೆಗಳು ಕಡಿಮೆಯಾಗಿ ಆಹಾರದ ಸ್ವಾವಲಂಬನೆ ಕುಸಿಯುವುದು ವಾಣಿಜ್ಯ ಬೆಳೆಗಳನ್ನು ಬೆಳೆದು ರಫ್ತು ಮಾಡುವುದು-ಇದರಿಂದ ಎರಡೂ ಬಗೆಯಲ್ಲಿ ವಿದೇಶಗಳ ಮೇಲೆ ಅವಲಂಬಿಸಿ ರಾಜ್ಯದ ಜನತೆ ಸಂಕಟಕ್ಕೆ ಒಳಗಾಗುವುದು ಎಂದರ್ಥ.

ಪ್ರತಿಯೊಂದನ್ನು ಅದರ ಬೆಲೆಗೆ ತಕ್ಕಂತೆ ಕೊಳ್ಳುವುದು ಎಂಬುದನ್ನು ಕರ್ನಾಟಕದ ಜನ ನಿರಾಕರಿಸಿದ್ದಾರೆ. ಇತ್ತೀಚೆಗೆ ಎಲೆಕ್ಟ್ರಾನಿಕ್ ಮೀಟರ್‌ಗಳನ್ನು ಅಳವಡಿಸುವ ವಿಷಯದಲ್ಲಿ ಹಾಗೂ ರೈತರಿಂದ ಅಕ್ರಮ ಪಂಪ್‌ಸೆಟ್‌ಗಳ ಮೇಲೆ ದಂಡ ವಿಧಿಸುವ ವಿಷಯದಲ್ಲಿ ಕೋಲಾರದ, ಇಡೀ ರಾಜ್ಯದ ರೈತರ ಪ್ರತಿಭಟನೆಯನ್ನು ಎದುರಿಸುತ್ತಿದೆ. ವಿಧಾನಸಭೆಯಲ್ಲಿಯೂ ಇದು ಪ್ರತಿಫಲಿಸಿ ಸರಕಾರ ಹಿಂತೆಗೆಯುವಂತಾಗಿದೆ. ನೀರಾವರಿ ದರ ಏರಿಸುವ ಬಗ್ಗೆ ಈಗಾಗಲೇ ಪ್ರತಿಭಟನೆಗಳಾಗಿವೆ. ಸಾರಿಗೆ ಸಂಸ್ಥೆಯ ನೌಕರರು ತಮ್ಮ ಸಂಸ್ಥೆಯ ವಿಭಜನೆಗೆ ಹಾಗೂ ಖಾಸಗೀಕರಣದ ವಿರುದ್ಧ ಪ್ರತಿಭಟಿಸುತ್ತಿದ್ದಾರೆ.

ರಾಮನಗರ, ಚಿಕ್ಕನಾಯಕನಹಳ್ಳಿಗಳ ಮತದಾರರು ಸರಕಾರದ ಇಂತಹ ನೀತಿಯ ಬಗ್ಗೆ ತಮ್ಮ ಪ್ರತಿಭಟನೆಯನ್ನು ಮತಪೆಟ್ಟಿಗೆಯ ಮೂಲಕ ಸಲ್ಲಿಸಿದ್ದಾರೆ.

ಇನ್ನು ಸರಕಾರ ಬೆಲೆ ಏರಿಸುವ ತಮ್ಮ ಸಂಕಲ್ಪದಲ್ಲಿಯೇ ಮುಂದುವರೆದರೆ ರಾಜ್ಯದ ಜನತೆ ಈಗಾಗಲೇ ಜನರನ್ನು ಸುಲಿದು ಹಣ ಸಂಗ್ರಹಿಸಿ ಯೋಜನೆಗಳನ್ನು ಮಾಡುವ ನೀತಿಯನ್ನು ವಿಫಲಗೊಳಿಸಿದಂತೆಯೇ ಈ ರಾಜ್ಯಪಾಲರ ಭಾಷಣದಲ್ಲಿ ಘೋಷಿತವಾದ ನೀತಿಗಳನ್ನೂ ಧೂಳೀಪಟ ಮಾಡುತ್ತಾರೆ. **ಜನತೆ ಪಿಸು ಮಾತಿನಲ್ಲಿ ಮಾತನಾಡಿದಾಗ ಎಚ್ಚರಗೊಳ್ಳದಿದ್ದರೆ ಜನತೆ ಗುಡುಗಾಗಿ ಮೊಳಗುತ್ತಾರೆ.**

ಕೇಳುತ್ತಿಲ್ಲವೇ ನಿಮಗೆ ಕೊರಿಯಾದ ರೈತರ, ಕಾರ್ಮಿಕರ ಗುಡುಗಿನಂತ ಘೋಷ. ಕೇಳುತ್ತಿಲ್ಲವೇ ನಿಮಗೆ ಮೆಕ್ಸಿಕೋದ ಜಪಾಟಿಸ್ಟಾ ರೈತ ದಂಗೆಗಳ ಸಿಡಿಲು? ಪೆರುವಿನಲ್ಲಿನ ಸಂಘರ್ಷ ಯಾಕೆಂದು ತಿಳಿದಿದ್ದೀರಿ? ಈಕ್ವೆಡಾರ್‌ನಲ್ಲಿ ಅಧ್ಯಕ್ಷ ತಲೆ ಸರಿಯಿಲ್ಲದವನೆಂದು ಕಿತ್ತು ಹಾಕಿ ವಾರಗಟ್ಟಲೇ ಅಧ್ಯಕ್ಷರೇ ಇಲ್ಲದಂತಾದ ಪರಿಸ್ಥಿತಿ ಯಾಕೆಂದು ತಿಳಿದಿದ್ದೀರಿ?

ತಮ್ಮ ಜನರಿಗೆ ವಿರುದ್ಧವಾಗಿ ಐಎಂಎಫ್ ಶರತ್ತುಗಳಿಗೆ ಅಡಿಯಾಳಾದ ಸರಕಾರಗಳ ವಿರುದ್ಧ ಜನ ಸಿಡಿದೆದ್ದು ಮಲೆತು ನಿಂತುದರ ಪ್ರತಿಧ್ವನಿಯಿದು.

"ಕೂಗುತಿದೆ ಕಲ್ಲು
ಕಿವಿವೆತ್ತ ಕಿವುಡರಿರಾ ಕೇಳಿ ಆ ಸೊಲ್ಲು"

...........ಆಯ-ವ್ಯಯದ ಸಮಯ

ಪುಟ 4 ರಿಂದ

- ಎಲ್ಲ ಆಮದಿನ ಮೇಲೆ ಶೇ 2ರಷ್ಟು ಸರ್ಚಾರ್ಜ್‌ಹೇರಿಕೆ.ಸಾರ್ವಜನಿಕವಲಯದ ಪುನರ್ರಚನೆ. ಸಾರ್ವಜನಿಕ ವಲಯದ ಉದ್ದಿಮೆಗಳ ಹೂಡಿಕೆ ಹಿಂತೆಗೆದುಕೊಳ್ಳುವ ಬಗ್ಗೆ ಡಿಸ್ ಇನ್‌ವೆಸ್ಟ್‌ಮೆಂಟ್‌ಕಮಿಷನ್‌ಸ್ಥಾಪನೆ.

ಬಜೆಟ್ ಸಾರ್ವಜನಿಕ ವಲಯದ ಉದ್ದಿಮೆಗಳ ಶೇರು ಮಾರಾಟದಿಂದ 5000 ಕೋಟಿ ರೂಪಾಯಿಗಳ ಸಂಗ್ರಹಣದ ಗುರಿ ಇಟ್ಟುಕೊಂಡಿತು. ಆದರೆ ಇಲ್ಲಿಯವರೆಗೆ ಇದು ಸಾಧ್ಯವಾಗಿಲ್ಲ.

ಬಂಡವಾಳ ಮಾರುಕಟ್ಟೆ

- ರಾಷ್ಟ್ರೀಯ ಡಿಪಾಸಿಟರಿ ಸ್ಥಾಪನೆ.
- ಶೇರು ವಿನಿಮಯ ಕೇಂದ್ರಗಳ ಕಂಪ್ಯೂಟರೀಕರಣ.

ಹಣಕಾಸು ವಲಯ

- ನಗದು ಶಿಲ್ಕು ಪ್ರಮಾಣದಲ್ಲಿ ಕಡಿತ. ಬ್ಯಾಂಕುಗಳಿಗೆ ಸಾಲ ನೀಡಲು ಹೆಚ್ಚು ಹಣಲಭ್ಯ.
- ಬ್ಯಾಂಕುಗಳಿಗೆ ಸಾಲ ನೀಡುವಲ್ಲಿ ಹೆಚ್ಚಿನ ಸ್ವಾತಂತ್ರ. ಬಡ್ಡಿ ದರಗಳಲ್ಲಿ ಕಡಿತ.
- ಇನ್ಸೂರೆನ್ಸ್ ರೆಗುಲೆಟರಿ ಅಥಾರಿಟಿಯ ಸ್ಥಾಪನೆ. ಎಡಪಕ್ಷಗಳಿಂದ ವಿಮಾವಲಯವನ್ನು ತೆರೆಯುವುದರ ವಿರುದ್ಧ ತೀವ್ರ ವಿರೋಧದಿಂದಾಗಿ ಖಾಸಗಿ, ವಿದೇಶೀ ಕಂಪನಿಗಳಿಗೆ ಅನುಮತಿ ನೀಡುವ ಅಂಶ ಇದರಲ್ಲಿ ಬರಲಿಲ್ಲ.

ಅಂತರ್ರಚನೆ

- ಅಂತರ್ರಚನಾ ಅಭಿವೃದ್ಧಿ ಕಂಪನಿ ಸ್ಥಾಪನೆಯ ಬಗ್ಗೆ ಬಜೆಟ್‌ನಲ್ಲಿ ಹೇಳಲಾಗಿತ್ತು. ಇದು ಇನ್ನೂ ಆಗಿಲ್ಲ. ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರಕ್ಕೆ 200 ಕೋಟಿ ರೂಪಾಯಿಗಳ ಬಂಡವಾಳ ನೀಡಿಕೆ.
- ವಿದ್ಯುತ್ ಯೋಜನೆಗಳ ವಿದ್ಯುತ್ತಿನ ವಿತರಣೆಯಲ್ಲೂ, ಖಾಸಗಿಯವರಿಗೆ ಪ್ರತಿಫಲದ ಭರವಸೆ.
- ಬಂದರುಗಳ ಖಾಸಗೀಕರಣಕ್ಕೆ ಮಾರ್ಗದರ್ಶಿ ಸೂತ್ರಗಳು.

ವಿದೇಶೀ ಹೂಡಿಕೆ

- ವಿದೇಶೀ ಹೂಡಿಕೆ ಅಭಿವೃದ್ಧಿ ಮಂಡಳಿಯ ಪುನರ್ರಚನೆ.
- ವಿದೇಶೀ ಹೂಡಿಕೆಗೆ ಹೆಚ್ಚಿನ ಉದ್ದಿಮೆಗಳನ್ನು ತೆರೆಯಲಾಗಿಲ್ಲ.
- 161 ವಸ್ತುಗಳ ಆಮದನ್ನು ಉದಾರೀಕರಣ.
- ಅಬಿದ್ ಹುಸೇನ್ ಸಮಿತಿಯ ವರದಿಯ ಆಧಾರದ ಮೇಲೆ ಸಣ್ಣ ಕೈಗಾರಿಕೆಗಳಲ್ಲಿ ಈಗಿರುವ ರಕ್ಷಣಾತ್ಮಕ ನಿಯಮಗಳಲ್ಲಿ ಕೆಲವನ್ನು ಸಡಿಲಿಸಿರುವುದು ಮತ್ತು ಇತರ ಕೆಲವನ್ನು ಸಡಿಲಿಸುವ ಹುನ್ನಾರ ನಡೆಸಿರುವುದು.

ಎಡಪಕ್ಷಗಳ ಮಧ್ಯಪ್ರವೇಶದಿಂದ ಹಲವು ಜನ ವಿರೋಧಿ ಆರ್ಥಿಕ ಕ್ರಮಗಳನ್ನು ಸಂಯುಕ್ತರಂಗ ಸರ್ಕಾರ ಕೈ ಬಿಡಬೇಕಾಗಿ ಬಂದಿತು. ಆದರೆ ಈ ಮೇಲೆ ಹೇಳಿದಂತೆ ಹಣಕಾಸು ಮಂತ್ರಿಗಳು ಆಗಾಗ ಇದ್ದಕ್ಕಿದ್ದಂತೆ ಮನಮೋಹನ್ ಸಿಂಗರನ್ನು ನೆನಪಿಸುತ್ತಾರೆ. ಇದಕ್ಕೆ ಇತ್ತೀಚಿನ ಉದಾಹರಣೆ-ಎಡಪಕ್ಷಗಳು ಬಲವಾಗಿ ವಿರೋಧಿಸಿ ಪ್ರಧಾನಿಗಳು ಅದಕ್ಕೆ ಒಪ್ಪಿದರೂ ಅದನ್ನು ಬದಿಗೊತ್ತಿ ರೇಶನ್ ಸಕ್ಕರೆಯ ಬೆಲೆಯೇರಿಸಿದ್ದು.

ಉದ್ಯೋಗಾವಕಾಶ ಕಡಿತ-ನಾಲ್ಕನೇ ದರ್ಜೆಯ ಖಾಸಗೀಕರಣ ವೇತನ ಆಯೋಗದ ಮುಖ್ಯ ಒತ್ತು ಎಂದು ಸಿಪಿಐ(ಎಂ) ಖಂಡನೆ

ಐದನೇ ವೇತನ ಆಯೋಗದ ಮುಖ್ಯ ಒತ್ತು ಸರಕಾರೀ ಉದ್ಯೋಗಾವಕಾಶಗಳಲ್ಲಿ ತೀವ್ರ ಕಡಿತದ ಮೇಲೆ ಮುಂದಿನ ಹತ್ತು ವರ್ಷಗಳಲ್ಲಿ ಈಗಿರುವ ನೌಕರರ ಸಂಖ್ಯೆಯಲ್ಲಿ 30% ರಷ್ಟು ಕಡಿತ ತರಬೇಕು. ಖಾಲಿಯಿರುವ 3.5 ಲಕ್ಷ ಹುದ್ದೆಗಳನ್ನು ರದ್ದು ಮಾಡಬೇಕು ಎಂದು ಶಿಫಾರಸು ಮಾಡಿರುವುದಲ್ಲದೆ ಕೆಳಹಂತದಲ್ಲಿ ವಿಶೇಷವಾಗಿ ನಾಲ್ಕನೇ ದರ್ಜೆಯಲ್ಲಿ ಇನು ಮುಂದೆ ನೇಮಕಾತಿ ಇರಬಾರದೆಂದೂ ವೇತನ ಆಯೋಗ ಹೇಳಿದೆ. ನಾಲ್ಕನೇ ದರ್ಜೆಯ ನೌಕರಿಗಳನ್ನು ಕ್ರಮೇಣ ರದ್ದು ಮಾಡಿ ಅದನ್ನು ಖಾಸಗೀಕರಿಸಿ ಕಾಂಟ್ರಾಕ್ಟ್ ಲೇಬರ್ ಮೂಲಕ ಪೂರೈಸಿಕೊಳ್ಳುವುದೇ ಇದರ ಅರ್ಥ ಎಂದು ಸಿಪಿಐ(ಎಂ) ಪೊಲಿಟ್‌ಬ್ಯೂರೋ ಖಂಡಿಸಿದೆ.

ಸರಕಾರೀ ಸೇವೆಗಳ ದಕ್ಷತೆ ಹೆಚ್ಚಿಸುವತ್ತ ಗಮನ ನೀಡುವುದು ಅಗತ್ಯವಾಗಿರುವಾಗ ನೇಮಕಾತಿಯ ಸ್ತಂಭನದಲ್ಲಿ ಮುಂದುವರಿಕೆ ಮತ್ತು ಮೇಲೆ ಹೇಳಿದ ಉದ್ಯೋಗಾವಕಾಶ ಕಡಿತದಿಂದ ವಿಸ್ತಾರಗೊಳ್ಳಬೇಕಾಗಿರುವ ಅಂಚೆ, ದೂರಸಂಪರ್ಕ ಮತ್ತು ರೇಲ್ವೆಗಳ ಮೇಲೆ ವಿಪರೀತ ದುಷ್ಪರಿಣಾಮಗಳು ಉಂಟಾಗುತ್ತವೆ. ಉದಾರೀಕರಣದಿಂದ ಹದಗೆಟ್ಟಿರುವ ನಿರುದ್ಯೋಗ ಪರಿಸ್ಥಿತಿ ಮತ್ತಷ್ಟು ಉಲ್ಬಣಗೊಳ್ಳುತ್ತಿದೆ. ಸಂಯುಕ್ತ ರಂಗ ಸರಕಾರ ಉದ್ಯೋಗಾವಕಾಶಗಳನ್ನು ಹೆಚ್ಚಿಸುವ ಭರವಸೆ ನೀಡಿರುವ ಹಿನ್ನೆಲೆಯಲ್ಲಿ ವೇತನ ಆಯೋಗದ ಈ ಮೂಲಭೂತ ಶಿಫಾರಸನ್ನು ಒಪ್ಪಿಕೊಳ್ಳಲು ಸಾಧ್ಯವಿಲ್ಲ ಎಂದು ಸಿಪಿಐ(ಎಂ) ಪೊಲಿಟ್‌ಬ್ಯೂರೋ ಹೇಳಿದೆ. ಈ ವರದಿ ನೌಕರರಿಗೆ ಪ್ರಯೋಜನಗಳನ್ನು ನೀಡುವಲ್ಲಿಯೂ ಪಕ್ಷಪಾತ ಮಾಡಿದೆ. ಕೆಳಗಿನ ಹಂತಗಳಲ್ಲಿರುವ ನೌಕರರಿಗೆ ಕಮ್ಮಿ ಪ್ರಯೋಜನಗಳು ಸಿಕ್ಕಿವೆ, ಆದರೆ ಮೇಲಿನ ಹಂತದಲ್ಲಿರುವ ಅಧಿಕಾರಿಗಳಿಗೆ ಅಗತ್ಯವಾದ ಭತ್ಯೆಗಳನ್ನು ನೀಡಲಾಗಿದೆ. ಬೋನಸ್ ಅರ್ಹತೆಯ ಮಿತಿಯನ್ನು 4500 ರೂ.ಗೆ ನಿಲ್ಲಿಸಲಾಯಿತು. ಇದರಿಂದ ಇತ್ತೀಚೆಗೆ ಮುಷ್ಕರದಿಂದ ನೌಕರರು ಸಾಧಿಸಿದ ಮುನ್ನಡೆಯನ್ನು ಬುಡಮೇಲು ಮಾಡುವ ಪ್ರಯತ್ನವಿದೆ. ಈ ಮಿತಿಯನ್ನು ಒಪ್ಪಲು ಸಾಧ್ಯವಿಲ್ಲ ಎಂದೂ ಸಿಪಿಐ(ಎಂ) ಪೊಲಿಟ್ ಬ್ಯೂರೋ ಹೇಳಿದೆ.



ಪಂಜಾಬ್: ಕೋಮುವಾದಿಗಳ ಕೂಟಕ್ಕೆ ಜಯ
ಇನ್ನೊಂದು ಪ್ರಾದೇಶಿಕ ಪಕ್ಷದ ಬೆನ್ನೇರಿ ಬಂದ ಬಿಜೆಪಿ

ಪಂಜಾಬ್‌ನಲ್ಲಿ ಫೆಬ್ರವರಿ 7 ರಂದು ನಡೆದ ವಿಧಾನ ಸಭಾ ಚುನಾವಣೆಗಳ ಫಲಿತಾಂಶ ಹೊರಬಿದ್ದು ಸಿಖ್ ಕೋಮುವಾದಿಗಳು ಹಾಗೂ ಹಿಂದೂ ಕೋಮುವಾದಿಗಳ ಮೈತ್ರಿಕೂಟ ಅಧಿಕಾರಕ್ಕೆ ಬಂದಿದೆ. ಅಕಾಲಿದಳ - ಬಿಜೆಪಿ ಕೂಟಕ್ಕೆ ಭಾರೀ ಜಯ ದೊರೆತಿದೆ. 117 ಸ್ಥಾನಗಳಲ್ಲಿ 93 ಸ್ಥಾನಗಳನ್ನು ಈ ಕೂಟ ಪಡೆದಿದೆ. ಅಕಾಲಿದಳ 75 ಸ್ಥಾನಗಳನ್ನು ಹಾಗೂ ಬಿಜೆಪಿ 18 ಸ್ಥಾನಗಳನ್ನು ಪಡೆದಿದೆ. ಹಿಂದಿನ ಬಾರಿ 87 ಸ್ಥಾನಗಳನ್ನು ಗೆದ್ದಿದ್ದ ಕಾಂಗ್ರೆಸ್ ಕೇವಲ 14 ಸ್ಥಾನಗಳನ್ನು ಪಡೆದು ಇನ್ನೊಂದು ರಾಜ್ಯದಲ್ಲಿ ಮಣ್ಣು ಮುಕ್ಕುವ ಸ್ಥಿತಿ ಉಂಟಾಗಿದೆ. ಸಂಯುಕ್ತ ರಂಗದ ಪಕ್ಷಗಳಲ್ಲಿ ಸಿಪಿಐ ಮಾತ್ರ 2 ಸ್ಥಾನಗಳನ್ನು ಪಡೆದಿದೆ. ಅದು ಕೂಡಾ ಕಾಂಗ್ರೆಸ್(ಐ) ಸಹಕಾರದಿಂದ ಎನ್ನಲಾಗುತ್ತಿದೆ. ಸಿಪಿಐ ಕಾಂಗ್ರೆಸ್(ಐ) ಬೆಂಬಲ ಪಡೆದು ಸ್ಪರ್ಧಿಸಿದ್ದರಿಂದ ಎಡಪಕ್ಷಗಳ ಬಗ್ಗೆ ಜನರಲ್ಲಿ ಸಂದೇಹ ಉಂಟಾಗಿ ಸಂಯುಕ್ತ ರಂಗದ ಪಕ್ಷಗಳಿಗೆ ಬಹಳ ಹಿನ್ನಡೆಯಾಗಿದೆ ಎಂದು ವೀಕ್ಷಕರ ಅಭಿಪ್ರಾಯ. ಹಿಂದಿನ ಬಾರಿ ಸಾಕಷ್ಟು ಪ್ರಭಾವ ತೋರಿದ್ದ ಬಿಎಸ್‌ಪಿ ಕೂಡಾ ಈ ಬಾರಿ ಕೇವಲ ಒಂದು ಸ್ಥಾನ ಗಳಿಸಿ ತೃಪ್ತಿಪಟ್ಟುಕೊಳ್ಳಬೇಕಾಗಿದೆ. ಪ್ರಕಾಶ್ ಸಿಂಗ್ ಬಾದಲ್ ಹನ್ನೊಂದು ವರ್ಷಗಳ ನಂತರ ಮತ್ತೆ ಮುಖ್ಯಮಂತ್ರಿಯಾಗಿದ್ದಾರೆ.

ಐದು ವರ್ಷಗಳ ಹಿಂದೆ ರಾಜ್ಯದಲ್ಲಿ ತೀವ್ರ ಪ್ರತ್ಯೇಕತಾವಾದಿ ಹಾಗೂ ಉಗ್ರಗಾಮಿ ಚಟುವಟಿಕೆಗಳ ಹಿನ್ನಲೆಯಲ್ಲಿ ಚುನಾವಣೆ ನಡೆದಿತ್ತು. ಜನ ಸ್ಪಷ್ಟ ತೀರ್ಪು ನೀಡಿರಲಿಲ್ಲ. ಅಂದರೆ ಗ್ರಾಮೀಣ ಪಂಜಾಬಿನ ಕೇವಲ 57 ಜನ, ನಗರ ಪ್ರದೇಶದಲ್ಲಿ 30% ಜನ ಮತ ನೀಡಿದ್ದರು. ಅಕಾಲಿದಳ ಚುನಾವಣೆಯನ್ನು ಬಹಿಷ್ಕರಿಸಿತ್ತು. ಚುನಾವಣೆ ಜನಗಳ ನಿಜವಾದ ಆಶಯವನ್ನು ವ್ಯಕ್ತಪಡಿಸಿರದಿದ್ದರೂ ಆ ನಂತರ ಆ ರಾಜ್ಯದಲ್ಲಿ ಶಾಂತಿ ನೆಲೆಸಲು ಅದು ಸಹಾಯಕವಂತೂ ಆಯಿತು. ಆದರೆ ಎರಡು ವರ್ಷಗಳಲ್ಲೇ ಕಾಂಗ್ರೆಸ್ ಮಂತ್ರಿಗಳ ಭ್ರಷ್ಟಾಚಾರ ಪ್ರಕರಣಗಳು ಬಯಲಿಗೆ ಬರಲಾರಂಭಿಸಿದವು. ಮುಖ್ಯಮಂತ್ರಿಯಾಗಿದ್ದ ಬೇಅಂತ್ ಸಿಂಗ್ ಕೊಲೆಯ ನಂತರ ಹೊಸ ಮುಖ್ಯಮಂತ್ರಿ ಹರಚರಣ್ ಸಿಂಗ್ ಬ್ರಾರ್ ಆಡಳಿತ ಕಾಲದಲ್ಲಿ ಭ್ರಷ್ಟಾಚಾರ ಪ್ರಕರಣಗಳು ಕಮ್ಮಿಯಾಗುವ ಬದಲು ಇನ್ನೂ ಹೆಚ್ಚಿತು. ಆಂತರಿಕ ಕಿತ್ತಾಟವೂ ಹೆಚ್ಚಿತು. ಚುನಾವಣೆಯ ಎರಡು ತಿಂಗಳ ಮೊದಲು ಮತ್ತೆ ಮುಖ್ಯಮಂತ್ರಿ ಬದಲಾವಣೆಯಾಯಿತು. ತನ್ನ ಈ ಶೋಚನೀಯ ದಾಖಲೆಯೊಂದಿಗೆ ಕಾಂಗ್ರೆಸ್(ಐ) ಚುನಾವಣೆ ಎದುರಿಸಿತ್ತು.

ಚುನಾವಣೆಗಳನ್ನು ಘೋಷಿಸಿದ ನಂತರ ಹಲವಾರು ರಾಜಕೀಯ ಪಕ್ಷಗಳ ಸಮಯಸಾಧಕತನದ ಪ್ರದರ್ಶನ ನಡೆಯಿತು. ಕಾಂಗ್ರೆಸ್ ಬಿಎಸ್‌ಪಿಯೊಂದಿಗೆ ಮೈತ್ರಿಗೆ ಪ್ರಯತ್ನಿಸಿ ವಿಫಲವಾಯಿತು. ಹಿಂದಿನ ಲೋಕಸಭಾ ಚುನಾವಣೆಗಳಲ್ಲಿ ಅಕಾಲಿದಳ(ಬಾದಲ್)-ಬಿಎಸ್‌ಪಿ ಕೂಟ 13 ರಲ್ಲಿ 9 ಸ್ಥಾನಗಳನ್ನು ಗೆದ್ದಿತು. ಆದರೆ ಈ ಬಾರಿ ಅಕಾಲಿದಳ ಹಾಗೂ ಸಮಾಜವಾದಿ ಪಕ್ಷ ಒಟ್ಟಾಗಿ ಸ್ಪರ್ಧಿಸಲು ನಿರ್ಧರಿಸಿದರೂ ಸಿಪಿಐನ ರಾಜ್ಯ ಮುಖಂಡರು ಕಾಂಗ್ರೆಸ್ ನೊಂದಿಗೆ ಬಹಿರಂಗವಾಗಿ ಒಪ್ಪಂದಕ್ಕೆ ಬಂದರು.

ಇತ್ತೀಚಿನವರೆಗೂ ಪರಸ್ಪರ ದೂಷಣೆ ಮಾಡುತ್ತಿದ್ದ ಅಕಾಲಿದಳ-ಬಿಜೆಪಿ ಮೈತ್ರಿ ಎಷ್ಟು ದಿನ ಬಾಳುತ್ತದೆ ಎಂಬುದು ಎಲ್ಲರೂ ಕೇಳುತ್ತಿರುವ ಪ್ರಶ್ನೆ. ಸಿಖ್ ಭೂಮಾಲಿಕರು ಮತ್ತು ಹಿಂದೂ ವ್ಯಾಪಾರಿಗಳ ಈ ರಾಜಕೀಯ ಕೂಟ ಹಿಂದೂ-ಸಿಖ್ ಐಕ್ಯತೆ ಮತ್ತು ಭ್ರಷ್ಟಾಚಾರದ ನಿರ್ಮೂಲನೆಯ ಭರವಸೆ ನೀಡಿ ಕಳೆದ ಹತ್ತು ವರ್ಷಗಳಲ್ಲಿ ಉಂಟಾಗಿರುವ ಕೋಮುಭಾವನೆಗಳು ಹಾಗೂ ಕಾಂಗ್ರೆಸ್‌ನ ದುರಾಡಳಿತ, ವಂಚನೆಗಳಿಂದ ಜನಗಳಲ್ಲಿ ಉಂಟಾಗಿರುವ ಅತೃಪ್ತಿಯ ಲಾಭ ಪಡೆದು ಗೆದ್ದಿದೆ. ಬಿಜೆಪಿ ಇನ್ನೊಂದು ರಾಜ್ಯದಲ್ಲಿ ಪ್ರಾದೇಶಿಕ ಪಕ್ಷದ ಬಾಲ ಹಿಡಿದು ಅಧಿಕಾರಕ್ಕೆ ಬಂದಿದೆ. ಈ ಮೂಲಕ ದಿಲ್ಲಿ ಸಿಂಹಾಸನ ಹಿಡಿಯುವ ಯೋಜನೆಯಲ್ಲಿ ಒಂದು ಹೆಜ್ಜೆ ಮುಂದಿಟ್ಟಿದ್ದೇವೆ ಎಂದು ಭಾವಿಸಿದೆ. ಆದರೆ ಮಹಾರಾಷ್ಟ್ರದ ಶಿವಸೇನೆ-ಬಿಜೆಪಿ ಸರಕಾರ ದಾಖಲೆಗಳಲ್ಲಾಗಲಿ, ಸ್ವತಃ ಭಾರಿ ಬಹುಮತ ಪಡೆದ ಗುಜರಾತಿನ ಅನುಭವವಾಗಲಿ ಜನಗಳ ನೆನಪಿನಿಂದ ಮಾಸಿಲ್ಲ.

ಪಂಜಾಂಬಿನಲ್ಲಿ ಅಕಾಲಿದಳ-ಬಿಜೆಪಿಯ ಮೈತ್ರಿ ಸಿಖ್-ಹಿಂದೂ ಐಕ್ಯತೆಯ ಪ್ರತೀಕ ಎಂಬ ವಿಚಾರವೇ ಕಳೆದ ಹತ್ತು ವರ್ಷಗಳಲ್ಲಿ 25000 ಜನಗಳನ್ನು ಬಲಿ ತೆಗೆದುಕೊಂಡು ಪಂಜಾಬಿನ ಇತಿಹಾಸವನ್ನು ತಿರುಚುವ ಪ್ರಯತ್ನ ಎಂದು ಕೆಲವು ಬುದ್ದಿಜೀವಿಗಳ ಅಭಿಪ್ರಾಯ. ಪಂಜಾಬಿನಲ್ಲಿ ಎರಡು ಪರಸ್ಪರ ಸಂಪೂರ್ಣ ವಿಭಿನ್ನವಾಗಿರುವ ಕೋಮುಗಳ ರಾಜ್ಯ ಎಂಬ ಭಾವನೆಯನ್ನು ಬಲಪಡಿಸುವ ಈ ಕೋಮು ಆಧಾರಿತ ಕೂಟ ಆ ರಾಜ್ಯದಲ್ಲಿ ಮತ್ತೆ ಶಾಂತಿ ನೆಲೆಸುವಂತೆ ಮಾಡೀತೇ ಎಂಬ ಸಂದೇಹ ಹಲವರಲ್ಲಿದೆ. ಇದು ಸಕಾರಣ ಕೂಡ. ಏಕೆಂದರೆ ಬಾದಲ್ ನೇತೃತ್ವದ ಅಕಾಲಿದಳ ಪ್ರತ್ಯೇಕತಾವಾದಿಗಳಿಗೆ, ಉಗ್ರಗಾಮಿಗಳಿಗೆ ಪ್ರತ್ಯಕ್ಷ-ಪರೋಕ್ಷ ಬೆಂಬಲ ನೀಡುತ್ತಿದ್ದ ಪಕ್ಷ. ಅತ್ತ ಬಿಜೆಪಿ ಇದರ ವಿರುದ್ಧ ಹಿಂದೂಗಳನ್ನು ಕೋಮು ಆಧಾರದಲ್ಲಿ ಸಂಘಟಿಸಲು ಪ್ರಯತ್ನಿಸುತ್ತಿದ್ದ ಪಕ್ಷ.

ಒಂದು ಉದಾಹರಣೆ-ಜಗತಾರ್ ಸಿಂಗ್ ರಾಜ್ಯ ಒಬ್ಬ ಅಕಾಲಿದಳ ಅಭ್ಯರ್ಥಿ. ಆತನ ತಂದೆ ಭಯೋತ್ಪಾದಕ ಮುಖಂಡ. ಅಮೃತ್ ಸಿಂಗ್ ಕೌಲಿಯ ಗುಂಡಿಗೆ ಬಲಿಯಾದಾತ. ಆದರೆ ಈ ಕೌಲಿ ನಂತರ ಪೋಲೀಸರೊಂದಿಗೆ ಹಣಾಹಣಿಯಲ್ಲಿ ಸತ್ತಾಗ ಆತನ ಅಂತಿಮ ಸಂಸ್ಕಾರದಲ್ಲಿ ಗೌರವ ಸೂಚಿಸಲು ಅಕಾಲಿದಳ ಮುಖಂಡ ಗುರುತೇಶ ಸಿಂಗ್ ತೋಪ್ರಾ ಭಾಗವಹಿಸಿದ್ದರು. ಉಗ್ರಗಾಮಿಗಳ ಮಾನವ ಹಕ್ಕುಗಳನ್ನು ದಮನ ಮಾಡಿದ್ದಾರೆಂದು ಅಕಾಲಿದಳ ಮುಖಂಡರಿಂದ ಆಪಾದನೆ ಹೊತ್ತಿರುವ ಪಂಜಾಬಿನ ಮಾಜಿ ಪೋಲೀಸ್ ಮಹಾ ನಿರ್ದೇಶಕ ಕೆಪಿಎಸ್ ಗಿಲ್‌ಗೂ ಬಿಜೆಪಿ ಮುಖಂಡರಿಗೂ ಕಂಠಸ್ಯ-ಗಳಸ್ಯ.

ಅಕಾಲಿದಳ, ಬಿಜೆಪಿಗಳ ನಡುವಿನ ವೈರುದ್ಯ ಕೇವಲ ಇಷ್ಟೇಅಲ್ಲ, ಚಂಡೀಗಢವನ್ನು ಪಂಜಾಬಿಗೆ ವರ್ಗಾಯಿಸುವುದು, ಈ ಪಂಜಾಬ್ ಪಟ್ಟಣಗಳ ನಡುವೆ ಕೆಲವು ಪ್ರದೇಶಗಳ ವರ್ಗಾವಣೆ, ಪಂಜಾಬಿ-ಹಿಂದೂ ಭಾಷೆಗಳ ಸಮಸ್ಯೆ, ಸಟ್ಲೆಜ್-ಯಮುನಾ ಕಾಲುವೆಯ ನೀರಿನ ಹಂಚಿಕೆ ಈ ಬಗ್ಗೆ ಈ ಎರಡೂ ಪಕ್ಷಗಳ ನಡುವೆ ತೀವ್ರ ಭಿನ್ನಾಭಿಪ್ರಾಯವಿದೆ.

ಇನ್ನೊಂದು ಗಮನಿಸಬೇಕಾದ ಸಂಗತಿಯೆಂದರೆ ಪಂಜಾಬಿನಲ್ಲಿ ಸಿಖ್-ಹಿಂದೂ ಕೋಮುವಾದಿಗಳ ಕಾಟ ಹೊಸದೇನಲ್ಲ. 1967 ರಲ್ಲಿ ಅಕಾಲಿದಳ ಸಂತ್ ಫತೇಸಿಂಗ್ ಬಣ ಮತ್ತು ಆಗಿನ ಜನಸಂಘ ಇಂತಹ ಚುನಾವಣಾ ಮೈತ್ರಿಯನ್ನು ಆರಂಭಿಸಿತ್ತು. ಆಮೇಲೆ ಇನ್ನೂ ಮೂರು ಬಾರಿ 1967, 1970, 1973 ರಲ್ಲಿ ಪ್ರಯತ್ನ ನಡೆಯಿತು. ಅವರ ಸರಕಾರಗಳೂ ಬಂದವು. ಆದರೆ ಅವು ಯಾವುವೂ ಹೆಚ್ಚು ಕಾಲ ಬಾಳಲಿಲ್ಲ. ಈ ಐದನೇ ಪ್ರಯತ್ನ ಎಷ್ಟು ದಿನ ಬಾಳುತ್ತದೆ, ಪಂಜಾಬಿನ ಸಮಸ್ಯೆಗಳನ್ನು ಎಷ್ಟರಮಟ್ಟಿಗೆ ಪರಿಹರಿಸುತ್ತದೆ ಎಂದು ಕಾದು ನೋಡಬೇಕಾಗಿದೆ

ಬಾಳಾ ಠಾಕ್ರೆಗೆ ಜೈಲು ಶಿಕ್ಷೆ

ನ್ಯಾಯಾಲಯ ನಿಂದನೆ ಪ್ರಕರಣವೊಂದಕ್ಕೆ ಸಂಬಂಧಿಸಿದಂತೆ ಶಿವಸೇನೆ ಮುಖ್ಯಸ್ಥ ಬಾಳಾಠಾಕ್ರೆಗೆ ಮುಂಬೈ ಹೈಕೋರ್ಟ್ ಒಂದು ವಾರ ಕಾಲ ಜೈಲು ಶಿಕ್ಷೆ ವಿಧಿಸಿದೆ. ಹೈಕೋರ್ಟ್ ನಾಗಾಪುರ ಪೀಠ ಫೆ.6 ರಂದು ಈ ಸಂಬಂಧ ತೀರ್ಪು ನೀಡಿದೆ.

ಕಕ್ಷಿದಾರರೊಬ್ಬರ ಪರ ತೀರ್ಪು ನೀಡಲು ಒಬ್ಬ ನ್ಯಾಯಾಧೀಶರು 35 ಲಕ್ಷ ರೂಪಾಯಿ ಲಂಚ ಬೇಡಿದ್ದರು ಎಂದು ಕಳೆದ ವರ್ಷ ಅಕ್ಟೋಬರ್‌ನಲ್ಲಿ ನಡೆದ ರ್‍ಯಾಲಿಯೊಂದರಲ್ಲಿ ಠಾಕ್ರೆ ಆಪಾದಿಸಿದ್ದರು. ಈ ವಿಚಾರವಾಗಿ ಉದ್ಯಮಿ ಹರೀಶ್ ಪಿಂಪಲ್ಪುಟೆ ಮತ್ತು ಪತ್ರಕರ್ತ ಮೋಹನ ಪ್ರಸಾದ್ ತ್ರಿಪಾಠಿ ಠಾಕ್ರೆ ವಿರುದ್ಧ ನ್ಯಾಯಾಲಯ ನಿಂದನೆ ಮೊಕದ್ದಮೆ ಹೂಡಿದ್ದರು.

ಸಿಪಿಐ(ಎಂ) ಸಮಾವೇಶ ತಡೆಯುವ ಹತಾಶ ಯತ್ನ

ಸಿಪಿಐ(ಎಂ)ನಿಂದ ಅಮಾನತುಗೊಂಡವರು ರಚಿಸಿಕೊಂಡು ಕ್ರಾಂತಿಕಾರಿ ಮಾರ್ಕ್ಸ್‌ವಾದಿಗಳ ಕಮ್ಯುನಿಸ್ಟ್ ಪಕ್ಷ (ಸಿಪಿಆರ್‌ಎಂ) ಪಶ್ಚಿಮ ಬಂಗಾಳದ ಡಾರ್ಜಿಲಿಂಗ್ ಜಿಲ್ಲೆಯಲ್ಲಿ ಸಿಪಿಐ(ಎಂ) ಸಮಾವೇಶವೊಂದನ್ನು ತಡೆಯಲು ನಡೆಸಿದ ಪ್ರಯತ್ನ ವಿಫಲಗೊಂಡಿದೆ. ಸಿಪಿಆರ್‌ಎಂ ಒಡ್ಡಿದ ಎಲ್ಲಾ ಅಡ್ಡಿ ಆತಂಕಗಳನ್ನು ಎದುರಿಸಿ ಈರ್ಸಿಯಾಂಗ್ ಪ್ರಾದೇಶಿಕ ಸಮಿತಿ ಫೆಬ್ರವರಿ 9 ರಂದು ಕರ್ಸಿಯಾಂಗ್ ನಲ್ಲಿ ಯಶಸ್ವಿಯಾಗಿ ಸಮಾವೇಶವನ್ನು ನಡೆಸಿತು.

ಸಮಾವೇಶದಲ್ಲಿ ಸಿಪಿಐ(ಎಂ)ನ ಕನಿಷ್ಠ 600 ಬೆಂಬಲಿಗರು ಪಾಲ್ಗೊಂಡಿದ್ದರು.

ಪಶ್ಚಿಮಬಂಗಾಳದ ಸ್ಥಳೀಯ ಸಂಸ್ಥೆ (ಮುನ್ಸಿಪಲ್) ವ್ಯವಹಾರಗಳ ಮಂತ್ರಿ ಅಶೋಕ ಭಟ್ಟಾಚಾರ್ಯ, ಸಿಪಿಐ(ಎಂ) ಡಾರ್ಜಿಲಿಂಗ್ ಜಿಲ್ಲಾ ಸಮಿತಿ ಸಂಘಟನಾ ಸಮಿತಿ ಸಂಚಾಲಕ ಎಸ್.ಪಿ.ಲೆಪ್ಚಾ ಮತ್ತು ಪಕ್ಷದ ಮಾಜಿ ಶಾಸಕ ತುಳಸಿ ಭಟ್ಟಾರಾಯ್ ಮೊದಲಾದವರು ಸಮಾವೇಶದಲ್ಲಿ ಮಾತನಾಡಿದರು.

ಪಕ್ಷದ ನೀತಿಗೆ ವಿರುದ್ಧವಾಗಿ ಪ್ರತ್ಯೇಕ ಗೂರ್ಖಾಲ್ಯಾಂಡ್ ಬೇಡಿಕೆಯನ್ನು ಮಂಡಿಸಿದ ಇಬ್ಬರು ಸಂಸತ್ ಸದಸ್ಯರು ಮತ್ತು ಇತರ ನಾಲ್ಕು ಜನರನ್ನು ಕೆಲವು ತಿಂಗಳ ಹಿಂದೆ ಸಿಪಿಐ(ಎಂ)ನಿಂದ ಅಮಾನತು ಮಾಡಲಾಗಿತ್ತು.

ಶಿವಸೇನೆ-ಬಿಜೆಪಿ: ಮುಗಿದ ಮಧುಚಂದ್ರ

ಮಹಾರಾಷ್ಟ್ರದ ಆಳುವ ಶಿವಸೇನೆ-ಭಾರತೀಯ ಜನತಾ ಪಕ್ಷ ಮೈತ್ರಿ ಕೂಟದಲ್ಲಿ ಭಾರೀ ಬಿರುಕು ಕಾಣಿಸಿಕೊಂಡಿದೆ.

ವಿಶೇಷವಾಗಿ ರಾಜ್ಯದಲ್ಲಿ ನಡೆಯಲಿರುವ ಸ್ಥಳೀಯ ಸಂಸ್ಥೆ ಚುನಾವಣೆಗಳ ಹಿನ್ನೆಲೆಯಲ್ಲಿ ಎರಡೂ ಪಕ್ಷಗಳ ಸಂಬಂಧ ಕಹಿಯಾಗಿರುವುದು ಸ್ಪಷ್ಟವಾಗಿದೆ. ಅನೇಕ ಸ್ಥಳಗಳಲ್ಲಿ ಚುನಾವಣೆ ಹೊಂದಾಣಿಕೆ ಮಾಡಿಕೊಳ್ಳುವಲ್ಲಿ ಅವು ವಿಫಲವಾಗಿವೆ.

ಮುಂಬಯಿ, ಥಾಣೆ, ನಾಗಪುರ, ಅಮರಾವತಿ, ಉಲ್ಲಾಸನಗರ, ಪುಣೆ, ಪಿಂಪ್ರಿ-ಚಿಂಚವಾಡ, ನಾಸಿಕ್ ಮತ್ತು ಸೋಲಾಪುರ ನಗರ ಪಾಲಿಕೆಗಳಿಗೆ ಫೆಬ್ರವರಿ 23 ರಂದು ಚುನಾವಣೆ ನಡೆಯಲಿದೆ.

ನಾಗಪುರ, ಅಮರಾವತಿ, ಉಲ್ಲಾಸನಗರ ಮತ್ತು ಥಾಣೆಗಳಲ್ಲಿ ಈ ಎರಡು 'ಹಿಂದುವಾದಿ'ಪಕ್ಷಗಳ ಮೈತ್ರಿ ಮುರಿದು ಬಿದ್ದಿದೆ. ಉಭಯ ಪಕ್ಷಗಳ ಅಭ್ಯರ್ಥಿಗಳು ಪರಸ್ಪರರ ವಿರುದ್ಧ ಸೆಣಸಲಿದ್ದಾರೆ.

ಮುಂಬಯಿ, ಪುಣೆ, ಪಿಂಪ್ರಿ, ಚಿಂಚವಾಡ, ನಾಸಿಕ್ ಮತ್ತು ಸೋಲಾಪುರ ನಗರಗಳಲ್ಲಿ ಮೈತ್ರಿ ಮುಂದುವರಿದಿದೆ. ಸ್ಥಾನ ಹೊಂದಾಣಿಕೆ ಆಗಿದೆ. ಆದರೆ ಈ ಸ್ಥಾನ ಹೊಂದಾಣಿಕೆಯಿಂದ ಉಭಯ ಪಕ್ಷಗಳಿಗೆ ತೃಪ್ತಿಯಾಗಿಲ್ಲ. ಇದ ರಿಂದಾಗಿ ಎರಡೂ ಪಕ್ಷಗಳಲ್ಲಿ ಬಂಡಾಯ ಕಾಣಿಸಿಕೊಂಡಿದೆ. ಬಂಡುಕೋರ ಅಭ್ಯರ್ಥಿಗಳು ಕಣದಲ್ಲಿದ್ದಾರೆ.

ಎಡ-ಜಾತ್ಯಾತೀತ ಪಕ್ಷಗಳ ಹೊಂದಾಣಿಕೆ

ನಗರ ಪಾಲಿಕೆ ಚುನಾವಣೆಗಳಲ್ಲಿ ಹೊಂದಾಣಿಕೆ ಮಾಡಿಕೊಂಡು ಹೋರಾಡಲು ಸಿಪಿಐ(ಎಂ) ಸಿಪಿಐ ಮತ್ತು ಜನತಾದಳ ನಿರ್ಧರಿಸಿವೆ.

ಒರಿಸ್ಸಾ: ಬರದ ಬವಣೆ ಅಧ್ಯಯನಕ್ಕೆ ಸಮಿತಿ

ಒರಿಸ್ಸಾದ ಪಶ್ಚಿಮ ಭಾಗವನ್ನು ಕಂಗೆಡಿಸಿರುವ ಬರಗಾಲ ಸ್ಥಿತಿಯ ಅಧ್ಯಯನಕ್ಕಾಗಿ ರಾಜ್ಯದ ಪ್ರತಿಪಕ್ಷ ಮುಖಂಡರು ಸಮನ್ವಯ ಸಮಿತಿಯೊಂದನ್ನು ರಚಿಸಿದ್ದಾರೆ.

ಫೆಬ್ರವರಿ 8 ರಂದು ಭುವನೇಶ್ವರದಲ್ಲಿ ಸಭೆ ಸೇರಿದ ನಾಯಕರು ಬರಗಾಲ ಪರಿಸ್ಥಿತಿಯನ್ನು ಎದುರಿಸುವಲ್ಲಿ ಸರಕಾರ ತೋರುತ್ತಿರುವ ಅಲಕ್ಷ್ಯದ ಬಗ್ಗೆ ಗಂಭೀರ ಕಳವಳ ವ್ಯಕ್ತಪಡಿಸಿದರು.

ಬರ ಪರಿಸ್ಥಿತಿಯ ಅಧ್ಯಯನ ನಡೆಸಲಿರುವ ಸಮಿತಿ ರಾಜ್ಯ ಮತ್ತು ಕೇಂದ್ರ ಸರಕಾರಕ್ಕೆ ವರದಿಯನ್ನು ಸಲ್ಲಿಸಿದ್ದು ಬರಗಾಲ ಆವರಿಸಿರುವ ಪ್ರದೇಶಗಳಲ್ಲಿ ಜನರು ಹಸಿವಿನಿಂದ ಸಾಯುತ್ತಿರುವ ಬಗ್ಗೆ ಇನ್ನೂ ವರದಿಗಳು ಬರುತ್ತಿವೆ. ಆದರೂ ಪರಿಸ್ಥಿತಿಯನ್ನು ಪರಿಣಾಮಕಾರಿಯಾಗಿ ಎದುರಿಸಲು ರಾಜ್ಯದ ಕಾಂಗ್ರೆಸ್ ಸರಕಾರ ಸಮರೋಪಾದಿಯಲ್ಲಿ ಕ್ರಮಗಳನ್ನೇ ಕೈಗೊಳ್ಳದಿರುವುದು ಆಶ್ಚರ್ಯವೂ ವಿಷಾದದ ವಿಷಯವೂ ಆಗಿದೆ.

ರಾಜ್ಯ ಸರಕಾರ ಮತ್ತು ಅದರ ಇಲಾಖೆಗಳು ಕುರುಡಾಗಿ ಕುಳಿತಿರುವುದನ್ನು ತೀವ್ರವಾಗಿ ಖಂಡಿಸಿದರು.

ಬರಪೀಡಿತ ಪ್ರದೇಶಗಳಲ್ಲಿನ ಕುಡಿಯುವ ನೀರಿನ ಬಿಕ್ಕಟ್ಟು ಮತ್ತು ಅಗತ್ಯ ಸಾಮಾಗ್ರಿಗಳ ಅಭಾವ ಮುಂದಿನ ದಿನಗಳಲ್ಲಿ ಸಾವಿರಾರು ಜನರ ಪ್ರಾಣಕ್ಕೇ ಕುತ್ತು ತರಬಹುದು ಎಂದು ಸಭೆ ಎಚ್ಚರಿಕೆ ನೀಡಿತು.

ಸಿಪಿಐ(ಎಂ) ಮುಖಂಡ ಜನಾರ್ಧನ ಪತಿ ಅವರಲ್ಲದೆ ಜನತಾದಳ, ಸಿಪಿಐ ಮತ್ತು ಎಸ್‌ಯುಸಿಐ ನಾಯಕರು ಸಭೆಯಲ್ಲಿ ಭಾಗವಹಿಸಿದ್ದರು.

ವಳ್ಳಿಯಪ್ಪ ಕಾರ್ಮಿಕರ ಮೇಲೆ ನಡೆದ ಗೋಲಿಬಾರ್‌ಗೆ ಖಂಡನೆ

ಧಾರವಾಡ: ಕಾರ್ಮಿಕರು ಮೊದಲು ಹಲವು ಬಾರಿ ಮನವಿ ಸಲ್ಲಿಸಿದ್ದರೂ ಪ್ರಯೋಜನ ವಾಗದೆ ಕೊನೆಗೆ ರಸ್ತೆ ತಡೆ ಮೂಲಕ ಪ್ರತಿಭಟಿಸುತ್ತಿದ್ದ ಕಾರ್ಮಿಕರಿಗೆ ಅವರ ಹಕ್ಕನ್ನು ಕೊಡುವ ಬದಲು ಗುಂಡಿನ ಉತ್ತರ ನೀಡಿ ದೌರ್ಜನ್ಯವೆಸಗಿದ ತಪ್ಪಿತಸ್ಥ ಪೋಲೀಸರ ಮೇಲೆ ತೀವ್ರಕ್ರಮ ಜರುಗಿಸಬೇಕೆಂದು ಹಾಗೂ ಗೋಲೀಬಾರ್‌ನಲ್ಲಿ ಸತ್ತವರಿಗೆ ಹಾಗೂ ಗಾಯಗೊಂಡವರಿಗೆ ಕೂಡಲೇ ಪರಿಹಾರ ನೀಡಬೇಕು ಎಂದು ಸಿಐಟಿಯು ಧಾರವಾಡ ಜಿಲ್ಲಾ ಸಂಘಟನಾ ಸಮಿತಿ ಆಗ್ರಹಿಸುತ್ತದೆ.

ಕೊಡಗು: ಕಾರ್ಮಿಕರ ನ್ಯಾಯಯುತ ಹೋರಾಟವನ್ನು ಗೂಂಡಾ ಮತ್ತು ಪೋಲೀಸ್ ಶಕ್ತಿಯಿಂದ ಹತ್ತಿಕ್ಕಲು ಹೊರಟಿರುವ ಶ್ರೀವಳ್ಳಿಯಪ್ಪ ಟೆಕ್ಸ್‌ಟೈಲ್ ಮಾಲೀಕನನ್ನು ಕೂಡಲೇ ಬಂಧಿಸಬೇಕು ಹಾಗೂ ಅಮಾನುಷರ ಮೇಲೆ ಗೋಲಿಬಾರ್ ನಡೆಸಿ ಮಾರಣ ಹತ್ಯೆಗೆ ಕಾರಣರಾದ ಪೋಲೀಸ್ ಅಧಿಕಾರಿಗಳನ್ನು ಕೂಡಲೇ ಸೇವೆಯಿಂದ ಅಮಾನತ್ತು ಗೊಳಿಸಬೇಕೆಂದು ರಾಜ್ಯ ಸರಕಾರವನ್ನು ಒತ್ತಾಯಿಸಿದೆ.

ಬೆಳಗಾವಿ: ಗುಂಡೂರಾವ್ ದಾರಿಯಲ್ಲಿ ಸಾಗಿರುವ ಜೆ.ಎಚ್.ಪಟೇಲರು ತಮ್ಮ ಪೋಲೀಸ್ ಪಡೆಯನ್ನು ನಿಯಂತ್ರಣದಲ್ಲಿ ಇಟ್ಟುಕೊಳ್ಳದಿದ್ದರೆ ಪಶ್ಚಾತಾಪ ಪಡಬೇಕಾಗುತ್ತದೆ. ಈ ಪೋಲೀಸ್ ದೌರ್ಜನ್ಯವನ್ನು ತೀವ್ರವಾಗಿ ಖಂಡಿಸಿರುವ ಕಾರ್ಯದರ್ಶಿ ವಿಪಿ.ಕುಲಕರ್ಣಿಯವರು ರಾಜ್ಯ ಸಿಐಟಿಯು ಪ್ರಧಾನ ಕಾರ್ಯದರ್ಶಿ ವಿಜೆಕೆ ನಾಯರ್ ಮತ್ತಿತರ ಕಾರ್ಮಿಕ ಮುಖಂಡರನ್ನು ಬಂಧಿಸಿ ರುವುದನ್ನು ಪ್ರತಿಭಟಿಸಿದ್ದಾರೆ. ಕೂಡಲೇ ಮುಖಂಡರನ್ನು ಬಿಡುಗಡೆ ಮಾಡದಿದ್ದಲ್ಲಿ ಎಲ್ಲೆಡೆ ಪ್ರತಿಭಟನಾ ಚಳುವಳಿ ಹಮ್ಮಿಕೊಳ್ಳ ಬೇಕಾದೀತು ಎಂದು ಎಚ್ಚರಿಸಿದ್ದಾರೆ.

ಸಿಂಧನೂರು: ಟ್ರೇಡ್ ಯೂನಿಯನ್ (ಸಿಐಟಿಯು)ಗೆ ವಳ್ಳಿಯಪ್ಪ ಟೆಕ್ಸ್‌ಟೈಲ್‌ನ ಕಾರ್ಮಿಕರು ಸೇರಿದ್ದನ್ನು ಸಹಿಸದ ಕಾರ್ಖಾನೆಯ ಮಾಲೀಕ ವಳ್ಳಿಯಪ್ಪ ಹಾಗೂ ಪೋಲೀಸರು ಶಾಮೀಲಾಗಿರುವಂತೆ ಕಂಡುಬರುವ ಈ ಘಟನೆಯ ಬಗ್ಗೆ ನ್ಯಾಯಾಂಗ ತನಿಖೆ ನಡೆಯಬೇಕು, ಮೃತಪಟ್ಟ ಕುಟುಂಬಕ್ಕೆ 5 ಲಕ್ಷ ರೂ. ಪರಿಹಾರ ಧನ ಮತ್ತು ಗಾಯ ಗೊಂಡವರಿಗೆ ಪರಿಹಾರ ಧನ ಕೊಡಬೇಕು. ಮೃಗಗಳಂತೆ ವರ್ತಿಸಿದ ರಾಕ್ಷಸಿ ಕೃತ್ಯಕ್ಕೆ ಪ್ರೇರೇಪಿಸಿದ ಎಸ್.ಪಿ. ನಾರಾಯಣ ಗೌಡರನ್ನು ಕೂಡಲೇ ಅಮಾನತ್ತಿನಲ್ಲಿಡಬೇಕು, ಕಾರ್ಖಾನೆಯ ಮಾಲಿಕನನ್ನೂ ಕೂಡ ಬಂಧಿಸಬೇಕು ಎಂದು ಎಸ್‌ಎಫ್‌ಐ ಸಿಂಧನೂರು ತಾಲೂಕು ಸಮಿತಿ ಅಧ್ಯಕ್ಷರಾದ ಸಿ.ಚಿದಾನಂದಕುಮಾರ್ ಹಾಗೂ ಕಾರ್ಯದರ್ಶಿ ಶಿವಮೂರ್ತಿ ತಿಡಿಗೊಳ ಪತ್ರಿಕಾ ಹೇಳಿಕೆ ನೀಡಿದ್ದಾರೆ.

ಉ.ಕ.: ಹಂಚು ಕಾರ್ಮಿಕರ ಪಿಕೆಟಿಂಗ್

ಭಟ್ಕಳ: ಉತ್ತರ ಕನ್ನಡ ಜಿಲ್ಲೆಯ ಹಂಚು ಕಾರ್ಮಿಕರು ಸರಕಾರ 87 ರ ನಂತರ ಕನಿಷ್ಟ ಕೂಲಿ ಪರಿಷ್ಕರಣೆ ನಡೆಸದೇ ಇರುವುದನ್ನು ಪ್ರತಿಭಟಿಸಿ 3 ಹಂತದ ಚಳುವಳಿಯಾಗಿ ಭಟ್ಕಳ ಸಹಾಯಕ ಕಮಿಷನರ್ ಕಛೇರಿ ಎದುರೇ ಪಿಕೆಟಿಂಗ್ ನಡೆಸಿದರು.

ಭಟ್ಕಳ, ಶಿರಾಲಿ, ಮುರ್ಡೇಶ್ವರ ಪ್ರದೇಶದ ಒಂದು ಸಾವಿರಕ್ಕೂ ಮಿಕ್ಕಿ ಹಂಚಿನ ಕಾರ್ಮಿಕರು ಭಟ್ಕಳ ಸಾಗರ ರಸ್ತೆಯಿಂದ ಬೃಹತ್ ಮೆರವಣಿಗೆ ನಡೆಸಿ ನಗರದ ಪ್ರಮುಖ ಬೀದಿಯಲ್ಲಿ ಘೋಷಣೆ ಕೂಗುತ್ತಾ ಎ.ಸಿ. ಕಛೇರಿ ಎದುರು ಪಿಕೆಟಿಂಗ್ ನಡೆಸಿದರು.

ಸಭೆಯನ್ನುದ್ದೇಶಿಸಿ ಜಿಲ್ಲಾ ಹಂಚು ಕಾರ್ಮಿಕ ಸಂಘದ ಪ್ರಧಾನ ಕಾರ್ಯದರ್ಶಿ ತಿಲಕ ಗೌಡ ಮತ್ತು ಸಹ ಕಾರ್ಯದರ್ಶಿ ಸುಭಾಸ ಕೊಪ್ಪಿಕರ ಮಾತನಾಡಿದರು. ಸಂಘದ ಮುಖಂಡರಾದ ಈಶ್ವರ ನಾಯ್ಕ, ಶಂಕರ ದೇವಾಡಿಗ, ಗಣಪತಿ ದೇವಾಡಿಗ, ಚಂದ್ರುನಾಯ್ಕ, ಮುನ್ವೇಲ್ ಡಿಸೋಜ, ವೆಂಕಟೇಶ್ ದೇವಾಡಿಗ, ನಾಗಪ್ಪ ದೇವಾಡಿಗ ಹಾಜರಿದ್ದರು.

ಹೊನ್ನಾವರದಲ್ಲಿ 600 ಮಿಕ್ಕಿ ಕಾರ್ಮಿಕರು ಬೃಹತ್ ಮೆರವಣಿಗೆ ನಡೆಸಿ ತಹಶೀಲದಾರ ಕಛೇರಿ ಎದುರು ಪಿಕೆಟಿಂಗ್ ನಡೆಸಿದರು. ಸಂಘದ ರಾಮಾ, ಶಿವಯ್ಯ ಗೌಡ, ಸೂರ್ಯ, ಮಂಜು ಗೌಡ, ಮಂಜುಪಾಯಗೌಡ, ಸೀತಾರಾಮ, ನಾರಾಯಣ, ಪರುಶು ಮೇಸ್ತ್ರಿ, ಮೋಹನ್ ಪುಲಕರ ಹಾಜರಿದ್ದರು.

ಪಕ್ಷದಿಂದ ಉಚ್ಚಾಟನೆ

ಸಿಪಿಐ(ಎಂ)ನ ಬಳ್ಳಾರಿ ಜಿಲ್ಲಾ ಕಾರ್ಯದರ್ಶಿ ಮಂಡಳಿ ಸದಸ್ಯರಾಗಿದ್ದ ಜೆ.ಎಂ. ವೀರಸಂಗಯ್ಯನವರು ಪಕ್ಷದ ಶಿಸ್ತನ್ನು ಉಲ್ಲಂಘಿಸಿ, ಹಲವು ಎಚ್ಚರಿಕೆಗಳನ್ನು ನೀಡಿದರೂ ತಮ್ಮ ಅನೈತಿಕ ವರ್ತನೆಯನ್ನು ಹಾಗೂ ದುರ್ವರ್ತನೆಗಳನ್ನು ಮುಂದುವರಿಸಿಕೊಂಡು ಹೋಗುತ್ತಿ ರುವುದನ್ನು ಪರಿಶೀಲಿಸಿ ಅವರನ್ನು ಪಕ್ಷದಪ್ರಾಥಮಿಕ ಸದಸ್ಯತ್ವದಿಂದ ಉಚ್ಚಾಟನೆ ಮಾಡುವ ನಿರ್ಣಯವನ್ನು ಫೆಬ್ರವರಿ 5 ಹಾಗೂ 6 ರಂದು ಸಭೆ ಸೇರಿದ ಸಿಪಿಐ(ಎಂ) ಕರ್ನಾಟಕರಾಜ್ಯಸಮಿತಿ ಅನುಮೋದಿಸಿದೆ.

ನಾಟೋ ವಿಸ್ತರಣೆಗೆ ರಶ್ಯಾ ವಿರೋಧ

ನಾಟೋವನ್ನು ವಿಸ್ತರಿಸಿ ಮಧ್ಯ ಹಾಗೂ ಪೂರ್ವ ಯುರೋಪಿನ ದೇಶಗಳನ್ನು ಸದಸ್ಯರಾಗಿ ತೆಗೆದುಕೊಳ್ಳುವ ಬಗ್ಗೆ ನಾಟೋದ ಒಳಗೆ ವಿವಾದ ಮತ್ತು ಅದಕ್ಕೆ ರಶ್ಯಾದ ತೀವ್ರ ವಿರೋಧ, ಶೀತಲ ಸಮರ ಮುಗಿದಿಲ್ಲ. ಸೋವಿಯತ್ ಒಕ್ಕೂಟದ ವಿಘಟನೆ ಯುರೋಪಿನಲ್ಲಿ ಶಾಂತಿ, ನಿಶ್ಯಸ್ತ್ರೀಕರಣಕ್ಕೆ ಎಡೆಮಾಡಿಕೊಟ್ಟಿಲ್ಲ. ಬದಲಾಗಿ ಇನ್ನೊಂದು ಮಹಾ ಯುದ್ಧದತ್ತ ಸರಿಯುತ್ತಿರಬಹುದು ಎಂದು ಇನ್ನೊಮ್ಮೆ ತೋರಿಸಿಕೊಟ್ಟಿದೆ.

ಪೋಲೆಂಡ್, ಚೆಕ್ ಹಾಗೂ ಹಂಗೇರಿ -ಈ ದೇಶಗಳು ನಾಟೋ ಸದಸ್ಯತ್ವಕ್ಕೆ ಅರ್ಜಿ ಹಾಕಿದ್ದವು. ಈ ವರ್ಷದ ಮಧ್ಯದೊಳಗೆ ಸದಸ್ಯತ್ವ ಕೊಡಬೇಕೆಂದು ಅಮೆರಿಕದ ಆಶಯ. ಆದರೆ ಇದಕ್ಕೆ ಯುರೋಪಿನ ಕೆಲವು ಸದಸ್ಯ ದೇಶಗಳು ಉತ್ಸುಕವಾಗಿಲ್ಲ. ಕೆಲವು ಸದಸ್ಯರು ಇದನ್ನು ಬಲವಾಗಿ ವಿರೋಧಿಸುತ್ತಿದ್ದಾರೆ. ತುರ್ಕಿ ಮುಖ್ಯವಾಗಿ ತನಗೆ ಯುರೋಪಿಯನ್ ಒಕ್ಕೂಟದ ಸದಸ್ಯತ್ವ ಕೊಡದೆ, ನಾಟೋ ವಿಸ್ತರಣೆಗೆ ವಿರೋಧಿಸಿದೆ. ಅಮೆರಿಕದ ವಿದೇಶಿ ವಿಭಾಗದ ಒಳಗೆ ಹಾಗೂ ಯುರೋಪಿನ ಕೆಲವು ದೇಶಗಳ ವಿದೇಶಿ ನೀತಿ ತಜ್ಞರು ನಾಟೋವನ್ನು ವಿಸ್ತರಿಸುವ ಅವಶ್ಯಕತೆಯನ್ನು ಪ್ರಶ್ನಿಸಿದ್ದಾರೆ. ಮಧ್ಯ ಹಾಗೂ ಪೂರ್ವ ಯುರೋಪಿನ ದೇಶಗಳನ್ನು ನಾಟೋಗಳಿಗೆ ಸೇರಿಸಿಕೊಳ್ಳುವುದೆಂದರೆ ರಶ್ಯವನ್ನು ಅನಗತ್ಯವಾಗಿ ಪ್ರಚೋದಿಸಿದಂತೆ, ಅಲ್ಲದೆ ಈ ಹೊಸ ಸದಸ್ಯ ದೇಶಗಳ ಸೈನ್ಯವನ್ನು ನಾಟೋಗೆ ಕೇಂದ್ರೀಯ ಕಮಾಂಡಿನ ಒಳಗೆ ತರುವುದು ಭಾರಿ ವೆಚ್ಚ ಹಾಗೂ ಸಮಯ ತೆಗೆದುಕೊಳ್ಳುವುದು ಎಂದು ಈ ಟೀಕಾಕಾರರ ಅಭಿಪ್ರಾಯ. ಅಲ್ಲದೆ ತುರ್ಕಿ ಗ್ರೀಸ್‌ನ ನಡುವಿನ ವಿರಸದಂತಹ ಸಮಸ್ಯೆಗಳನ್ನು ಪರಿಹರಿಸಲು ಆಗದಿರುವಾಗ ಹೆಚ್ಚಿನ ಸದಸ್ಯರನ್ನು ಸೇರಿಸಿಕೊಂಡರೆ ಇಂತಹ ಹಲವು ವಿವಾದಗಳು ನಾಟೋದ ಬಗಲಿಗೆ ಬೀಳುತ್ತವೆ ಎಂದೂ ಅವರ ಟೀಕೆ.

ಈ ನಡುವೆ ನಾಟೋದಲ್ಲಿ ಪೂರ್ವ ಯುರೋಪು ದೇಶಗಳನ್ನು ಹಾಗೂ ಕೆಲವು ಮಾಜಿ ಸೋವಿಯತ್ ಗಣರಾಜ್ಯಗಳನ್ನು ಸದಸ್ಯರಾಗಿ ತೆಗೆದುಕೊಂಡು ಅಲ್ಲಿ ನಾಟೋ ಸೈನ್ಯವನ್ನು ಇರಿಸಿ, ರಶ್ಯಾದ ಭದ್ರತೆಗೆ ತೀವ್ರ ಸವಾಲು ಒಡ್ಡುತ್ತಿದೆ ಎಂದು ರಶ್ಯಾದಲ್ಲಿ ಜನಜನಿತವಾದ ಭಾವನೆಗೆ ಯೆಲ್ಸಿನ್ ಸರಕಾರ ಬೆಲೆ ಕೊಡಬೇಕಾಗಿ ಬಂದಿದೆ. ಯೆಲ್ಸಿನ್ ಹಾಗೂ ರಕ್ಷಣ ಮಂತ್ರಿ ಈ ರೀತಿ ಹೇಳುವ ಧೈರ್ಯ ಮಾಡಿರದಿದ್ದರೂ, ಇತ್ತೀಚೆಗೆ ರಶ್ಯದ ವಿದೇಶಾಂಗ ಮಂತ್ರಿ, ನಾಟೋ ರಶ್ಯದ ನೆಲೆಯ ದೇಶಗಳಲ್ಲಿ ಸೈನ್ಯ ನೆಲೆಸಿದರೆ ಅಣ್ವಸ್ತ್ರ ಕ್ಷಿಪಣಿಗಳನ್ನು ಅಮೆರಿಕದತ್ತ ಗುರಿಯಿಡುವ ಕ್ರಮವನ್ನು ರಶ್ಯಾ ಕೈಗೊಳ್ಳಬೇಕಾಗುತ್ತದೆ ಎಂದು ಎಚ್ಚರಿಸಿದ್ದಾರೆ. ಇತ್ತೀಚೆಗೆ ಯೆಲ್ಸಿನ್ ನಾಟೋದ ಭದ್ರತೆ ಹಾಗೂ ರಶ್ಯಾದ ಭದ್ರತೆಗೆ ಸವಾಲು ಹಾಕುವ ಪ್ರಯತ್ನವನ್ನು ಖಂಡಿಸಿದ್ದಾರೆ.

ಕ್ಲಿಂಟನ್ ತನ್ನ ಎರಡನೇ ಅಧ್ಯಕ್ಷೀಯ ಕಾಲದಲ್ಲಿ ನಾಟೋದ ವಿಸ್ತರಣೆಯನ್ನು ಆದ್ಯತೆಯ ವಿಷಯವಾಗಿಸಿದ್ದಾರೆ. ರಶ್ಯಾದ ವಿರೋಧವನ್ನು ಕಡಿಮೆ ಮಾಡಲು ಉತ್ತರಿಸಿದ ನಾಟೋ ರಶ್ಯದ ಜತೆ ವಿಶೇಷ ಒಪ್ಪಂದವನ್ನು ಮಾಡಿ, ರಶ್ಯದ ಭದ್ರತೆ ಬಗ್ಗೆ ಗ್ಯಾರಂಟಿ ಕೊಡುವುದು ಎಂಬ ನಾಟಕ ಮಾಡುತ್ತಿತ್ತು. ಇದು ಯೆಲ್ಸಿನ್ ಹಾಗೂ ಆತನ ಬಾಲಬಡುಕ ಸರಕಾರಕ್ಕೆ ಅಂಗೀಕರಿಸಬಹುದಾದ ಆಶ್ವಾಸನೆ ಎನ್ನಿಸಬಹುದು. ಆದರೆ ಯೆಲ್ಸಿನ್ ಸರಕಾರದಲ್ಲೇ ಹಲವರು ರಶ್ಯದ ಭದ್ರತೆ ಬಗ್ಗೆ ತೀವ್ರ ಆತಂಕಿತರಾಗಿದ್ದಾರೆ. ಕಮ್ಯುನಿಸ್ಟ್ ಬಹುಮತ ಪಾರ್ಲಿಮೆಂಟು ನಾಟೋದ ವಿಸ್ತರಣೆ ಹಾಗೂ ಈ ವಿಶೇಷ ಒಪ್ಪಂದವನ್ನು ಸ್ಪಷ್ಟವಾಗಿ ತಿರಸ್ಕರಿಸಿದೆ. ನಾಟೋದ ವಿಸ್ತರಣೆ ಮೂಲಕ ರಶ್ಯವನ್ನು ಮಿಲಿಟರಿಯಾಗಿ ಸುತ್ತುವರಿದು 'ಶೀತ ಸಮರ'ದಲ್ಲಿ ತಾನು ಅಂತೂ ವಿಜಯಿ ಎಂದು ಸಾಧಿಸಲು ಹೊರಟಿದೆ ಎಂದು ತೀವ್ರವಾಗಿ ಖಂಡಿಸಿದೆ. ಇದು ರಶ್ಯಾಕ್ಕೆ ಅಂಗೀಕಾರಾರ್ಹ ಅಲ್ಲ ಎಂದಿದೆ. ರಶ್ಯದ ಪಾರ್ಲಿಮೆಂಟು ಈ ಹಿನ್ನೆಲೆಯಲ್ಲಿ ಸ್ಟಾರ್ಟ್-2 ಎಂಬ ನಿಶ್ಯಸ್ತ್ರೀಕರಣ ಒಪ್ಪಂದವನ್ನು ಮಂಜೂರು ಮಾಡುವುದಿಲ್ಲ ಎಂದು ಬೆದರಿಸಿದೆ.

ರಶ್ಯಾದ ವಿರೋಧದ ಬಗ್ಗೆ ಚರ್ಚಿಸಿ ನಾಟೋ ವಿಸ್ತರಣಾ ನೀತಿ ಬಗ್ಗೆ ಒಂದು ನಿರ್ಧಾರಕ್ಕೆ ಬರಲು ಫ್ರಾನ್ಸ್ ಐದು ದೇಶಗಳ ಸಮ್ಮೇಳನ ಕರೆಯಬೇಕೆಂದು ಸೂಚಿಸಿದೆ. ಅಮೆರಿಕ, ಫ್ರಾನ್ಸ್, ಬ್ರಿಟನ್, ಜರ್ಮನಿ ಮತ್ತು ರಶ್ಯಾ - ಈ ಐದು ದೇಶಗಳು. ಅಮೆರಿಕ ಈ ಫ್ರೆಂಚ್ ಪ್ರಸ್ತಾಪವನ್ನು ಸಾರ್ವಜನಿಕವಾಗಿ ತಿರಸ್ಕರಿಸದಿದ್ದರೂ, ಆ ಬಗ್ಗೆ ಆಸಕ್ತವಾಗಿಲ್ಲ. ಅಮೆರಿಕದ ನಾಟೋ ವಿಸ್ತರಣಾ ನೀತಿಯನ್ನು ಯುರೋಪು ಹಾಗೂ ರಶ್ಯಾದ ಮೇಲೆ ಏಕಪಕ್ಷೀಯವಾಗಿ ಹೊರಿಸಲು ಕ್ಲಿಂಟನ್ ಹೊರಟಿದ್ದಾರೆ. ಇದು ರಶ್ಯಾ ಮಾತ್ರವಲ್ಲ ಕೊನೆಗೆ ಯುರೋಪಿನ ಭದ್ರತೆಗೆ ಮಾರಕ ನೀತಿ ಎಂದು ಯುರೋಪಿನ ಶಾಂತಿ ಪ್ರಿಯರು ಹೇಳಿದ್ದಾರೆ. ಸೋವಿಯತ್ 'ಬೆದರಿಕೆ' ಮುಗಿದು ಶಾಂತಿ, ನಿಶ್ಯಸ್ತ್ರೀಕರಣದ ನೀತಿ ವಿಸ್ತರಣೆ ಆಗಿ ನಾಟೋವನ್ನೇ ಭಂಗಗೊಳಿಸ ಬೇಕಾಗಿರುವುದು ನಿಜವಾದ ಶಾಂತಿ ಭದ್ರತೆಯತ್ತ ಪ್ರಗತಿಪರ ಹೆಜ್ಜೆ. ಅದರ ಬದಲು 'ಶೀತ ಸಮರ' ಮುಗಿದಿದೆ ಎಂಬ ಅಬ್ಬರದ ಪ್ರಚಾರಮಾಡಿ, ಆ ಯುದ್ಧವನ್ನು ಮುಂದುವರೆಸುತ್ತಲೇ ಗೆಲ್ಲುವುದಕ್ಕೆ ಹೊರಟಿದ್ದಾರೆಎಂದುಟೀಕಿಸುತ್ತಿದ್ದಾರೆ.

ಈ ನಡುವೆ ಜರ್ಮನಿ, ಫ್ರಾನ್ಸ್ ಹಾಗೂ ಪೋಲೆಂಡ್ ತ್ರಿ-ಪಕ್ಷೀಯ ಮಿಲಿಟರಿ ಸಹಕಾರ ಒಪ್ಪಂದ ಮಾಡಿಕೊಂಡಿವೆ. ಇದು ಅದನ್ನು ನಾಟೋದಲ್ಲಿ ಸೇರಿಸುವ ಮೊದಲ ಹೆಜ್ಜೆ ಎಂಬ ಕಾರಣಕ್ಕಾಗಿ ರಶ್ಯ ವಿರೋಧಿಸಿದೆ.

ನಾಟೋದ ವಿಸ್ತರಣಾ ನೀತಿ ರಶ್ಯಾ ಮಾತ್ರವಲ್ಲ, ಚೀನಾ ಭಾರತದ ಆತಂಕಕ್ಕೂ ಕಾರಣವಾಗಿದೆ. ಸೋವಿಯತ್ ಒಕ್ಕೂಟ-ಅಮೆರಿಕ ನಾಯಕತ್ವದ ಎರಡು ಮಿಲಿಟರಿ ಬಣಗಳ ನಡುವೆ ಘರ್ಷಣೆ ತೀವ್ರ ಪರಿಸ್ಥಿತಿಯಲ್ಲಿದ್ದಾಗಲೂ ಈ ಎರಡೂ ಬಣಗಳನ್ನೂ ಸೇರದೆ ಅಲಿಪ್ತವಾಗಿದ್ದ ಈ ದೊಡ್ಡ ದೇಶಗಳೂ ನಾಟೋದ ವಿಸ್ತರಣೆ ಭದ್ರತೆಗೆ ಅಪಾಯ ಎಂದು ಪರಿಗಣಿಸುತ್ತಿವೆ. ನಾಟೋದ ವಿಸ್ತರಣಾ ನೀತಿ ಹಾಗೂ ಅಮೆರಿಕ-ಜಪಾನಿ ಭದ್ರತಾ ಸಹಕಾರದಿಂದಾಗಿ ರಶ್ಯ-ಚೀನಾ ನಾಟೋ ವಿರೋಧವಾಗಿ ಮಿಲಿಟರಿ ಸಹಕಾರದತ್ತ ಸರಿಯುತ್ತಿರುವಂತೆ ಕಾಣುತ್ತಿದೆ.

ಭಾರತದ ಜತೆ ಅಣುಶಕ್ತಿ ರಿಯಾಕ್ಟರ್ ವ್ಯಾಪಾರ: ಅಮೆರಿಕದ ವಿರೋಧಕ್ಕೆ ರಶ್ಯದ ತಿರಸ್ಕಾರ

ಹಲವು ವಿದ್ಯಮಾನಗಳಲ್ಲಿ ಅಮೆರಿಕದ ಉದ್ಧಟತನ ಮೇರೆ ಮೀರಿದ್ದು, ಬೆನ್ನೆಲುಬಿಲ್ಲದ ಯೆಲ್ಸಿನ್ನರ ರಶ್ಯಾ ಸರಕಾರ ಅದಕ್ಕೆ ಪ್ರಚೋದಕವಾಗಿತ್ತು. ಆದರೆ ಹಲವಾರು ವಿಷಯಗಳಲ್ಲಿ ಬೆನ್ನೆಲುಬಿಲ್ಲದ ಯೆಲ್ಸಿನ್ ಸರಕಾರ ಅಮೆರಿಕದ ಧಿಮಾಕಿನ ಒತ್ತಾಯಗಳನ್ನು ತಿರಸ್ಕರಿಸಲಾರಂಭಿಸಿದೆ. ಭಾರತಕ್ಕೆ ಅಣು ಶಕ್ತಿ ರಿಯಾಕ್ಟರುಗಳನ್ನು ಮಾರುವ ಬಗ್ಗೆ ಅಮೆರಿಕದ ವಿರೋಧವನ್ನು ರಶ್ಯನ್ ಸರಕಾರ ತಿರಸ್ಕರಿಸಿದೆ. 1992 ರ ಅಂತರ್ರಾಷ್ಟ್ರೀಯ ಅಣುಶಕ್ತಿ ತಯಾರಕರ ಗುಂಪಿನ ಒಪ್ಪಂದವನ್ನು ಈ ಮಾರಾಟ ಮುರಿಯುತ್ತಿದೆ ಎಂಬ ಅಮೆರಿಕದ ವಿರೋಧ ಹುರುಳಿಲ್ಲದ್ದು. ಭಾರತ ವಿಶ್ವಸಂಸ್ಥೆ ಹಾಗೂ ಅಂತರ್ರಾಷ್ಟ್ರೀಯ ಅಣುಶಕ್ತಿ ಸಂಘಟನೆಯ ಸದಸ್ಯ. ಅದರ ಜತೆ ಅಣುಶಕ್ತಿ ಸೇರಿದಂತೆ ಎಲ್ಲಾ ವಿಭಾಗಗಳಲ್ಲಿ ರಶ್ಯ ಸಹಕಾರ ವಿಸ್ತರಿಸಲು ಯಾವುದೇ ಅಂತರ್ರಾಷ್ಟ್ರೀಯ ಒಪ್ಪಂದ ಅಡ್ಡಿಬರುವುದಿಲ್ಲ ಎಂದು ರಶ್ಯನ್ ವಕ್ತಾರರು ಖಂಡಿತವಾಗಿ ಹೇಳುತ್ತಾರೆ.

ಅಮೆರಿಕದ ಕ್ಯೂಬಾ ವಿರೋಧಿ ಕಾನೂನಿಗೆ ಕ್ಯೂಬಾ ಪ್ರತಿಕ್ರಮ

ಕ್ಯೂಬಾದ ಜತೆ ವಾಣಿಜ್ಯ ಸಂಬಂಧ ಇಟ್ಟುಕೊಳ್ಳುವ ಕಂಪನಿಗಳನ್ನು ಶಿಕ್ಷಿಸುವ ಅಮೆರಿಕದ ಹೆಲ್ಮ್-ಬರ್ಟನ್ ಕಾನೂನಿಗೆ ಕ್ಯೂಬಾ ಪ್ರತಿಕ್ರಮವಾಗಿ ಕಾನೂನು ಮಂಜೂರು ಮಾಡಿ ಜಾರಿಗೆ ತಂದಿದೆ. ಈ ಕಾನೂನಿನ ಪ್ರಕಾರ ಕ್ಯೂಬಾದ ವಿರುದ್ಧ ಅಮೆರಿಕನ್ ಸಶಸ್ತ್ರ ಕಾರ್ಯಾಚರಣೆಗಳು, ಬುಡಮೇಲು ಕೃತ್ಯ, ವ್ಯಾಪಾರ ದಿಗ್ಬಂಧನ, ಶಿಕ್ಷಾ ಕ್ರಮಗಳಿಂದ ನೊಂದ ನಾಗರೀಕರು, ಕಂಪನಿಗಳು, ಸಂಸ್ಥೆಗಳು ಅಮೆರಿಕದ ಸರಕಾರ ಅಥವಾ ಇತರ ಸಂಘಟನೆಗಳ ವಿರುದ್ಧ ಪರಿಹಾರಕ್ಕೆ ಕೋರ್ಟಿಗೆ ಹೋಗಬಹುದು. ಇತಂಹ ನಾಗರೀಕರ, ಗುಂಪುಗಳ ಸಹಾಯಕ್ಕೆ ಕಮಿಶನ್‌ಗಳನ್ನು ರಚಿಸಲಾಗಿದೆ. ಈ ಕಮಿಶನ್ ಇತಂಹ ಎಲ್ಲಾ ಪರಿಹಾರಕ್ಕೆ ಬೇಡಿಕೆಯನ್ನು ಕ್ರೋಢೀಕರಿಸಿ ಕ್ರಮ ಕೈಗೊಳ್ಳುವುದು.

ಕ್ಯೂಬಾ ಹಿಂದೆ ರಾಷ್ಟ್ರೀಕರಿಸಿದ ವಿದೇಶೀ ಕಂಪನಿಗಳು ಪರಿಹಾರಕ್ಕೆ ಕಾನೂನು ಕ್ರಮ ಹೂಡಿದರೆ, ಈ ಎಲ್ಲಾ ಅಮೆರಿಕನ್ ಕೃತ್ಯಗಳ ಪರಿಹಾರದ ಜತೆ ಅವನ್ನು ತುಳಿದು ಹಾಕಲು ಈ ಕಾನೂನು ಅವಕಾಶ ಮಾಡಿಕೊಟ್ಟಿದೆ.

ರಶ್ಯನ್ ಕಮ್ಯುನಿಸ್ಟ್ ಪಕ್ಷ ಇಂಟರ್‌ನೆಟ್‌ನಲ್ಲಿ

ಇಂಟರ್ ನೆಟ್‌ನಲ್ಲಿ ವೆಬ್ ಸೈಟ್ ಸ್ಥಾಪಿಸಿ ಈ ಹೊಸ ಮಾಧ್ಯಮವನ್ನು ತನ್ನ ಪ್ರಚಾರ - ಪ್ರಕ್ಷೋಭೆಗಳಿಗೆ ಬಳಸಲು ಮುಂತಾದ ಕಮ್ಯುನಿಸ್ಟ್ ಪಕ್ಷಗಳ ಸಾಲನ್ನು ರಶ್ಯನ್ ಕಮ್ಯುನಿಸ್ಟ್ ಪಕ್ಷ ಸೇರಿದೆ ಎಂದು ಆ ಪಕ್ಷದ ವಕ್ತಾರರು ಘೋಷಿಸಿದ್ದಾರೆ.

ಕತ್ತಿ, ಸುತ್ತಿಗೆಯ ಪಕ್ಷದ ಚಿಹ್ನೆಯನ್ನು ಬಳಸುವ ಈ ವೆಬ್‌ಸೈಟ್ ಪಕ್ಷದ ಕಾರ್ಯಕ್ರಮ ನಾಯಕರ ಭಾವಚಿತ್ರ, ವಿವರಗಳು, ಪಕ್ಷದ ನಾಯಕರ ಹೇಳಿಕೆ, ಧೋರಣಾ ಪತ್ರ, ಪ್ರಚಲಿತ ವಿದ್ಯಮಾನಗಳ ಬಗ್ಗೆ ನೀತಿಗಳನ್ನು ಬಿತ್ತರಿಸುವುದು ಎಂದು ಹೇಳಿದ್ದಾರೆ.

ಲೋಕಸಂಚಾರ



ಶರತ್‌ಚಂದ್ರ

ಹಾಂಗ್‌ಕಾಂಗ್ ಮೇಲೆ ಹತ್ತು ಸಾವಿರ ಅಡಿ ಉದ್ದದ ಡ್ರಾಗನ್ ದೀಪಮಾಲೆ

ಹಾಂಗ್‌ಕಾಂಗ್ ಈ ವರ್ಷದ ಮಧ್ಯದ ಹೊತ್ತಿಗೆ ಬ್ರಿಟನ್ ವಸಾಹತು ಆಗಿದ್ದದ್ದು, ಚೀನಾದ ಜತೆ ಪುನರೈಕ್ಯ ಗೊಂಡು ಚೀನಾದ ಸ್ವಾಯತ್ತ ಪ್ರದೇಶವಾಗುವುದು. ಈ ಸಂದರ್ಭವನ್ನು ಸಂಭ್ರಮದಿಂದ ಆಚರಿಸಲು ಸಕಲ ಸಿದ್ಧತೆ ನಡೆದಿದೆ.

ಈ ಸಂದರ್ಭದಲ್ಲಿ ಹಾಂಗ್‌ಕಾಂಗ್ ದ್ವೀಪದ ಮೇಲೆ ಹತ್ತುಸಾವಿರ ಅಡಿ ಉದ್ದದ ದೀಪಗಳಿಂದ ಮಾಡಿದ ಡ್ರಾಗನ್‌ನನ್ನು ಪ್ರದರ್ಶಿಸಲು ಭರದ ಸಿದ್ಧತೆ ನಡೆದಿದೆ. ಇದು ಜಗತ್ತಿನಲ್ಲೇ ಅತಿ ದೊಡ್ಡ ದೀಪಮಾಲಾ ಪ್ರದರ್ಶನವಾಗಿರುವುದು ಎಂದು ಸಂಘಟಕರು ಹೇಳಿದ್ದಾರೆ.

ಕುಮಾರ ತುಂಗ ಕೊಲೆಯಲ್ಲಿ ಪ್ರೇಮದಾಸ, ವಿಜೆರತ್ನೆ ಶಾಮೀಲು?

ಶ್ರೀಲಂಕಾದ ಅಧ್ಯಕ್ಷೆ ಚಂದ್ರಿಕಾರವರ ಪತಿ ಕುಮಾರ ತುಂಗಾರವರ ಕೊಲೆಯ ಬಗ್ಗೆ ತನಿಖೆ ನಡೆಸಲು ಆಯೋಜಿಸಿದ್ದ ಕಮಿಶನ್ ರಾಜಕೀಯವಾಗಿ ಆಸ್ಫೋಟಕಾರಿ ಅಂಶಗಳನ್ನು ಬೆಳಕಿಗೆ ತಂದಿದೆ. ಕಮಿಶನ್ನಿನ ತನಿಖೆ ಪ್ರಕಾರ ಮಾಜಿ ಅಧ್ಯಕ್ಷ ಪ್ರೇಮದಾಸ ಹಾಗೂ ಉಪರಕ್ಷಣ ಮಂತ್ರಿ ರಂಜನ್ ವಿಜೆರತ್ನೆ ಇವರು ಕುಮಾರ ತುಂಗ ಕೊಲೆ ಪಿತೂರಿಯಲ್ಲಿ ಶಾಮೀಲಾಗಿದ್ದಾರೆ ಎಂಬ ಬಗ್ಗೆ ಮೊದಲ ಪುರಾವೆಗಳನ್ನು ಪಡೆದಿದೆ ಎಂದಿದೆ. ಕುಮಾರತುಂಗರವರನ್ನು 1988 ರಲ್ಲಿ ಅವರ ಮನೆ ಬಳಿ ಬಂಧೂಕು ದಾರಿಯೊಬ್ಬ ಹತ್ತಿರದಿಂದ ಗುಂಡು ಹಾರಿಸಿ ಕೊಲೆ ಮಾಡಿದ್ದ. ಆತನನ್ನು ನೋಡಿ ಪ್ರತ್ಯಕ್ಷದರ್ಶಿಗಳು ಆತನನ್ನು ಗುರುತಿಸಿದರೂ ಆತನ ಬಂಧನ ತಕ್ಷಣ ಆಗ ಲಿಲ್ಲ. ಆತನನ್ನು ಹಾಗೂ ಆತನ ಹಲವಾರು ಸಹಚರರನ್ನು ಬಂಧಿಸಿದರೂ ಯಾವುದೇ ಮೊಕದ್ದಮೆ ಹೂಡಲಾಗಲಿಲ್ಲ. ಇಡೀ ತನಿಖೆ ಯನ್ನು ಅಧ್ಯಕ್ಷ ಪ್ರೇಮದಾಸ ಕಾಲದಲ್ಲಿ ಮುಚ್ಚಿಡಲಾಗಿತ್ತು. ಹಲವಾರು ಹಂತಕರ ಸಹಚರರು ಜೈಲಿನಿಂದ ಬಿಡಲ್ಪಟ್ಟರು ಇಲ್ಲವೇ ಮಾಯವಾದರು. ಈ ವರೆಗೆ ಕಮಿಶನ್ ಹಲ ವಾರು ತನಿಖೆಗಳನ್ನು ನಡೆಸಿ ಈ ನಿರ್ಧಾರಕ್ಕೆ ಬಂದಿದೆಯಂತೆ

ಸಿಐಟಿಯು ಬಳ್ಳಾರಿ ಜಿಲ್ಲಾ ಸಮ್ಮೇಳನ

ವಿವಿಧ ರಂಗಗಳಲ್ಲಿ ದುಡಿಯುವ ಕಾರ್ಮಿಕರು ತಮ್ಮ ಬೇಡಿಕೆಗಳ ಈಡೇರಿ ಕೆಗಾಗಿ ನಡೆಸುವ ಹೋರಾಟಗಳೊಟ್ಟಿಗೆ ವ್ಯವಸ್ಥೆಯ ಬದಲಾವಣೆಗೂ ಹೋರಾಡಬೇಕಾದುದು ಇಂದಿನ ಅಗತ್ಯ ಎಂದು ಸಿಐಟಿಯು ಅಖಿಲ ಭಾರತ ಉಪಾಧ್ಯಕ್ಷ ಎಸ್.ಸೂರ್ಯನಾರಾಯಣ ರಾವ್ ಅಭಿಪ್ರಾಯ ಪಟ್ಟರು.

ಅವರು ಸಿಐಟಿಯುನ ಎರಡನೇ ಜಿಲ್ಲಾ ಸಮ್ಮೇಳನವನ್ನು ಉದ್ಘಾಟಿಸಿ ಮಾತನಾಡುತ್ತಿದ್ದರು.

ಮುಂದುವರಿದು ಮಾತನಾಡಿದ ಅವರು ಸರಕಾರಗಳು ಬದಲಾಗುವುದರಿಂದ ಸಮಸ್ಯೆಗಳು ಪರಿಹಾರವಾಗುವುದಿಲ್ಲ, ಬಂಡವಾಳಶಾಹಿ ಪಕ್ಷಗಳಾದ ಕಾಂಗ್ರೆ, ಬಿಜೆಪಿ, ಜನತಾದಳಗಳು ಮಠ-ಮಠಾಧಿಪತಿಗಳ ಕೃಪಾಶೀರ್ವಾದದ ಅಡಿಯಲ್ಲೆ ಹಾಗೂ ಪೂರಕವಾಗುವ ಚೌಕಟ್ಟಿನ ಒಳಗೇ ಕೆಲಸ ಮಾಡುತ್ತವೆ. ಅಂತಹುಗಳ ವಿರುದ್ಧ ಕಾರ್ಮಿಕರು ಸಂಘಟಿತ ಹೋರಾಟ ನಡೆಸಬೇಕಾಗಿದೆ ಎಂದರು.

ಬೃಹತ್ ಕೈಗಾರಿಕೆಗಳು ಜಿಲ್ಲೆಯನ್ನು ಪ್ರವೇಶಿಸುತ್ತಿದ್ದು ಕಾರ್ಮಿಕರ ಸಂಖ್ಯೆ ಹಾಗೂ ಸಮಸ್ಯೆಗಳು ಅಧಿಕವಾಗುತ್ತವೆ. ಈ ಸಂದರ್ಭವನ್ನು ಉಪಯೋಗಿಸಿ ಆರಂಭದಿಂದಲೇ ಕಾರ್ಮಿಕ ಸಂಘಟನೆಯನ್ನು ಪ್ರಬಲ ಗೊಳಿಸಲು ಅವರು ಸಮ್ಮೇಳನಕ್ಕೆ ಕರೆ ನೀಡಿದರು.

ದೇಶದಲ್ಲಿನ ಶೇಕಡ 40 ಜನರಿಗೆ ದಿನಕ್ಕೆ ಒಂದು ಹೊತ್ತೂ ಊಟ ಇಲ್ಲ. ಸುಮಾರು 20 ಲಕ್ಷ ಮಕ್ಕಳು ಅಂಗವಿಕಲರಾಗಿದ್ದಾರೆ. ನಿರುದ್ಯೋಗ ತಾಂಡವವಾಡುತ್ತಾ ಇದೆ. ಇವೆಲ್ಲದಕ್ಕೂ ಪೂರ್ವಜನ್ಮದ ಕರ್ಮ ಕಾರಣವಲ್ಲ. ಈ ವ್ಯವಸ್ಥೆಯಲ್ಲಿನ ದೋಷಗಳೇ ಕಾರಣ. ದಿನದಿನಕ್ಕೂ ರೂಪಾಯಿಯ ಬೆಲೆ ಕುಸಿಯುತ್ತಿದೆ ಎಂದು ಅವರು ನುಡಿದರು.

ಬಿಇಎಫ್‌ಐನ ಜಿಲ್ಲಾ ಅಧ್ಯಕ್ಷ ಅಚ್ಯುತನ್ ಕಾರ್ಯದರ್ಶಿ ಎಸ್. ಲೋಕೇಂದ್ರ, ಕರ್ನಾಟಕ ಪ್ರಾಂತ ರೈತ ಸಂಘ ರಾಜ್ಯ ಕಾರ್ಯದರ್ಶಿ ಯು.ಬಸವರಾಜ್, ಇ.ಆರ್.ಯಲ್ಲಪ್ಪ, ರಾಜ್ಯ ಸರಕಾರಿ ನೌಕರರ ಸಂಘದ ಕೆ.ಎಂ.ಗುರುಸಿದ್ದಮೂರ್ತಿ, ಡಿವೈಎಫ್‌ಐನ ಕಾರ್ಯದರ್ಶಿ ಕೆ.ಎನ್.ರಾಮಾಂಜನೇಯ ಶುಭಕೋರಿ ಮಾತನಾಡಿದ ನಂತರ ಪದಾಧಿಕಾರಿಗಳು ಮತ್ತು 20 ಸದಸ್ಯರ ನೂತನ ಜಿಲ್ಲಾ ಸಮಿತಿಯನ್ನು ಸಮ್ಮೇಳನ ಆಯ್ಕೆ ಮಾಡಿತು.

ಆರಂಭದಲ್ಲಿ ಸಿಐಟಿಯು ಜಿಲ್ಲಾ ಅಧ್ಯಕ್ಷರು ಧ್ವಜಾರೋಹಣ ಮಾಡಿದರು. ಅಂಗನವಾಡಿ ಕಾರ್ಯಕರ್ತರ ಸಂಘದ ಕೆ.ಎಂ.ಎರ್ರಿಸ್ವಾಮಿ ಸ್ವಾಗತಿಸಿದರು.

ಕಳೆದ ಮೂರು ವರ್ಷಗಳ ಹಿಂದೆ ಶಿರಗುಪ್ಪದಲ್ಲಿ ನಡೆದ ಪ್ರಥಮ ಸಮ್ಮೇಳನದಿಂದ ಈವರೆಗೆ ಸಿಐಟಿಯು ನಡೆಸಿದ ಹೋರಾಟ, ಪಡೆದ ಫಲ, ಸಾಗಬೇಕಾ ಗಿರುವ ಹಾದಿ ಕುರಿತು ಕರಡು ವರದಿಯನ್ನು ಜಿಲ್ಲಾ ಕಾರ್ಯದರ್ಶಿ ಎಸ್.ಪ್ರಸನ್ನ ಕುಮಾರ್ ಪ್ರತಿನಿಧಿಗಳ ಅಧಿವೇಶನದಲ್ಲಿ ಮಂಡಿಸಿದರು.

ವಿವಿಧ ಸಂಘಗಳ ಪ್ರತಿನಿಧಿಗಳು ವರದಿಯ ಮೇಲೆ ಚರ್ಚೆ ನಡೆಸಿ ಸಿಐಟಿಯು ಬಲಪಡಿಸುವ ಆಶಯ ವ್ಯಕ್ತಪಡಿಸಿದರು. ಕರಡು ವರದಿಯ ಮೇಲಿನ ಚರ್ಚೆಗೆ ಕಾರ್ಯದರ್ಶಿ ಪ್ರಸನ್ನ ಕುಮಾರ್ ಪ್ರತಿ ಕ್ರಿಯಿಸಿ 'ನಾವು ಸಂಘಟಿತರಾಗಿ, ಶಿಸ್ತುಬದ್ಧ ಹೋರಾಟ ಮಾಡಿದಾಗ ಮಾತ್ರ ಸಮಸ್ಯೆ ಗಳಿಗೆ ಪರಿಹಾರ ಕಾಣುತ್ತೇವೆ. ಸಂಘಟನೆಯ ಸಂದರ್ಭದಲ್ಲಿ ಎದುರಾದ ಸಮಸ್ಯೆಗಳಿಗೆ ಪರಿಹಾರವನ್ನು ಅನುಭವದ ಮೂಲಕ ಬಗೆ ಹರಿಸಿಕೊಳ್ಳಬಹುದು. ವಿದೇಶಿ ಬಂಡವಾಳಿ ಗಾರರು ಆಗಲೇ ನಮ್ಮ ಜಿಲ್ಲೆಯನ್ನು ಪ್ರವೇಶಿ ಸಿದ್ದಾರೆ ಎಂದು ಹರ್ಷ ಪಡುವುದು ಸಲ್ಲದು. ಅವರು ನಮ್ಮ ಕಾರ್ಮಿಕರ ಸಮಸ್ಯೆಗಳನ್ನು ಪರಿಹರಿಸಲು ಬಂದಿಲ್ಲ, ಉದ್ಯೋಗ ಹೆಚ್ಚಿಸಲು ಬಂದಿಲ್ಲ ಎನ್ನುವುದನ್ನು ನಾವು ಮನಗಾಣಬೇಕು' ಎಂದು ನುಡಿದರು.

ಸಮಾರೋಪ ಸಮಾರಂಭವನ್ನು ಉದ್ದೇಶಿಸಿ ಸೂರ್ಯನಾರಾಯಣ ರಾವ್ ಮಾತನಾಡಿದರು.

ಸ್ವಾಗತ ಸಮಿತಿಯ ಕಾರ್ಯದರ್ಶಿ ಹಾಗೂ ಗ್ರಾಮೀಣ ಬ್ಯಾಂಕ್ ನೌಕರರ ಸಂಘದ ಮುಖಂಡ ಸತ್ಯಬಾಬು ವಂದಿಸಿದರು.

ಜಿಲ್ಲಾ ಸಮ್ಮೇಳನದಲ್ಲಿ ಆಯ್ಕೆಯಾದ ಪದಾಧಿಕಾರಿಗಳು ಹಾಗೂ ಸಮಿತಿ ಸದಸ್ಯರು

ಅಧ್ಯಕ್ಷರು-ಸಿ.ರಘುನಾಥ್, ಉಪಾಧ್ಯಕ್ಷರುಗಳು-ಹೆಚ್.ರಾಮಾಂಜನೇಯ, ಹೆಚ್.ಎನ್.ರಾವ್, ಕೆ.ಆನಂದನ್, ನಾಗರತ್ನ, ಎರ್ರಿಸ್ವಾಮಿ, ಕಾರ್ಯದರ್ಶಿ-ಎಸ್.ಪ್ರಸನ್ನ ಕುಮಾರ್, ಜಂಟಿ ಕಾರ್ಯದರ್ಶಿಗಳು-ವೆಂಕಟರಮಣ, ಆರ್.ಎಸ್.ಬಸವರಾಜ್, ಹೆಚ್.ತಿಪ್ಪಯ್ಯ, ವನಜ, ರಾಮುಡು, ಖಜಾಂಚಿ-ವಿ.ಟಿ.ಹನುಮಂತಪ್ಪ

20 ಸದಸ್ಯರ ಕಾರ್ಯಕಾರಿ ಸಮಿತಿ ಆಯ್ಕೆ ಮಾಡಲಾಯಿತು.

ಯಶಸ್ವಿ ಗ್ರಾಮ ಪಂಚಾಯತ್ ನೌಕರರ ಜಿಲ್ಲಾ ಸಮ್ಮೇಳನ

ಕಾರವಾರ: ಉತ್ತರ ಕನ್ನಡ ಜಿಲ್ಲೆಯ ಎಲ್ಲಾ 11 ತಾಲೂಕಿನ 212 ಗ್ರಾಮ ಪಂಚಾಯತ್ ನೌಕರರ ಪ್ರತಿನಿಧಿಗಳು ಇತ್ತೀಚೆಗೆ ಕಾರವಾರ ಎನ್.ಜಿ.ಓ. ಹಾಲ್ ನಲ್ಲಿ ಸಮಾವೇಶ ನಡೆಸಿದರು. ಈ ಸಮಾವೇಶದಲ್ಲಿ ರಾಜ್ಯ ಗ್ರಾಮ ಪಂಚಾಯತ್ ನೌಕರರ ಸಂಘದ ರಾಜ್ಯ ಪ್ರಧಾನ ಕಾರ್ಯದರ್ಶಿ ವಿ.ಪಿ.ಕುಲಕರ್ಣಿ ಮುಖ್ಯ ಅತಿಥಿಯಾಗಿ ಮಾತನಾಡಿ ನೌಕರರ ರಾಜ್ಯ ಮಟ್ಟದ ಬೇಡಿಕೆ ಮತ್ತು ಹೋರಾಟದ ಬಗ್ಗೆ ವಿವರಿಸಿದರು.

ಸಿಐಟಿಯು ಉ.ಕ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಟಿ.ಎಸ್.ನಾಯ್ಕ, ನೌಕರರ ಸಂಘದ ಉ.ಕ.ಜಿಲ್ಲಾಧ್ಯಕ್ಷ ಸುಭಾಸ ಕೊಪ್ಪಿಕರ, ಸಂಘದ ರಾಜ್ಯಸಮಿತಿ ಸದಸ್ಯ ಮಾರುತಿ ನಾಯ್ಕ, ಜಿಲ್ಲಾ ಪ್ರಧಾನ ಕಾರ್ಯದರ್ಶಿ ನಾಗೇಶ್ ನಾಯ್ಕ, ಸಿಐಟಿಯು ಜಿಲ್ಲಾ ಉಪಾಧ್ಯಕ್ಷ ತಿಲಕ ಗೌಡ, ಸಿಪಿಐ(ಎಂ)ನ ಮಂಜುನಾಥ ಫುಲಕರ ಈ ಸಂದರ್ಭದಲ್ಲಿ ಹಾಜರಿದ್ದರು.

ಕೊನೆಯಲ್ಲಿ ಬೃಹತ್ ಮೆರವಣಿಗೆಯನ್ನು ನಡೆಸಿ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಶ್ರೀಮತಿ ನಾಗಲಾಂಬಿಕಾ ದೇವಿಯವರಿಗೆ ಮನವಿ ಕೊಡಲಾಯಿತು.

ಬಂಗಾರದ ಪಟ್ಟಣ ಕಸದ ತೊಟ್ಟಿಯಾಗಬೇಕೆ?

ಸಿಪಿಐ(ಎಂ) ಬಂಗಾರಪೇಟೆ ತಾಲೂಕು ಸಮಿತಿ ಪ್ರಶ್ನೆ

ಬಿಜಿಎಂಎಲ್(ಭಾರತ್ ಚಿನ್ನದ ಗಣಿ ಕಾರ್ಖಾನೆ) ಮತ್ತು ಕರ್ನಾಟಕ ರಾಜ್ಯ ಸರಕಾರ ಕೆಜಿಎಫ್‌ನಲ್ಲಿ ಕಸವನ್ನು ಕಂದು ರಾಶಿ ಹಾಕುವ ಬಗ್ಗೆ ಒಂದು ಖಾಸಗಿ ಕಂಪನಿಯೊಡನೆ ಒಪ್ಪಂದ ಮಾಡಿಕೊಂಡಿವೆ ಎಂಬ ಸುದ್ದಿಯಿದೆ. ಇದನ್ನು ಸಿಪಿಐ(ಎಂ) ಬಂಗಾರಪೇಟೆ ತಾಲೂಕು ಸಮಿತಿ ಬಲವಾಗಿ ವಿರೋಧಿಸಿದೆ. ರಾಜ್ಯ ಸರಕಾರ ತಕ್ಷಣ ಮಧ್ಯ ಪ್ರವೇಶಿಸಿ ಕೆಜಿಎಫ್ ಕುರಿತಂತೆ ಈ ಹಿಂದೆ ನೀಡಿದ ಹಲವಾರು ಭರವಸೆಗಳನ್ನು ಈಡೇರಿಸಬೇಕು, ಕೆಜಿಎಫ್‌ನ್ನು ಉಳಿಸಬೇಕು ಎಂದು ಆಗ್ರಹಪಡಿಸಿದೆ.

ಕೆಜಿಎಫ್ ಪರಿಶಿಷ್ಟ ಜಾತಿ/ಪರಿಶಿಷ್ಟ ಬುಡಕಟ್ಟಿನ ಜನಗಳು ಅತಿ ಹೆಚ್ಚು ಸಂಖ್ಯೆಯಲ್ಲಿ ವಾಸಿಸುವ ಒಂದು ಪಟ್ಟಣ. ಇವರೆಲ್ಲಾ ನೂರು ವರ್ಷಗಳಿಗೂ ಹಿಂದೆ ಚಿನ್ನದ ಗಣಿಗಳಲ್ಲಿ ಕೆಲಸ ಮಾಡಲು ಕರೆತರಲ್ಪಟ್ಟು ನೆಲೆಸಿರುವ ಕುಟುಂಬಗಳವರು. ಚಿನ್ನದ ಗಣಿಗಳನ್ನು ಮುಚ್ಚುತ್ತಿರುವುದರಿಂದ ಈ ಜನಗಳ ಭವಿಷ್ಯ ಮಂಕಾಗಿದೆ. ಅವರಿಗೆ ಜಮೀನಾಗಲಿ, ಬೇರೆ ಯಾವುದೇ ಆಸ್ತಿಯಿಲ್ಲ. ಅವರ ದುಡಿಮೆಯೇ ಅವರ ಆಸ್ತಿ. ಆದರೆ ಅದಕ್ಕೆ ಈ ನಗರದಲ್ಲಿ ಈಗ ಅವಕಾಶವಿಲ್ಲದಂತಾಗಿದೆ. ಇದರಿಂದಾಗಿ ಪ್ರತಿದಿನ 3000 ಮಂದಿ ಹೊಟ್ಟೆಗಾಗಿ ಬೆಂಗಳೂರಿಗೆ ಹೋಗಿ ಬರಬೇಕಾದ ಪರಿಸ್ಥಿತಿ. ಇತ್ತ ನಗರದಲ್ಲಿ ಅಪರಾಧಗಳು, ಇತರ ಸಾಮಾಜಿಕ ಸಮಸ್ಯೆಗಳು ಹೆಚ್ಚಿವೆ. ಹಲವರು ಕೆಲಸ ಹುಡುಕಿಕೊಂಡು ವಲಸೆಹೋಗಿದ್ದಾರೆ.

ಸೈನೈಡ್ ಉಳಿಕೆಗಳ ಬೆಟ್ಟದಂತಹ ರಾಶಿಗಳು ಈ ನಗರದ ಇನ್ನೊಂದು ಸಮಸ್ಯೆ. ಉಬ್ಬಸ ರೋಗ, ಟಿ.ಬಿ., ಮೂಗು ಸೋರುವುದು ಮುಂತಾದ ಶ್ವಾಸಕೋಶಕ್ಕೆ ಸಂಬಂಧಪಟ್ಟ ಕಾಯಿಲೆಗಳಿಗೆ ಇದು ಕಾರಣವಾಗಿದೆ. ಜತೆಗೆ ಗಣಿ ಕಾರ್ಮಿಕರನ್ನು ಪೀಡಿಸುತ್ತಿರುವ ಸಿಲಿಕೋಸಿಸ್ ಕಾಯಿಲೆ - ಗಾಳಿ ಬೆಳಕುಗಳಿಲ್ಲದ ಸಣ್ಣ ಗುಡಿಸಲುಗಳಲ್ಲಿ ವಾಸದಿಂದಾಗಿ ಈ ಕಾಯಿಲೆ ಇನ್ನಷ್ಟು ಭಯಾನಕವಾಗುತ್ತಿದೆ.

ಈ ಎಲ್ಲಾ ಸಮಸ್ಯೆಗಳನ್ನು ಪರಿಹರಿಸುವ ಬದಲು ರಾಜ್ಯ ಸರಕಾರ ಈ ಇಡೀ ನಗರವನ್ನೇ ತಿಪ್ಪೆಗುಂಡಿಯಾಗಿ ಪರಿವರ್ತಿಸುವ ಕೆಲಸಕ್ಕೆ ಕೈ ಹಾಕಿರುವುದನ್ನು, ಕೇಂದ್ರ ರಾಜ್ಯ ಸರಕಾರಗಳು ಈ ನಗರವನ್ನೇ ಕಳಚಿ ಹಾಕಲು ಯೋಚಿಸುತ್ತಿರುವುದನ್ನು ಸಿಪಿಐ(ಎಂ) ತಾಲೂಕು ಸಮಿತಿ ಬಲವಾಗಿ ಖಂಡಿಸಿದೆ. ಯಾವುದೇ ರೀತಿಯ ಪರಿಸರ ಮಾಲಿನ್ಯ ತರುವ ಕೆಲಸವನ್ನು ತಾನು ವಿರೋಧಿಸುವುದಾಗಿ ಹೇಳಿರುವ ಅದು ಕಸರಾಶಿ ಹಾಕುವ ಬದಲು ಈ ನಗರದಲ್ಲಿ ಹೊಸ ಉದ್ದಿಮೆಗಳನ್ನು ಸ್ಥಾಪಿಸಲು ಬಹಳಷ್ಟು ಅವಕಾಶಗಳಿವೆ ಎಂದು ಅದು ಹೇಳಿದೆ. ಈ ಬಗ್ಗೆ ಈಗಾಗಲೇ ಮಂತ್ರಿಗಳು, ಶಾಸಕರು, ಹಲವಾರು ಭರವಸೆಗಳನ್ನು ನೀಡಿದ್ದಾರೆ. ಈಗಿರುವ ಶಾಸಕರು 10000 ಉದ್ಯೋಗವಕಾಶಗಳನ್ನು ನಿರ್ಮಿಸುವುದಾಗಿ ಹೇಳಿದ್ದರೆ, ಕೃಷಿ ಮಂತ್ರಿಗಳು ವಾಲ್ವೋ ಕಾರ್ ತಯಾರಕ ಘಟಕವನ್ನು ಇಲ್ಲಿಗೆ ತರುವುದಾಗಿ ಹೇಳಿದ್ದರು. ಆದರೆ ಅವನ್ನೆಲ್ಲಾ ಮರೆತು ಇದನ್ನು ತಿಪ್ಪೆಗುಂಡಿ ಯಾಗಿಸುವುದನ್ನು ಜನ ಸಹಿಸುವುದಿಲ್ಲ ಎಂದು ಸಿಪಿಐ(ಎಂ) ಸ್ಪಷ್ಟಪಡಿಸಿದೆ.

ಹಲವಾರು ಸಣ್ಣ ಪಟ್ಟಣಗಳನ್ನು, ನಗರಗಳನ್ನು ರಾಜ್ಯ ಸರಕಾರ ತನ್ನ ವಿವಿಧ ಯೋಜನೆಗಳಡಿ ತ್ವರಿತವಾಗಿ ಬೆಳೆಸುತ್ತಿದೆ. ಆದರೆ ಕೆಜಿಎಫ್‌ನ್ನು ಮಾತ್ರ ನಿರ್ಲಕ್ಷಿಸುತ್ತಿದೆಯೇನೋ ಎಂಬ ಭಾವನೆ ಹುಟ್ಟುವಂತೆ ಮಾಡಿದೆ. ಇದನ್ನು ತೊಲಗಿಸಲು ಇಲ್ಲಿಯ ಬಡ ಜನರಿಗೆ ಪರ್ಯಾಯ ಉದ್ಯೋಗವಕಾಶಗಳನ್ನು ನಿರ್ಮಿಸಲು, ಬಿಜಿಎಂಎಲ್‌ನ್ನು ಕೇಂದ್ರ ಸರ್ಕಾರ ಮುಚ್ಚದಂತೆ, ಗಣಿ ಕಾರ್ಮಿಕರ ಮರುವಸತಿಗೆ ಕ್ರಮಗಳನ್ನು ತಕ್ಷಣ ಕೈಗೊಳ್ಳಬೇಕೆಂದು ಸಿಪಿಐ(ಎಂ) ಒತ್ತಾಯಿಸಿದೆ.

ಕೆಜಿಎಫ್ ನಗರವನ್ನು ಕೈಗಾರಿಕಾ ಬೆಳವಣಿಗೆಯ ಕ್ಷೇತ್ರ ಎಂದು ಸಾರಬೇಕು, ಬಿಜಿಎಂಎಲ್‌ನ ವರ್ಕ್‌ಶಾಪ್‌ಗಳ ಪ್ರಯೋಜನ ಪಡೆದು ವ್ಯಾಗನ್ ಮತ್ತು ಲೋಕೋಯಾಟಿವ ಘಟಕಗಳನ್ನು ಸ್ಥಾಪಿಸಬಹುದು. ಇಂಜಿನಿಯರಿಂಗ್ ಮತ್ತು ವಾಹನ ಉದ್ದಿಮೆಗಳನ್ನು ಆರಂಭಿಸಬಹುದು. ಬಿಜಿಎಂಎಲ್‌ನ ಹೆಚ್ಚುವರಿ ಭೂಮಿಯನ್ನು ಉಪಯೋಗಿಸಿ ಸಣ್ಣ ಪ್ರಮಾಣದ ಉದ್ದಿಮೆಗಳನ್ನು ಆರಂಭಿಸಬಹುದು. ಭೂಮಿಗತ ಗಣಿ ನೀರನ್ನು ಬಳಸಿ ಗೇರುಬೀಜ, ಕಬ್ಬು ಇತ್ಯಾದಿ ಕೃಷಿ ನಡೆಸಬಹುದು ಎಂದು ಸಿಪಿಐ(ಎಂ) ಬಂಗಾರಪೇಟೆ ತಾಲೂಕು ಸಮಿತಿ ಈ ನಗರವನ್ನು ಉಳಿಸಿ ಬೆಳೆಸಲು ಪರ್ಯಾಯ ಕ್ರಮಗಳನ್ನು ಸೂಚಿಸಿದೆ.

ಅಣಕ

ನಿಮ್ಮ ಗ್ರಹಗಳ ಗತಿ - ಈ ವಾರ

ಮೇಷ- ಸೈನ್ಯದ ಮಾಜಿ ಜನರಲ್ ಆಗಿದ್ರೆ ಸಿಬಿಐ ನಿಮ್ಮನ್ನು ಬೋಫೋರ್ಸ್ ಬಗ್ಗೆ ವಿಚಾರಣೆ ಮಾಡಬಹುದು. ಈ ವಾರ ಯಾರು ಬರದಿದ್ದರೆ ನಿಮಗೆ ಮುಂದೆ ಏನೂ ತೊಂದರೆ ಆಗಲಾರದು. ನೌಕರಿಯಲ್ಲಿ ಕಿರಿಕಿರಿ. ತಂದೆಗೆ ಅಸಮಾಧಾನ, ಮಗನಿಂದ ಒಳ್ಳೆಯ ಸುದ್ದಿ

ವೃಷಭ -ಮಂತ್ರಿಗಳಾಗಿದ್ದರೆ, ಮಿಲ್ ಮಾಲಿಕರಾಗಿದ್ದರೆ ಕಾರ್ಮಿಕರಿಂದ ತೀವ್ರ ಪ್ರಾಣಾಪಾಯ. ಅವಿತುಕೊಳ್ಳುವುದು ಒಳ್ಳೆಯದು. ಇಲ್ಲವಾದರೆ ಕಾರ್ಮಿಕರ ನಾಯಕರ ಬಂಧನಕ್ಕೆ, ಕಾರ್ಮಿಕರಿಗೆ ಬುದ್ಧಿ ಕಲಿಸಲು ಏರ್ಪಾಡು ಮಾಡುವುದು ಒಳ್ಳೆಯದು. ಯಾತ್ರೆಯಿಂದ ಧನಾಗಮನ, ತಾಯಿಗೆ ಉಪಚಾರ ಖರ್ಚು. ಮಗಳ ಮದುವೆಗೆ ಶುಭ.

ಮಿಥುನ- ಐಎಎಸ್ ಅಧಿಕಾರಿಯಾಗಿದ್ದರೆ ಸಂಬಳದಲ್ಲಿ ದುಬಾರಿ ಏರಿಕೆ. ನಾಲ್ಕನೇ ದರ್ಜೆ ನೌಕರರಾಗಿದ್ದರೆ ನೌಕರಿಗೆ ಅಪಾಯ. ರಜೆಗಳಿಲ್ಲದೆ ಕೆಲಸ ಮಾಡಲು ಅಭ್ಯಾಸ ಮಾಡಿಕೊಳ್ಳುವುದು, ತೆರಿಗೆ ಅಕ್ರಮಗಳ ಪತ್ತೆ ಅಧಿಕಾರಿಗಳಿಗೆ ಧನಲಾಭ. ತಂದೆಗೆ ಜ್ವರಭಾದೆ. ಶ್ರೀಮತಿ ಜತೆ ಜಗಳ, ಸರಕಾರಿ ಕೆಲಸದಲ್ಲಿ ಅಡಚಣೆ, ಗಂಡನಿಂದ ಕಿರಿಕಿರಿ.

ಕಟಕ - ಕಾಂಗ್ರೆಸ್ಸಿಗರಾಗಿದ್ದರೆ ಶನಿಬಾಧೆ. ಪಂಜಾಬಿನ ಸೋಲನ್ನು ಜನರಿಗೆ ವಿವರಿಸಲು ಸಬೂಬು ಹುಡುಕಿ ಉಳಿದವರಿಗಿಂತ ಮೊದಲು ಹೇಳಿಕೆ ಕೊಡುವುದು ಒಳ್ಳೆಯದು. ಎಲ್ಲಾ ಸಬೂಬುಗಳು ಖಾಲಿಯಾಗುವುದರೊಳಗೆ ಕಾಂಗ್ರೆಸ್ಸಿನಲ್ಲಿ ಗಲಿಬಿಲಿ, ಕೇಸರಿಯವರ ನಾಯಕತ್ವ ಟೀಕಿಸಿ, ದೇವೇಗೌಡರ ನಾಯಕತ್ವ ಹೊಗಳಿ ಹೇಳಿಕೆ ಕೊಡುವುದು ಒಳ್ಳೆಯದು, ಶ್ರೀಮತಿಗೆ ಆಲಸ್ಯ, ಮನೆಯಲ್ಲಿ ಬೇಸರ, ಸೋದರಿಗೆ ದಾಂಪತ್ಯದಲ್ಲಿ ಅನಾದರಣೆ.

ಸಿಂಹ- ಖಾಸಗಿ ಬಸ್ ಮಾಲೀಕರಾಗಿದ್ದರೆ ಶುಕ್ರದೆಸೆ, 'ಕೆಎಸ್‌ಆರ್‌ಟಿಸಿ ಖಾಸಗೀಕರಣದ ಘೋಷಣೆ. ಸಿಂಧ್ಯಾರ ಜತೆ ಸಂಪರ್ಕ ಇಟ್ಟುಕೊಳ್ಳುವುದು ಒಳ್ಳೆಯದು. ನಿಮಗೆ ಅನಾರೋಗ್ಯ, ಮಗಳು ಪ್ರಿಯಕರನ ಜತೆ ಓಡಿಹೋಗಬಹುದು.

ಕನ್ಯಾ - ಯಾವುದೇ ಭ್ರಷ್ಟಾಚಾರ ಹಗರಣದಲ್ಲಿ ಭಾಗಿಯಾಗಿ ಇಷ್ಟರವರೆಗೆ ಸಿಕ್ಕಿಬಿದ್ದಿರದಿದ್ದರೆ ಈ ವಾರ ನಿರೀಕ್ಷಣಾ ಜಾಮೀನಿಗೆ ಪ್ರಶಸ್ತ ಸಮಯ. ಬಂಧುಗಳಿಂದ ಖರ್ಚು. ವ್ಯಾಪಾರದಲ್ಲಿ ಲಾಭ. ಗಂಡ-ಅತ್ತೆಯರ ಕಾಟ.

ತುಲಾ - ಮೇಣದ ಬತ್ತಿ, ಜನರೇಟರು, ಎಮರ್ಜೆನ್ಸಿ ಲೈಟು, ಸೀಮೆಎಣ್ಣೆ ಬುಡ್ಡಿ ವ್ಯಾಪಾರಿಗಳಿಗೆ ಲಾಭ. ದುಡ್ಡು ಹೆಚ್ಚಿದ್ದರೆ ಈ ವ್ಯಾಪಾರದಲ್ಲಿ ತೊಡಗಿ. ಬಂಧುಗಳಿಂದ ಕಿರಿಕಿರಿ. ದಾಂಪತ್ಯದಲ್ಲಿ ಬೇಸರ. ಮಗನ ನೌಕರಿ ಯತ್ನದಲ್ಲಿ ಬೇಸರ.

ವೃಶ್ಚಿಕ, ಧನು, ಮಕರ, ಕುಂಭ, ಮೀನ- ಪೆಟ್ರೋಲ್, ಡೀಸಲ್, ಸೀಮೆಎಣ್ಣೆ ಹೊಗೆಯಿಂದ ಗ್ರಹಗಳ ಗತಿ ಕಾಣಿಸುತ್ತಿಲ್ಲ. ಬಹುಶಃ ಗ್ರಹಗಳ ಗತಿಯೇ ನೆಟ್ಟಗಿಲ್ಲ.

ಎಲ್ಲಾ ರಾಶಿಗಳವರಿಗೆ(ಗ್ರಹಗಳ ಗತಿ ಏನೇ ಇರಲಿ)

ಬಸ್ಸು ದರದಲ್ಲಿ ಏರಿಕೆ, ವಿದ್ಯುತ್ ಕಡಿತ, ವಿದ್ಯುತ್ ಬಿಲ್‌ನಲ್ಲಿ ಏರಿಕೆ, ರಾಮನಗರ, ಚಿಕ್ಕನಾಯಕನ ಹಳ್ಳಿಯವರಾಗಿದ್ದರೆ ರಸ್ತೆಯಲ್ಲಿ ಹೋಗುವುದು ಸುರಕ್ಷಿತವಲ್ಲ. ದಳದವರು, ಪೋಲೀಸರು ಕಂಡಾಗ ಅವಿತುಕೊಳ್ಳಿ.

ಸಾದರ ಸ್ವೀಕಾರ

ಕರ್ನಾಟಕ ಏಕೀಕರಣ ಇತಿಹಾಸ
ಡಾ.ಎಚ್.ಎಸ್.ಗೋಪಾಲರಾವ್ ರೂ. 160

ಇಗೋ ಕನ್ನಡ
ಪ್ರೊ. ಜೀ.ವೆಂಕಟಸುಬ್ಬಯ್ಯ ರೂ. 140

ಮನೋರೋಗ ಗೆಲ್ಲಬಹುದೇ?
(ಮನೋರೋಗಿಯ ಆತ್ಮಕಥೆ)
ಸ್ನೇಹಾ ರೂ. 75

ಕುಂಭಕರ್ಣನ ನಿದ್ದೆ
(ಮಕ್ಕಳ ಪದ್ಯಗಳು)
ಎನ್.ಶ್ರೀನಿವಾಸ ಉಡುಪ ರೂ. 12

ಉರಿದ ಬದುಕು
ಶಾಂತರಸ ರೂ. 60

ಆರಳಿಗುಡ್ಡದ ಮೇಲೆ
(ಮಕ್ಕಳ ಕಥೆ)
ಅನುರಾಧಾ ಮೂರ್ತಿ ರೂ. 12

ಕುಟ್ಯಕ್ಕ ಮತ್ತು ಇತರ ಕಥೆಗಳು
ಎಂ.ಟಿ.ವಾಸುದೇವ ನಾಯರ್ ರೂ. 65

ಗೋಧಿಯ ತೆನೆಗಳು
ಸು.ರಂ.ಎಕ್ಕುಂಡಿ ರೂ. 28

ಓದಿ ಕೇಳುವ ಕಥೆಗಳು
ಬಿ.ಕೆ.ತಿರುಮಲಮ್ಮ ರೂ. 18

ತೊದಲುಏಕೆ
ಡಾ.ಜೆ.ಭರತ್‌ರಾಜ್ ರೂ. 15
(ಅನು: ವೈ.ಟಿ.ಬಾಲಕೃಷ್ಣ ಆಚಾರ್ಯ)

ಐರಾವತದ ಕಥೆಗಳು
ಕೆ.ಚಂದ್ರಮೌಳಿ ರೂ. 48


ಸತ್ಯ ಪುರಾಣ
ಬಿ.ಜಿ.ಎಲ್.ಸ್ವಾಮಿ ರೂ. 35

ದೇವರು ದೆವ್ವ ಇರುವುವೇ?
ಮೈ ಮೇಲೆ ಬರುವುವೇ?
ಡಾ.ಸಿ.ಆರ್.ಚಂದ್ರಶೇಖರ್ ರೂ. 12

ಈ ಮೇಲಿನ ಎಲ್ಲಾ ಕೃತಿಗಳ ಪ್ರಕಾಶಕರು

ನವ ಕರ್ನಾಟಕ ಪ್ರಕಾಶನ,
ಎಂಬೆಸಿ ಸೆಂಟರ್, ಕ್ರೆಸೆಂಟ್ ರಸ್ತೆ,
ಬೆಂಗಳೂರು - 560 001

ರವೀಂದ್ರ ಭಾರತಿ ವಿಶ್ವವಿದ್ಯಾನಿಲಯ ನೀಡಿದ ಡಿಲಿಟ್ ಪದವಿಯನ್ನು ಸ್ವೀಕರಿಸುತ್ತಿರುವ ಪೀಟ್ ಸೀಜರ್.



'ವಿ ಶಲ್ ಓವರ್ ಕಮ್..'

ವಿ ಶಲ್ ಓವರ್‌ಕಮ್..

ಹಾಡು ಯಾರಿಗೆ ತಾನೇ ಗೊತ್ತಿಲ್ಲ. ಯಾವುದೇ ಚಳುವಳಿಯ ಉಸಿರು ಇದು. "ಗೆದ್ದೇ ಗೆಲ್ಲುವೆವು ನಾವು ಗೆದ್ದೇ ಗೆಲ್ಲುವೆವು. ಗೆದ್ದೇ ಗೆಲ್ಲುವೆವು ಒಂದು ದಿನ" ಎಂದು ವಿಶ್ವಾಸದಿಂದ ಎದೆ ತುಂಬಿ ಹಾಡುವ ಹಾಡು ಇದು. ಈ ವಿಶ್ವಾಸ, ಇಂತಹ ಹಾಡುಗಳು ಕೊಟ್ಟ ವಿಶ್ವಾಸವೇ ಇಂದು ಹಲವು ಹೊಸ ಇತಿಹಾಸವನ್ನು ಬರೆದಿದೆ. ಇಂತ ಹಾಡುಗಳೇ ರೇಗನ್, ಬುಷ್‌ರ ವಿರುದ್ಧ ದನಿ ಎತ್ತಿವೆ. ಇಂತಹ ಹಾಡುಗಳೇ ಅಣ್ವಸ್ತ್ರಗಳ ವಿರುದ್ಧ ದನಿ ಎತ್ತಿ ಶಾಂತಿಯ ಪತಾಕೆಯನ್ನು ಹಾರಿಸಿವೆ. ಇಂತಹ ಹಾಡುಗಳೇ ಕಾಡು, ಕಣಿವೆಗಳಲ್ಲಿ, ಗಣಿಗಳಲ್ಲಿ ನೊಂದು ಬೆಂದ ಕಾರ್ಮಿಕರ ನೋವನ್ನು ಬಿತ್ತರಿಸಿವೆ. ಹೊಲದಲ್ಲಿದ್ದ ರೈತನ ನಿಟ್ಟುಸಿರನ್ನು ಎಲ್ಲೆಡೆಗೂ ಹರಡಿವೆ.

ಜಗತ್ತಿಗೆ ಹಾಡುಗಳ ಮೂಲಕ ಜನರ ನಿಟ್ಟುಸಿರನ್ನು ಪರಿಚಯಿಸಿದ 'ಗೆದ್ದೇ ಗೆಲ್ಲುವೆವು ಒಂದು ದಿನ' ಎಂದು ವಿಶ್ವಾಸವನ್ನು ಎದೆ ತುಂಬಿ ಹಾಡಿದ ಪೀಟ್ ಸೀಜರ್ ಇತ್ತೀಚಿಗೆ ಬೆಂಗಳೂರು, ಕೇರಳ ಹಾಗೂ ಪಶ್ಚಿಮ ಬಂಗಾಳಕ್ಕೆ ಬಂದು ತಮ್ಮ ಅದೇ, ಜನರಲ್ಲಿ ವಿಶ್ವಾಸ ತುಂಬುವ ಹಾಡುಗಳ ಮೂಲಕ ಎಲ್ಲರನ್ನೂ ಹುಚ್ಚೆಬ್ಬಿಸಿ ಹೋದರು. ಹಾಡುಗಳನ್ನು ಜನರ ನೋವು ಇಲ್ಲವಾಗಿಸಲು ಬಳಸುವಂತೆ ಕರೆ ನೀಡಿ ಹೋದರು.

'ವಿ ಶಲ್ ಓವರ್‌ಕಮ್' ಹಾಡು ಎಲ್ಲರಿಗೂ ಪರಿಚಿತ. ಇದು ನಮ್ಮದೇ ಹಾಡೇನೋ ಎಂಬಂತೆ ಎಲ್ಲರೂ ಬೀದಿ ಬೀದಿಗಳಲ್ಲಿ ದೊಡ್ಡ ಕಂಠದಲ್ಲಿ ಹಾಡಿದ ಹಾಡು ಇದು. ಈ ಹಾಡನ್ನು ಬರೆದು ಲಕ್ಷಾಂತರ ಜನರ ಮುಂದೆ ಲಕ್ಷಾಂತರ ಕಾರ್ಯಕ್ರಮಗಳಲ್ಲಿ ಹಾಡಿದ ಪೀಟ್ ಸೀಜರ್ ಭಾರತಕ್ಕೆ ಭೇಟಿ ನೀಡಿದ್ದರು - 33 ವರ್ಷಗಳ ಬಳಿಕ. 1963ರಲ್ಲಿ ಪಶ್ಚಿಮ ಬಂಗಾಳದಲ್ಲಿ ಎಡಪಕ್ಷಗಳು ಸೇರಿ ಪಾರ್ಕ್ ಸರ್ಕಸ್ ಮೈದಾನದಲ್ಲಿ ಏರ್ಪಡಿಸಿದ್ದ ಯುವಜನರ ರ್‍ಯಾಲಿಯಲ್ಲಿ ಹಾಡಿ ಹುಮ್ಮಸ್ಸು ತುಂಬಿ ಹೋದ ಸೀಜರ್ ಮತ್ತೆ ಬಂದಿದ್ದರು.

ಪೀಟ್ ಸೀಜರ್ ದುಡಿಯುವ ವರ್ಗದ, ಬಡವರ ಹಕ್ಕುಗಳ ಬಗ್ಗೆ ಹಾಡಿದವರು. ಶಾಂತಿ ಮತ್ತು ನ್ಯಾಯಕ್ಕಾಗಿ ಹೋರಾಡಿದವರ ಬಗ್ಗೆ ಹಾಡಿದವರು. ಒಂದು ಸುಂದರ ಜಗತ್ತಿಗಾಗಿ ಹಂಬಲಿಸಿದವರ ಬಗ್ಗೆ, ಪ್ರೀತಿ ಹಾಗೂ ಮಾನವೀಯ ಸಂಬಂಧಗಳ ಬಗ್ಗೆ, ಮಕ್ಕಳು ಹಾಗೂ ಅವರ ಭವಿಷ್ಯದ ಬಗ್ಗೆ ಈ ಜಗತ್ತನ್ನು ಒಂದು ಆರೋಗ್ಯಕರ ಬದುಕುವ ಜಾಗವನ್ನಾಗಿ ಮಾಡುವುದರ ಬಗ್ಗೆ ಹಾಡಿದವರು.

ಪೀಟ್ ಸೀಜರ್ ಈಗ ತಮ್ಮ 77ನೇ ವಯಸ್ಸಿನಲ್ಲಿ ತಮ್ಮ ಪತ್ನಿ ತೋಷಿ ಮತ್ತು ಮೊಮ್ಮಗ ತಾವೋ ಜೊತೆ ಅದೇ ಗಿಟಾರ್ ಹಿಡಿದು ಬಂದಿದ್ದರು. ಪಶ್ಚಿಮ ಬಂಗಾಳದ ರವೀಂದ್ರ ಭಾರತಿ ವಿಶ್ವ ವಿದ್ಯಾಲಯ ಇವರಿಗೆ ಡಿ.ಲಿಟ್. ಪದವಿ ನೀಡಿ ಗೌರವಿಸಿತು. ಇವರಿಗೆ ಡಿ.ಲಿಟ್ ನೀಡಿದಾಗಲಾಗಲೀ, ಅಭಿನಂದನ ಸನ್ಮಾನ ನಡೆಸಿದಾಗಲಾಗಲೀ, ಭಾಷಣ ಮಾಡಿ ಎಂದಾಗಲಾಗಲೀ ಇವರು ಹಾಡಿನ ಹೊಳೆಯನ್ನೇ ಹರಿಸಿದರು.

ಇವರ ಹಾಡಿನ ಶಕ್ತಿಯೇ ಅಂತಹದ್ದು. ಇವರು ಹಾಡುವ ಹಾಡೇ ಜನರ ಸಂಕಷ್ಟಗಳದ್ದು ಅಲ್ಲವೇ? ಹಾಗಾಗಿ ಯಾರೂ ಹಾಡದೆ ಸುಮ್ಮನಿರಲಿಲ್ಲ. ಸೀಜರ್ ದನಿ ಎತ್ತಿದರೆ ಇತರರು ಮರುಧ್ವನಿ ನೀಡಿದರು. ಪಶ್ಚಿಮ ಬಂಗಾಳದಲ್ಲಿ ಸೀಜರ್ 'ವಿ ಶಲ್ ಓವರ್‌ಕಮ್' ದನಿ ಎತ್ತುತ್ತಿದ್ದಂತೆ ಇಡೀ ಸಭಾಂಗಣದಲ್ಲಿದ್ದ ಮೂರು ಸಾವಿರ, ಸಭಾಂಗಣದ ಹೊರಗೂ ಕಿಕ್ಕಿರಿದಿದ್ದ ಎರಡು ಸಾವಿರಕ್ಕೂ ಹೆಚ್ಚು ಜನ ಹಾಡಿ ಕುಣಿದು ಕುಪ್ಪಳಿಸಿದರು. ಸೀಜರ್ ಗೆದ್ದೇ ಗೆಲ್ಲುವೆವು ಎಂದು ವಿಶ್ವಾಸ ವ್ಯಕ್ತಪಡಿಸಿ ಹಾಡಿದಾಗ ಖ್ಯಾತ ಚಲನಚಿತ್ರ ನಿರ್ದೇಶಕ ಮೃಣಾಲ್ ಸೇನ್, ಜ್ಞಾನಪೀಠ ಪ್ರಶಸ್ತಿ ಪಡೆದ ಸುಭಾಷ್ ಮುಖ್ಯೋಪಾಧ್ಯಾಯ, ಸಿಪಿಐ(ಎಂ) ನಾಯಕ ಬಿಮನ್ ಬೋಸ್, ಎಡರಂಗ ಸರಕಾರದ ಸಚಿವರು, ಕಲಾವಿದ ಪಾರಿತೋಶ್ ಸೇನ್, ಚಿತ್ರ ನಿರ್ದೇಶಕಿ ಅಪರ್ಣಾ ಸೇನ್, ಮಾಜಿ ಪೋಲೀಸ್ ಕಮೀಷನರ್ ತುಷಾರ್ ತಾಲೂಕ್ದಾರ್, ಎಲ್ಲರೂ 'ವಿ ಶಲ್‌ಓವರ್‌ಕಮ್' ಹಾಡಿದರು.

1919ರಲ್ಲಿ ಜನಿಸಿದ ಸೀಜರ್ ಹಾರ್ವರ್ಡ್ ವಿಶ್ವವಿದ್ಯಾಲಯದಲ್ಲಿ ಓದುತ್ತಿದ್ದಾಗ ಹಾಡುಗಳ ಆಕರ್ಷಣೆಗೆ ಒಳಗಾಗಿ ಓದನ್ನು ಅರ್ಧಕ್ಕೆ ಬಿಟ್ಟವರು. ಶಾಸ್ತ್ರೀಯ ಸಂಗೀತ ಕಲಿಯುತ್ತಿದ್ದ ಇವರು ತಮ್ಮ ಹದಿಹರೆಯದಲ್ಲೊಮ್ಮೆ ಜಾನಪದ ಸಂಗೀತವನ್ನು ಕೇಳಿ ಅದರತ್ತ ಆಕರ್ಷಿತರಾದರು. ಜಾನಪದ ಗೀತೆಗಳಲ್ಲಿದ್ದ ಜನರ ನೋವು, ಸಂತೋಷ ಎಲ್ಲವೂ ಇವರನ್ನು ಬೆರಗಾಗಿಸಿತು. ಜನರ ನೋವಿಗೆ ಹಾಡಾಗುವ ತೀರ್ಮಾನ ತೆಗೆದುಕೊಂಡಿದ್ದರು. ತಮ್ಮ 16ನೇ ವಯಸ್ಸಿನಲ್ಲಿ ಈ ನಿರ್ಧಾರ ಕೈಗೊಂಡ ಸೀಜರ್ ಅಂದಿನಿಂದ ಈ 77ನೇ ವಯಸ್ಸಿನವರೆಗೂ ಗಿಟಾರ್ ಹಿಡಿದು ಜನರ ಮಧ್ಯೆ, ಕಾರ್ಮಿಕ ಚಳುವಳಿ ನಡೆದಾಗ, ಜನಪರ ಹೋರಾಟಗಳು ನಡೆದಾಗ ಅವರ ಮಧ್ಯೆ ಹಾಡುತ್ತಲೇ ನಡೆದಿದ್ದಾರೆ.

'ನಾನು ಏಳನೆಯ ವಯಸ್ಸಿನಲ್ಲಿಯೇ ಕಮ್ಯುನಿಸ್ಟ್ ಆದೆ' ಎನ್ನುವ ಸೀಜರ್ ಅವರ ಹಾಡುಗಳನ್ನು ಕೇಳಿ ಅಮೇರಿಕಾ ಸರಕಾರ ಬೆಚ್ಚಿಬಿದ್ದಿದೆ. ಇವರ ವಿರುದ್ಧ ಆರೋಪ ಹೊರಿಸಿ ದೀರ್ಘಕಾಲ ವಿಚಾರಣೆ ನಡೆಸಿದೆ. ಮಾತ್ರವಲ್ಲ ರೇಡಿಯೋ, ಟೀವಿಗಳಲ್ಲಿ ಹತ್ತಾರು ವರ್ಷಗಳ ಕಾಲ ಹಾಡದಂತೆ ನೋಡಿಕೊಂಡಿದೆ. ಆದರೆ ಹಾಡುಗಳನ್ನು ಬಂದೀಖಾನೆಗೆ ತಳ್ಳಲು ಸಾಧ್ಯವೇ? ಸೀಜರ್ ಹುಟ್ಟು ಹಾಕಿದ ಹಾಡುಗಳು ಜಗತ್ತಿನಾದ್ಯಂತ ಸಂಚಾರ ಮಾಡುತ್ತಲೇ ಇವೆ.

'ನಾನು ಲಕ್ಷಾಧೀಶರಿಲ್ಲದ ವಿಶ್ವವನ್ನು ನೋಡಬೇಕು' ಎಂದು ಹಂಬಲಿಸುವ ಸೀಜರ್ ಅವರು ದುಡಿಯುವ ಕಾರ್ಮಿಕನೇ ಶ್ರೀಮಂತನಿಗಿಂತ ಶ್ರೀಮಂತ ಎನ್ನುತ್ತಾರೆ. ಮಕ್ಕಳಿಗಾಗಿ ಹಾಡುವ ಜೋಗುಳದ ಹಾಡುಗಳೂ ಸದಾ ಹೋರಾಟದ ಹಾಡುಗಳಾಗಬಹುದು ಎಂಬುದು ಈಗ ಮರೆತುಹೋಗುತ್ತಿವೆ ಎಂದು ಅವರು ವಿಷಾದಿಸಿದರು.

'ನನ್ನ ಕೈಯಲ್ಲೊಂದು ಸುತ್ತಿಗೆ ಇದ್ದಿದ್ದರೆ....' 'ಆ ಎಲ್ಲಾ ಹೂವುಗಳು ಎಲ್ಲಿ ಹೋದವು...' 'ನನ್ನ ಮೇಲೊಂದು ಬೆಳಕು ಚೆಲ್ಲು' 'ನಮ್ಮ ಮೇಲೊಂದು ನೀಲಿ ಆಕಾಶ'ದಂತಹ ಹಾಡುಗಳು ಜನರ ಮನಸ್ಸನ್ನು ಸೂರೆಗೊಂಡವು.

1960ರಲ್ಲಿ ಅಮೇರಿಕಾದಲ್ಲಿ ನಾಗರಿಕ ಹಕ್ಕುಗಳಿಗಾಗಿ ನಡೆದ ಭಾರೀ ಹೋರಾಟದಲ್ಲಿ ತಾವು 'ವಿ ಶಲ್ ಓವರ್‌ಕಮ್' ಬರೆದು ಹಾಡಿದ್ದನ್ನು ನೆನಪಿಸಿಕೊಂಡರು.

ಸೀಜರ್ ಪಶ್ಚಿಮ ಬಂಗಾಳಕ್ಕೆ ಬಂದಾಗ ಜ್ಯೋತಿ ಬಸು ಅವರನ್ನು ಭೇಟಿ ಮಾಡಿ ಮಾತನಾಡಿದರು. ಸಂಜೆ ನಡೆದ ಕಿಕ್ಕಿರಿದಿದ್ದ ಕಾರ್ಯಕ್ರಮದಲ್ಲಿ ಸೀಜರ್ 'ನಾನು ಪಶ್ಚಿಮ ಬಂಗಾಳಕ್ಕೆ ಬಂದರೆ ನನ್ನ ಹುಟ್ಟೂರಿಗೆ ಬಂದಂತಾಗುತ್ತದೆ' ಎಂದರು.

ಪಶ್ಚಿಮ ಬಂಗಾಳದಲ್ಲಿ ಎಲ್ಲರೂ ಸೀಜರ್‌ರೊಡನೆ ಹಾಡಿ ಹುಟ್ಟೂರಿನಿಂದ ಹೊರಟ ಆತ್ಮೀಯನಂತೆ ಬೀಳ್ಕೊಟ್ಟರು.

KRNM/BGS-405 MAG (2) PRB DECR 319-79/79

ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ), ಕರ್ನಾಟಕ ರಾಜ್ಯ ಸಮಿತಿಯ ಪರವಾಗಿ ಮುದ್ರಣ ಮತ್ತು ಪ್ರಕಾಶನ: ಪಿ. ರಾಮಚಂದ್ರರಾವ್
ಸಂಪಾದಕರು: ಪಿ.ರಾಮಚಂದ್ರರಾವ್, ಸಂಪಾದಕೀಯ ಕಛೇರಿ: ನಂ. 12, 18ನೇ ಅಡ್ಡರಸ್ತೆ ಸಂಪಂಗಿರಾಮನಗರ, ಬೆಂಗಳೂರು - 27 ಫೋನ್ ನಂ. 2236462, ವ್ಯವಸ್ಥಾಪಕ ಕಛೇರಿ: ನಂ.24, 5ನೇ ಮುಖ್ಯ ರಸ್ತೆ ಗಾಂಧಿನಗರ, ಬೆಂಗಳೂರು-9 ಮುದ್ರಣ: ಹನಿ ಪ್ರಿಂಟರ್ಸ್, ಕ್ವೀನ್ಸ್ ರಸ್ತೆ ಬೆಂಗಳೂರು